# ಯೋಜನಾ

ನವೆಂಬರ್ 2023

ಅಭಿವೃದ್ಧಿ ಮಾಸಪತ್ರಿಕೆ




**ಪ್ರಧಾನ ಲೇಖನ**

## ಜಿ20: ಭೂಮಿ, ಜನತೆ, ಶಾಂತಿ ಮತ್ತು ಸಮೃದ್ಧಿ

ಅಮಿತಾಭ್ ಕಾಂತ್

**ವಿಶೇಷ ಲೇಖನ**

## ಭಾರತವನ್ನು ವಿಶ್ವ ವೇದಿಕೆಯಲ್ಲಿರಿಸಿದ ಜಿ20 ಶೃಂಗಸಭೆ

ಹರ್ಷವರ್ಧನ್ ಶ್ರಿಂಗ್ಲಾ

# ಭಾಷಿಣಿ ಆ್ಯಪ್

ಜಿ20 ಶೃಂಗಸಭೆಯಲ್ಲಿ ರಶಿಯಾದ ಪ್ರತಿನಿಧಿಯೊಬ್ಬರ ಪ್ರಶ್ನೆಗೆ 'ಭಾಷಿಣಿ' ಅವರ ಮಾತೃಭಾಷೆಯಲ್ಲಿ ಪ್ರತಿಕ್ರಿಯಿಸಿದಾಗ ಅವರು ಬಹಳ ಆನಂದದಿಂದ ಆಶ್ಚರ್ಯ–ಚಕಿತರಾದರು. ಕೆಲವು ವರ್ಷಗಳ ಹಿಂದೆ ಇದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ಇದು ಭವಿಷ್ಯದತ್ತ ಒಂದು ಇಣುಕು ನೋಟ ಮಾತ್ರ.ತಂತ್ರಜ್ಞಾನವು ನಮ್ಮ ಜೀವನದಲ್ಲಿ ತರಬಹುದಾದ ಕೆಲವು ಸಾಧ್ಯತೆಗಳನ್ನು ಅಂತಾರಾಷ್ಟ್ರೀಯ ಮಾಧ್ಯಮ ಕೇಂದ್ರ ಕೋಣೆಯಲ್ಲಿರುವ ಡಿಜಿಟಲ್ ಇಂಡಿಯಾ ಎಕ್ಸಪಿರಿಯನ್ಸ್ ಝೋನ್‌ನಲ್ಲಿ ಸಾಕ್ಷಾತ್ಕರಿಸ–ಲಾಗಿತ್ತು. ಯಂತ್ರದೊಂದಿಗೆ ಸಂಭಾಷಿಸಿದ ಪ್ರತಿನಿಧಿಗಳು ತಮ್ಮ ತಾಯ್ನಾಡಿನಲ್ಲೇ ಇರುವಂತಹ ಅನುಭವ ಪಡೆದರು ಮತ್ತು ರಶಿಯನ್ ಭಾಷೆಯಲ್ಲಿಯೇ ಜಿ20 ಹಣಕಾಸು ಟ್ರ್ಯಾಕ್‌ನಲ್ಲಿ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಪಡೆಯಲು ಅವರಿಗೆ ಸಾಧ್ಯವಾಯಿತು. ಶೃಂಗಸಭೆಯ ಸಮಯದಲ್ಲಿ ಜಿ20 ಯ ಪ್ರತಿನಿಧಿಗಳಿಗೆ ಕೆಲವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಪ್ರದರ್ಶಿಸುವ ಉದ್ದೇಶದಿಂದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಕೈಗೊಂಡ ಅತ್ಯಾಧುನಿಕ ಉಪಕ್ರಮದಿಂದಾಗಿ ಭಾಷಿನಿ ಮತ್ತು ಅದರ ಬಾಟ್ ಕಾರ್ಯವೈಖರಿ ಮೂಡಿಬಂದಿತು

'ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯ' ಎಂಬ ಭಾರತದ ಜಿ20 ಯ ಅಧ್ಯಕ್ಷತೆಯ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ಡಿಜಿಟಲ್ ಮೂಲಸೌಕರ್ಯದಲ್ಲಿ ಭಾರತದ ಅತ್ಯದ್ಭುತ ಪಾಲ್ಗೊಳ್ಳುವಿಕೆಯಲ್ಲಿ ಗಮನ ಕೇಂದ್ರೀಕರಿಸಿದಂತಹ ಪ್ರದರ್ಶನದ ಅನುಭವವನ್ನು ಅವರು ಹೊಂದಿದರು. ಇದು ಭಾಷೆಯ ಇತಿಮಿತಿಯನ್ನು ಮೀರಿ ಭಾಷೆಗಳೊಂದಿಗೆ ಸಮನ್ವಯಗೊಳಿಸುವ ಡಿಜಿಟಲ್ ಸ್ವರೂಪದ ಮಾಧ್ಯಮವಾಗಿದೆ. ಡಿಜಿಟಲ್ ವಿಶ್ವಕ್ಕೆ ಇದು ಧ್ವನಿಯಾಧಾರಿತ ಪರಿಚಿತತೆಯ ಅಪ್ಯಾಯ–ಮಾನವಾದ ಸ್ವಾಗತವನ್ನು ನೀಡುತ್ತದೆ. ಇದು ಪ್ರತಿಯೊಬ್ಬ ಭಾರತೀಯನಿಗೆ ಅಂತರ್ಜಾಲದ ನ್ಯಾವಿಗೇಶನ್ ಮಾಡುವ ಸಾಮರ್ಥ್ಯವನ್ನು ಒದಗಿಸುತ್ತದೆ ಮತ್ತು ತಮ್ಮದೇ ಸ್ಥಳೀಯ ಭಾಷೆಯಲ್ಲಿ ಡಿಜಿಟಲ್ ಸೇವೆಗಳನ್ನು ಬಳಸಿಕೊಳ್ಳುವಂತೆ ಸಶಕ್ತಗೊಳಿಸುವುದು ಇದರ ಉದ್ದೇಶವಾಗಿದೆ. ಇದು ಜನರಿಗೆ ಉತ್ತಮ ತಿಳಿವಳಿಕೆಯುಳ್ಳ ನಾಗರಿಕರಾಗಲು ಮತ್ತು ಅಮೃತ್ ಕಾಲದಲ್ಲಿ ಜನ್ ಭಾಗಿದಾರಿ ಮೂಲಕ ವಿಕಸಿತ ಭಾರತಕ್ಕೆ ಅಭೂತಪೂರ್ವ ಕೊಡುಗೆ ನೀಡಲು ಸಕ್ಷಮಗೊಳಿಸುತ್ತದೆ. ಭಾಷಿಣಿ ಮಾಂತ್ರಿಕತೆಯನ್ನು ವೀಕ್ಷಿಸಲು, ಅದರ ವರ್ಚುವಲ್ ತಾಣಕ್ಕೆ ಭೇಟಿ ನೀಡಬೇಕಾಗುತ್ತದೆ:

https://www.bhashini. gov.in/en/.

# ಮಧುಬನಿ ಕಲೆ

ನವದೆಹಲಿಯ ಜಿ20 ಶೃಂಗಸಭೆಯ ಸದ್ದು ಗದ್ದಲದ ಕಾರಿಡಾರ್‌ಗಳ ಮಧ್ಯೆ, ಬಿಹಾರದ ಹೃದಯಭಾಗವಾದ ಮಿಥಿಲಾ ನಿವಾಸಿ ಹಿರಿಯ ಪ್ರತಿಭೆ ಶ್ರೀಮತಿ ಶಾಂತಿದೇವಿ ಅವರನ್ನು ನಾವು ಭೇಟಿಯಾದೆವು. ಅವರ ಹೆಸರು ಅನೇಕರಿಗೆ ತಿಳಿಯದಿರಬಹುದು, ಅವರ ಸೊಗಸಾದ ಮಧುಬನಿ ವರ್ಣಚಿತ್ರಗಳು ಅವರ ಬಗ್ಗೆ ಕೇವಲ ಮೆಚ್ಚುಗೆಯನ್ನು ಮಾತ್ರವಲ್ಲದೆ ಅವರ ಅಸಾಧಾರಣ ಕರಕುಶಲತೆಗೆ ರಾಷ್ಟ್ರೀಯ ಪ್ರಶಸ್ತಿಯನ್ನು ಕೂಡ ತಂದುಕೊಟ್ಟಿವೆ.



ಮಧುಬನಿ ಚಿತ್ರಕಲೆಯು ಬಿಹಾರದ ಮಿಥಿಲಾ ಪ್ರದೇಶದಲ್ಲಿ ಜನ್ಮ ತಳೆದ ಭೌಗೋಳಿಕ ಸೂಚನೆ (ಜಿಐ)– ಯನ್ನು ಸೂಚಿಸುವ ಕಲಾ ಪ್ರಕಾರವಾಗಿದೆ. ಇದು 2,500 ವರ್ಷಗಳಷ್ಟು ಪುರಾತನ ಇತಿಹಾಸವನ್ನು ಹೊಂದಿದೆ. ಅದರ ಸೂಕ್ಷ್ಮ ವಿವರಗಳು ಮತ್ತು ರೋಮಾಂಚಕ ಬಣ್ಣಗಳಿಂದಾಗಿ ಇದು ವಿಶ್ವದಾದ್ಯಂತ ಪ್ರಸಿದ್ಧವಾಗಿದೆ. ಕಲಾವಿದರು ನೈಸರ್ಗಿಕ ವರ್ಣದ್ರವ್ಯಗಳು ಮತ್ತು ಎಳೆಯ ಮರದ ಕೊಂಬೆಗಳಿಂದ ಮಾಡಿದ ಕುಂಚಗಳನ್ನು ಬಳಸಿ ಈ ಕಣ್ಣು ಕೋರೈಸುವ ಮತ್ತು ಸಾಂಸ್ಕೃತಿಕ ಮಹತ್ವ ಸಾರುವ ಕಲಾಕೃತಿಗಳನ್ನು ರಚಿಸುತ್ತಾರೆ. ಮಧ್ಯಮ ಗಾತ್ರದ ಒಂದು ಕಲಾಕೃತಿಯನ್ನು ರಚಿಸಲು ಕಲಾವಿದರ ಅಸಾಧ್ಯ ತಾಳ್ಮೆ ಮತ್ತು ಸಮರ್ಪಣೆಯ ಅವಶ್ಯಕತೆಯಿದೆ ಮತ್ತು ಈ ಪ್ರತಿಭಾವಂತ ಕಲಾವಿದರು ಪ್ರತಿಯೊಂದು ಮೇರುಕೃತಿಗೆ 7–10 ದಿನಗಳನ್ನು ಮೀಸಲಿಡುತ್ತಾರೆ.



ಸಾಂಕ್ರಾಮಿಕ ರೋಗ ಆಕ್ರಮಿಸುವ ಮೊದಲು, ಶ್ರೀಮತಿ ಶಾಂತಿದೇವಿಯವರು ತಮ್ಮ ಕಲಾಕೃತಿಗಳನ್ನು ತಲಾ 5,000 ರೂಪಾಯಿಗಳ ಯೋಗ್ಯ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದರು, ಮತ್ತು ತಮ್ಮ ಕುಟುಂಬಕ್ಕೆ ಸುಸ್ಥಿರ ಜೀವನೋಪಾಯವನ್ನು ಒದಗಿಸುತ್ತಿದ್ದರು. ಕೊವಿಡ್–19 ಸಾಂಕ್ರಾಮಿಕವು ಅವರ ಕಲಾಕೃತಿಗಳ ಮಾರಾಟದಲ್ಲಿ ಕುಂಠಿತಗೊಳ್ಳುವಂತೆ ಮಾಡಿತು, ಅವರನ್ನು ಆರ್ಥಿಕ ಅನಿಶ್ಚಿತತೆಗೆ ದೂಡಿತು. ಆದರೂ, ನಾವು ಅವರೊಂದಿಗೆ ಮಾತನಾಡಿದಾಗ, ಅವರ ಆಶಾವಾದ ಮತ್ತು ಉತ್ಸಾಹವು ಅಪರಿಮಿತವಾಗಿತ್ತು. ನಾವು ಅವರ ಕುಂಚದ ಪ್ರತಿಯೊಂದು ಚಲನೆಯನ್ನು ಎಚ್ಚರಿಕೆಯಿಂದ ಚಿತ್ರ ರಚಿಸುವುದನ್ನು ನೋಡಿದಾಗ, ಅವರ ಕೈಂಕರ್ಯವು ಕೇವಲ ಜೀವನೋಪಾಯದ ಸಾಧನಕ್ಕಿಂತಲೂ ಮೀರಿದ್ದಾಗಿದೆ ಎಂಬುದು ಸ್ಪಷ್ಟವಾಯಿತು. ಇದು ಪ್ರೀತಿಯ ಶ್ರಮ, ಮಧುಬನಿ ಕಲೆಯ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವುದಕ್ಕಾಗಿ ಸಮರ್ಪಣೆ ಮತ್ತು ಎಂಥದೇ ಪ್ರತಿಕೂಲ ಸ್ಥಿತಿಯನ್ನು ಎದುರಿಸುವ ದೃಢತೆಯ ಸಂಕೇತವಾಗಿದೆ.

ಮೂಲ: ಪಿಐಬಿ

ನವೆಂಬರ್ 2023 | ಸಂಚಿಕೆ–4 Issue-4 | ಸಂಪುಟ–39 Volume-39

# ಯೋಜನಾ
YOJANA Kannada

ಮುಖ್ಯ ಸಂಪಾದಕರು
**ಮನೋಗ್ಯಾನ್ ರಾಣಿಪಾಲ್**

ಹಿರಿಯ ಸಂಪಾದಕ
**ಯಶವಂತ್ ಶಹನಾಯಿ**

ನಮ್ಮ ಪ್ರತಿನಿಧಿಗಳು
**ಅಹಮದಾಬಾದ್ : ಸುಮನ್‌ಬೆನ್ ಎ. ಮಚ್ಚರ್, ಬೆಂಗಳೂರು : ಯಶವಂತ್ ಶಹನಾಯಿ ಭುವನೇಶ್ವರ : ಇತಿಶ್ರೀ ಸಿಂಗ್ ರಾಥೂರ್ ಚೆನ್ನೈ : ಸಂಜಯ್ ಘೋಷ್ ಗುವಾಹತಿ : ಮಾರೂಫ್ ಆಲಂ ಹೈದರಾಬಾದ್ : ಕೃಷ್ಣ ವಂದನಾ ಪಿ ಜಲಂಧರ್ : ಗಗನ್‌ದೀಪ್ ಕೌರ್ ದೇವಗನ್ ಕೋಲ್ಕತ್ತಾ: ಸುಮಿತಾ ಚಕ್ರವರ್ತಿ ಮುಂಬಯಿ : ಸಂಗೀತಾ ಗೋಡ್ಬೋಲೆ ತಿರುವನಂತಪುರಂ : ಸುಧಾ ಎಸ್. ನಂಬೂದ್ರಿ**

ಜಂಟಿ ನಿರ್ದೇಶಕರು (ಮುದ್ರಣ)
**ಡಿ.ಕೆ.ಸಿ. ಹೃದಯ್‌ನಾಥ್**

ಮುಖಪುಟ ವಿನ್ಯಾಸ
**ಬಿಂದೂ ವರ್ಮಾ**

ಯೋಜನೆಯ ಸಂದೇಶವನ್ನು ಎಲ್ಲ ಜನರಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ..........

ಸಂಪಾದಕೀಯ 2

ವಿಶ್ವಪರಂಪರೆ ಪಟ್ಟಿಯಲ್ಲಿ ಹೊಯ್ಸಳ ಕಲಾ ದೇಗುಲಗಳು 3
* ಡಾ. ಶಲ್ವಪ್ಪಿಳ್ಳೈ ಅಯ್ಯಂಗಾರ್

ಜಿ20: ಭೂಮಿ, ಜನತೆ, ಶಾಂತಿ ಮತ್ತು ಸಮೃದ್ಧಿ 9
* ಅಮಿತಾಭ್ ಕಾಂತ್

ಭಾರತವನ್ನು ವಿಶ್ವ ವೇದಿಕೆಯಲ್ಲಿರಿಸಿದ ಜಿ20 ಶೃಂಗಸಭೆ 14
* ಹರ್ಷವರ್ಧನ್ ಶ್ರಿಂಗ್ಲಾ

ವರ್ತುಲ ವಿಶ್ವ ಆರ್ಥಿಕತೆ ವಿನ್ಯಾಸದೆಡೆಗೆ 19
* ಅತುಲ್ ಬಗ್ಗೆ ** ಮನಿಷಾ ಚೌಧರಿ

ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಅಭಿವೃದ್ಧಿ ಒಪ್ಪಂದ 22
* ಲೀನಾ ನಂದನ್

'ಮೇರಾ ಯುವ ಭಾರತ್'ಗೆ ಚಾಲನೆ, 'ನನ್ನ ಮಣ್ಣು ನನ್ನ ದೇಶ'ಕ್ಕೆ ಗೌರವ 25

"1857ರ ಜನಕ್ರಾಂತಿ–ನೆನಪಿಗೆ ಸೇರಿದ ಹುತಾತ್ಮರು' ಪುಸ್ತಕ ಬಿಡುಗಡೆ 28

ಡಿಜಿಟಲ್ ಆರ್ಥಿಕತೆಯಲ್ಲಿ ಭದ್ರತೆ, ವಿಶ್ವಾಸ ನಿರೂಪಣೆ 29
* ಅಭಿಷೇಕ್ ಸಿಂಗ್

ಡಿಜಿಟಲ್ ಮೂಲ ಸೌಕರ್ಯ ಮತ್ತು ಸಾರ್ವಜನಿಕ ಸಹಭಾಗಿತ್ವ 33
* ಆಕಾಶ್ ತ್ರಿಪಾಠಿ

ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ 37
* ಡಾ. ಸಮೀರ್ ಪಾಟೀಲ್ ** ಶಿಮೋನಾ ಮೋಹನ್

ಭಾರತದಲ್ಲಿ ಇಂಧನ ಪರಿವರ್ತನೆ 40
* ಭೂಪಿಂದರ್ ಸಿಂಗ್‌ಭಲ್ಲಾ

ನೆರೆ, ಬರ ಪರಿಹಾರ ಮತ್ತು ಸಂಸ್ಕರಿತ ನೀರಿನ ಮರುಬಳಕೆಯ ಪರಂಪರೆ 44
* ಡಾ. ಹರಿಹರ ಶ್ರೀನಿವಾಸರಾವ್

ಕನ್ನಡ ಕಾವ್ಯಗಳಲ್ಲಿ ವಿಶ್ವಕುಟುಂಬದ ಚಿಂತನೆಗಳು 50
* ಡಾ. ರಾಜಶೇಖರ ಜಮದಂಡಿ

ಮನದ ಮಾತು 52

**ಯೋಜನಾ ಚಂದಾ ವಿವರ**
ಒಂದು ವರ್ಷಕ್ಕೆ 230.00
**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**
Log on to
**http://publicationsdivision.nic.in/,**
*in collaboration with* **bharatkosh.gov.in**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

www.publicationsdivision.nic.in @ DPD_India @publicationsdivision @dpd_india

## ಸಂಪಾದಕೀಯ

# ಜನ ಪರ, ಭೂಮಿ ಪರ




ವಿಶ್ವ ಇಂದು ಸಂಘರ್ಷ, ಬಿಕ್ಕಟ್ಟು, ಸ್ಥಳಾಂತರ, ಹವಾಮಾನ ಬದಲಾವಣೆ, ನೈಸರ್ಗಿಕ ದುರಂತಗಳು, ರೋಗಗಳು, ಹಣಕಾಸು ಅನಿಶ್ಚಿತತೆ, ಅಸಮಾನತೆ ಮೊದಲಾದ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳಿಂದ ಮಕ್ಕಳು ಮತ್ತು ಮಹಿಳೆಯರೇ ಹೆಚ್ಚು ತೊಂದರೆಗೀಡಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಮನುಷ್ಯರ  ಬವಣೆಯನ್ನು ಕನಿಷ್ಠಗೊಳಿಸಲು ಮತ್ತು ಎಲ್ಲರ – ಸಮೃದ್ಧಿ ಮತ್ತು ಉತ್ಥಾನಕ್ಕಾಗಿ ಸದೃಢವಾದ ಉಪಕ್ರಮ ಮತ್ತು ಸುಸ್ಥಿರವಾದ ಸಹಕಾರದ ಅಗತ್ಯವಿದೆ. ಈ ನಿಟ್ಟಿನಲ್ಲಿ ನೀತಿ – ನಿರ್ಧಾರ ನಿರೂಪಕರು, ಜಾಗತಿಕ ಸಮುದಾಯ, ಅಂತಾರಾಷ್ಟ್ರೀಯ ಸಂಘಟನೆಗಳು, ಸರ್ಕಾರಗಳು, ನಾಗರಿಕ ಸಮಾಜ – ಹೀಗೆ ಸಂಬಂಧಪಟ್ಟ ಎಲ್ಲರೂ ಸಹಯೋಗದಲ್ಲಿ ನಮ್ಮ ಜನತೆ ಮತ್ತು ಭೂಮಿಯ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ಶ್ರಮಿಸಬೇಕಿದೆ. ಈ ಹಿನ್ನೆಲೆಯಲ್ಲಿ ಅನೇಕ ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರಾತ್ಮಕ ನಿರ್ದೇಶನ ಒದಗಿಸುವ ನಿಟ್ಟಿನಲ್ಲಿ ಭಾರತದ ಜಿ20 ಅಧ್ಯಕ್ಷತೆ ಮಹತ್ವದ್ದೆನಿಸಿತು.

ಒಂದೇ ಭೂಮಿ, ಒಂದೇ ಕುಟುಂಬ ಮತ್ತು ಒಂದೇ ಭವಿಷ್ಯ ಘೋಷಣೆಯ ಸ್ಫೂರ್ತಿಗೆ ಸಮನಾಗಿ ಜಿ20 ಶೃಂಗಸಭೆಯ ನವದೆಹಲಿ ನಾಯಕರ ಘೋಷಣೆ ಕ್ರಿಯಾ ಬಿಂದುಗಳನ್ನು ಮತ್ತು ನಿರ್ದೇಶನಗಳನ್ನು ಒಳಗೊಂಡ ಸದೃಢವಾದ ಸಂಕಲ್ಪಗಳನ್ನು ಸಾರಿತು. ವಿಶ್ವಯುದ್ಧದ ನಂತರದ ಎಂಟು ದಶಕಗಳ ಅವಧಿಯಲ್ಲಿ ಜಗತ್ತು ಅಪಾರ ಬದಲಾವಣೆಗಳಿಗೆ ಸಾಕ್ಷಿಯಾಗಿದೆ. ಆರ್ಥಿಕ ಬೆಳವಣಿಗೆ, ದಾಸ್ಯ ವಿಮೋಚನೆ, ತಾಂತ್ರಿಕ ಪ್ರಗತಿ, ಉತ್ತಮ ಆರೋಗ್ಯ ಮೂಲ ಸೌಕರ್ಯಗಳು, ವಿವಿಧ ವಲಯಗಳಲ್ಲಿ ಸುಧಾರಣೆ, ಅಂತಾರಾಷ್ಟ್ರೀಯ ಸಹಕಾರ – ಹೀಗೆ ಚಿತ್ರಣದಲ್ಲಿ ವ್ಯಾಪಕ ರೂಪಾಂತರವಾಗಿದೆ. 21ನೇ ಶತಮಾನದ ಸಮಕಾಲೀನ ಅಂತರ ಸಂಪರ್ಕಿತ ಜಾಗತಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಬಹುಮುಖ ಉಪಕ್ರಮಗಳು ದಿನನಿತ್ಯದ ಅಗತ್ಯವೆನಿಸಲಾರಂಭಿಸಿವೆ. ಅಂತಾರಾಷ್ಟ್ರೀಯ ಅಭಿವೃದ್ಧಿ ಹಣಕಾಸು ವ್ಯವಸ್ಥೆ ಎಲ್ಲರನ್ನೂ ಒಳಗೊಳ್ಳುವಂತೆ ಹಾಗೂ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳ ದುರ್ಬಲ ವರ್ಗದವರಿಗೆ ಅಭಿವೃದ್ಧಿಯ ಗರಿಷ್ಠ ಪ್ರಯೋಜನವಾಗುವಂತೆ ಅದನ್ನು ಬಲಪಡಿಸುವ ಅಗತ್ಯವಿದೆ.

ಎಲ್ಲರನ್ನೂ ಒಳಗೊಂಡ ಹಾಗೂ ಜಾಗತಿಕ ದಕ್ಷಿಣ ಒಳಗೊಂಡಂತೆ ಎಲ್ಲರಿಗೂ ಸಮಾನ ಸಹಭಾಗಿತ್ವ, ಭಾರತ ಅಧ್ಯಕ್ಷತೆಯ ಆದ್ಯತೆ. ಜಿ20ರಲ್ಲಿ ಆಫ್ರಿಕನ್ ಸಮುದಾಯವನ್ನು ಖಾಯಂ ಸದಸ್ಯರನ್ನಾಗಿ ಒಳಗೊಂಡಿರುವಲ್ಲಿ ಅವು ಜಿ20ಕ್ಕೆ ಒತ್ತಾಸೆಯಾಗಿರುವುದೆಂದು ನಿರೀಕ್ಷಿಸಿ ಅಂತಾರಾಷ್ಟ್ರೀಯ ಸಹಭಾಗಿತ್ವದಲ್ಲಿ ಪಾಲುದಾರಿಕೆ ದೊರಕುವುದೆಂದು ಭಾವಿಸಲಾಗಿದೆ. ಹೆದ್ದಾರಿ, ರೈಲು, ಜಲಮಾರ್ಗ ಜಾಲವನ್ನು ಒಳಗೊಂಡ ಭಾರತ – ಮಧ್ಯಪ್ರಾಚ್ಯ ಐರೋಪ್ಯ ಆರ್ಥಿಕ ಕಾರಿಡಾರ್ ನಿರೂಪಿಸುವ ಹಿನ್ನೆಲೆಯಲ್ಲಿ ಏಶಿಯಾ, ಅರೇಬಿಯನ್ ಗಲ್ಫ್ ಮತ್ತು ಯುರೋಪ್‌ಗಳ ನಡುವಿನ ಸಮಗ್ರತೆ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವ ದೂರದೃಷ್ಟಿ ಇದೆ. ಸುಸ್ಥಿರ ಅಭಿವೃದ್ಧಿಕುರಿತಾದ ಭಾರತದ ಬದ್ಧತೆಯಿಂದಾಗಿ ಹವಾಮಾನ ಬದಲಾವಣೆ ಬಗೆಗಿನ ವಿಚಾರದಲ್ಲಿ ಉತ್ತರದಾಯಿತ್ವವನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ಜಿ20 ನಾಯಕರು ಹಸಿರು ಅಭಿವೃದ್ಧಿ ಒಪ್ಪಂದವನ್ನು ಅಂಗೀಕರಿಸಿದರು. ಇದರೊಂದಿಗೆ ಜಾಗತಿಕ ಜೈವಿಕ ಇಂಧನ ಮೈತ್ರಿಕೂಟ ರಚನೆ ಕೂಡ ಭಾರತ ಅಧ್ಯಕ್ಷತೆಯ ರಚನಾತ್ಮಕ ವಿಶೇಷ ಕ್ರಮವೆನಿಸಿತು.

ಭಾರತವು ತನ್ನ ಅಧ್ಯಕ್ಷತೆಯ ಅವಧಿಯಲ್ಲಿ ಹಾಕಿಕೊಟ್ಟ ಭದ್ರ ಬುನಾದಿಯ ಮೇಲೆ ಬ್ರೆಜಿಲ್ ತನ್ನ ಅಧ್ಯಕ್ಷತೆಯನ್ನು ಮುಂದುವರೆಸುವುದೆಂದು ವಿಶ್ವ ನಿರೀಕ್ಷಿಸುತ್ತದೆ. ಭಾರತದ ನಾಯಕತ್ವದಲ್ಲಿ ಮಾನವ ಕೇಂದ್ರಿತ ಉಪಕ್ರಮಗಳಿಗೆ ಆದ್ಯತೆ ನೀಡಿ, ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ, ಡಿಜಿಟಲ್ ಮೂಲಸೌಕರ್ಯ ಮತ್ತು ಸುಸ್ಥಿರತೆಗೆ ಸಂಬಂಧಿಸಿದ ಅಂಶಗಳತ್ತ ಗಮನಹರಿಸಲಾಯಿತು. ನವದೆಹಲಿ ನಾಯಕರ ಘೋಷಣೆಯು ಎಲ್ಲರನ್ನು ಒಳಗೊಂಡ ಮಾನವ ಕೇಂದ್ರಿತ ಅಭಿವೃದ್ಧಿಯ ಬಹು ಆಯಾಮಗಳಿಗೆ ಆದ್ಯತೆ ನೀಡಿದೆ. ಲಿಂಗಸಮಾನತೆ, ಲಿಂಗಾಧರಿತ ಆರ್ಥಿಕ ಮತ್ತು ಶೈಕ್ಷಣಿಕ ಸಶಕ್ತೀಕರಣದ ಮೂಲಕ ಮಹಿಳಾ ನೇತೃತ್ವದ ಅಭಿವೃದ್ಧಿಗೆ ಒತ್ತು ನೀಡಿದೆ. ಹೊಸ ಮಹಿಳಾ ಕಾರ್ಯತಂಡ ರಚನೆ, ಮಹಿಳಾ ಉತ್ಥಾನದಲ್ಲಿ ಜಿ20ಕ್ಕೆ ಇರುವ ಬದ್ಧತೆಯ ಪ್ರತೀಕ.

ಭಾರತದ ಈ ಐತಿಹಾಸಿಕ ಅಧ್ಯಕ್ಷತೆ ವಿಶ್ವಕ್ಕೆ ನೀಡಿರುವ ಬಹು ಆಯಾಮದ ಕೊಡುಗೆಗಳನ್ನು ಯೋಜನಾದ ಪ್ರಸ್ತುತ ಸಂಚಿಕೆ ಒಳಗೊಂಡಿದೆ. ಆರ್ಥಿಕತೆ, ಪರಿಸರ, ರಾಜನೀತಿ, ತಾಂತ್ರಿಕತೆ ಮತ್ತು ಸಾಮಾಜಿಕ ದೃಷ್ಟಿ ವಿಚಾರ ಕುರಿತಂತೆ ತಜ್ಞರು ಲೇಖನ ಸಾದರಪಡಿಸಿದ್ದಾರೆ. 'ಇಂದಿನ ಯುಗ ಯುದ್ಧದ ಪರ್ವವಲ್ಲ' ಎನ್ನುವ ನವದೆಹಲಿನಾಯಕರ ಘೋಷಣೆಯನ್ನು ಗಮನದಲ್ಲಿಟ್ಟು ಪ್ರಸ್ತುತ ಅಧ್ಯಕ್ಷತೆ ಹಾಕಿಕೊಟ್ಟ ಭೂಮಿ ಪರ, ಜನ ಪರ ಜಾಗತಿಕ ನೀತಿ ಸಹಭಾಗಿತ್ವ ನಿರೂಪಣೆಯನ್ನು ಮುಂದುವರೆಸಿಕೊಂಡು ಹೋಗುವ ಹೊಣೆಗಾರಿಕೆ ಎಲ್ಲರ ಮೇಲಿದೆ.

# ವಿಶ್ವಪರಂಪರೆ ಪಟ್ಟಿಯಲ್ಲಿ ಹೊಯ್ಸಳ ಕಲಾ ದೇಗುಲಗಳು

* ಡಾ. ಶಲ್ವಪಿಳ್ಳೈ ಅಯ್ಯಂಗಾರ್

**ಭಾರತೀಯರಿಗೆ ಅದರಲ್ಲೂ ಕರ್ನಾಟಕದ ಜನತೆಗೆ ಒಂದು ಮಹತ್ತರವಾದ ಸಂತಸದ ಸುದ್ದಿಯನ್ನು ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ ಯುನೆಸ್ಕೊ ನೀಡಿದೆ! ಭಾರತದ ಕಲಾ ಪರಂಪರೆಯಲ್ಲೇ ಅತ್ಯಂತ ಸೂಕ್ಷ್ಮ, ಆಕರ್ಷಕ ಮತ್ತು ನಿಖರವಾದ ಕೆತ್ತನೆಗಳಿಗೆ ಹೆಸರುವಾಸಿಯಾದ ಅದ್ವಿತೀಯವಾದ ಹೊಯ್ಸಳ ದೇವಾಲಯಗಳಾದ ಬೇಲೂರು – ಹಳೇಬೀಡು – ಸೋಮನಾಥಪುರಗಳ ಸ್ಮಾರಕ ಸಮೂಹ ವಿಶ್ವಪಾರಂಪರಿಕ ಪಟ್ಟಿಗೆ ಇತ್ತೀಚೆಗೆ ಸೇರಿದೆ. ಇದು ಭಾರತದ 42 ನೆಯ ಮತ್ತು ಕರ್ನಾಟಕದ 4 ನೇ ವಿಶ್ವಪಾರಂಪರಿಕ ತಾಣವಾಗಿ ಇದೇ ಸೆಪ್ಟೆಂಬರ್ 18 ರಂದು ಯುನೆಸ್ಕೊದಿಂದ ಅಧಿಕೃತವಾಗಿ ಘೋಷಿಸಲ್ಪಟ್ಟಿದೆ.**

ಹೊಯ್ಸಳ ದೇವಾಲಯಗಳು ಹಿಂದೂ ಧರ್ಮದ ಪುರಾಣ ಮತ್ತು ಇತಿಹಾಸ ಗ್ರಂಥಗಳ ಅದ್ಭುತ ದೃಶ್ಯಕಾವ್ಯವಾಗಿದೆ. ಹೊಯ್ಸಳರು ಭಾರತ ದೇಶದ ರಾಮಾಯಣ, ಮಹಾಭಾರತ, ಆಗಮ, ಪುರಾಣಗಳ ಕಥಾನಕಗಳನ್ನು ಸಮಗ್ರವಾಗಿ ಕಲ್ಲಿನಲ್ಲಿ ಶಿಲ್ಪಗಳ ರೂಪದಲ್ಲಿ ಸಾಕಾರಗೊಳಿಸಿಬಿಟ್ಟಿದ್ದಾರೆ. ಆ ಎಲ್ಲ ದೇವಾಲಯಗಳ ಸಾರವೇ ಬೇಲೂರು – ಹಳೇಬೀಡು – ಸೋಮನಾಥಪುರ ಎಂದು ಭಾವಿಸಬಹುದು. ಈ ಮೂರು ಹೊಯ್ಸಳ ದೇವಾಲಯಗಳನ್ನು ವಿಶ್ವಪಾರಂಪರಿಕ ತಾಣವನ್ನಾಗಿ ಗುರುತಿಸಿರುವುದು ಭಾರತೀಯರಿಗೆ ಮತ್ತು ಕರ್ನಾಟಕದ ಜನತೆಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಈ ಘೋಷಣೆಯನ್ನು ಅಂತಾರಾಷ್ಟ್ರೀಯ ಸ್ಮಾರಕ ಮತ್ತು ತಾಣ ಮಂಡಳಿ – ಇಕೊಮಸ್ ಸೌದಿ ಅರೇಬಿಯಾ ದೇಶದ ರಿಯಾದ್‌ನಲ್ಲಿ ನಡೆದ ತನ್ನ 45ನೇ ವಿಶ್ವಪಾರಂಪರಿಕ ಅಧಿವೇಶನದಲ್ಲಿ ಮಾಡಿದೆ. ಈ ಮೂರು ದೇವಾಲಯಗಳ ಪಟ್ಟಿಯನ್ನು ವಿಶ್ವಪಾರಂಪರಿಕ ಪಟ್ಟಿಯಲ್ಲಿ ಸೇರಿಸಲು ಮೊದಲಿನಿಂದಲೇ ಪ್ರಯತ್ನಗಳು ಸಾಗಿ 15 ಏಪ್ರಿಲ್ 2014 ರಿಂದಲೇ ತಾತ್ಕಾಲಿಕ ಪಟ್ಟಿಯಲ್ಲಿ ಇತ್ತು. ಈ ಮೂರು ಹೊಯ್ಸಳ ದೇವಾಲಯಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಸಂರಕ್ಷಿತಗೊಂಡ ಸ್ಮಾರಕಗಳಾಗಿದ್ದು, ಇದನ್ನು ದಿ ಸೇಕ್ರೆಡ್ ಎನ್ಸೆಂಬಲ್ಸ್ ಆಫ್ ಹೊಯ್ಸಳಾಸ್ ಎಂಬ ಹೆಸರಿನಲ್ಲಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಇವು ಯುನೆಸ್ಕೋದ 1, 2, ಮತ್ತು 4ನೇ ಆಯ್ಕೆ ಮಾನದಂಡಗಳ ಅಡಿಯಲ್ಲಿ ಆಯ್ಕೆಯಾಗಿದ್ದು, ಈ ಮೂರು ದೇವಾಲಯಗಳ ಮಹತ್ವ ಮತ್ತು ಐತಿಹಾಸಿಕ ವಿವರಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.



**ಬೇಲೂರು ಶ್ರೀ ಚನ್ನಕೇಶವ ದೇವಾಲಯ :** ಬೇಲೂರು ಕರ್ನಾಟಕದ ಹಾಸನ ಜಿಲ್ಲೆಯ ಒಂದು ತಾಲ್ಲೂಕು ಪಟ್ಟಣವಾಗಿದೆ. ಈ ಪಟ್ಟಣವನ್ನು ಪ್ರಾಚೀನ ಶಾಸನ ಮತ್ತು ಸಾಹಿತ್ಯಗಳಲ್ಲಿ ವೇಲೂರು, ವೇಲಾಪುರ ಎಂದು ದಾಖಲಿಸಲಾಗಿದೆ. ಇದು ಯಗಚಿ ನದಿಯ ದಡದಲ್ಲಿದ್ದು ದ್ವಾರಸಮುದ್ರ ಅಥವಾ ಹಳೇಬೀಡಿಗಿಂತ ಮುಂಚೆ ರಾಜಧಾನಿಯಾಗಿತ್ತು. ಇಲ್ಲಿರುವ ಹೊಯ್ಸಳರ ಕಾಲದ ವಾಸ್ತುಶಿಲ್ಪದ ಗಣಿಯಾದ ಶ್ರೀ ಚನ್ನಕೇಶವ ದೇವಾಲಯವನ್ನು ಸಾ.ಶ. 1117 ರಲ್ಲಿ ನಿರ್ಮಿಸಲಾಯಿತು. ಹೊಯ್ಸಳ ಮಹಾರಾಜನಾದ ದಕ್ಷಿಣ ಭಾರತದ ಶ್ರೇಷ್ಠರಾಜರುಗಳಲ್ಲಿ ಒಬ್ಬನಾದ ವಿಷ್ಣುವರ್ಧನನು ಶ್ರೀರಾಮಾನುಜಾಚಾರ್ಯರ ಉಪದೇಶಗಳಿಂದ ಪ್ರೇರಿತನಾಗಿ, ತನ್ನ ವಿಜಯಗಳ ಕುರುಹಾಗಿ ಈ

* ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – 570006
ಇಮೇಲ್: shalvapille@gmail.com



ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯದ ನಿರ್ಮಾಣ ಮತ್ತು ಹೊಯ್ಸಳ ವಿಷ್ಣುವರ್ಧನನ ಸಾಧನೆಗಳನ್ನು ಒಳಗೊಂಡ ಶಕವರ್ಷ 1039ರ ಹೇಮಳಂಬಿ ಸಂವತ್ಸರದ ಚೈತ್ರ ಶುದ್ಧ ಪಂಚಮೀ ಶನಿವಾರ ಅಂದರೆ ಸಾಮಾನ್ಯ ಶಕ ಮಾರ್ಚ್ 10. 1117 ರ ಪ್ರಶಸ್ತಿ ಶಾಸನವು ಇಂದಿಗೂ ದೇವಾಲಯದಲ್ಲಿ ಸಾಕ್ಷೀಭೂತವಾಗಿ ನಿಂತಿದೆ. ಹೊಯ್ಸಳ ಶೈಲಿ ಎಂದು ಪ್ರತ್ಯೇಕವಾಗಿ ಗುರುತಿಸಲ್ಪಡುವ ಹೊಸ ಶೈಲಿಗೆ ಈ ದೇವಾಲಯವು ನಾಂದಿಯನ್ನು ಹಾಡಿದೆ. ಹೊಯ್ಸಳ ಕಲೆಯ ಪ್ರಮುಖ ಲಕ್ಷಣಗಳಾದ ಎತ್ತರದ ಜಗತೀ, ಅದರ ಮೇಲೆ ನಕ್ಷತ್ರಾಕಾರದ ಪಟ್ಟಿಕೆಗಳ ಅಧಿಷ್ಠಾನ, ಅಧಿಷ್ಠಾನದ ಮೇಲೆ ಇರುವ ಭಿತ್ತಿ ಶಿಲ್ಪಗಳು, ಭಿತ್ತಿಗಳ ಮೇಲಿನ ಕೋಷ್ಠಗಳು, ಅದರ ಮೇಲಿನ ಕಪೋತ, ಅದರ ಮೇಲಿನ ಸುಂದರ ಶಿಖರ (ಈಗ ತೆಗೆದು ಹಾಕಲಾಗಿದೆ), ಸೋಪಾನಗಳು, ಅತ್ಯದ್ಭುತ ಶೃಂಗಾರ ರಮ್ಯವಾದ ಸಾಲಭಂಜಿಕಾ ಶಿಲ್ಪಗಳು, ಪ್ರತಿದ್ವಾರದ ಮೇಲಿನ ಸೂಕ್ಷ್ಮಶಿಲಾಕೆತ್ತನೆಗಳಿಂದ ಕೂಡಿದ ದೇವತಾ ವಿಗ್ರಹಗಳು, ಒಳಭಾಗದ ಸ್ತಂಭಗಳ ಎಲ್ಲಾ ಲಕ್ಷಣಗಳನ್ನೂ ಬೇಲೂರು ದೇವಾಲಯವು ಒಳಗೊಂಡಿದೆ. ಮುಂದಿನ ಎಲ್ಲ ದೇವಾಲಯಗಳ ಬೆಳವಣಿಗೆಗೆ ಇದು ಒಂದು ಮಾದರಿಯಂತೆ ಕಾರ್ಯನಿರ್ವಹಿಸಿದೆ ಎಂದರೆ ತಪ್ಪಾಗಲಾರದು. ಈ ದೇವಾಲಯದ ಸಂಕೀರ್ಣದಲ್ಲಿ ಮಧ್ಯದಲ್ಲಿ ಕೇಶವನ ದೇವಾಲಯವಿದ್ದು, ಇದರ ಸುತ್ತ ಅನೇಕ ಸಣ್ಣ ದೇವಾಲಯಗಳು ಮತ್ತು ಸುಂದರವಾದ ಪ್ರಾಕಾರ ಇವೆ. ಈಶಾನ್ಯದಲ್ಲಿ ಒಂದು ಪುಷ್ಕರಿಣಿಯನ್ನೂ ಸಹ ಹೊಂದಿದೆ. ಅದಲ್ಲದೇ ದೇವಾಲಯದ ಉಗ್ರಾಣ, ದೇವರ ಪ್ರಸಾದದ ಅಡಿಗೆಮನೆಯನ್ನು ಹೊಂದಿದೆ. ದೇವಾಲಯ ಪೂರ್ವದ್ವಾರದಲ್ಲಿ ವಿಜಯನಗರ ಕಾಲದ ಎತ್ತರವಾದ ದ್ರಾವಿಡ ಶೈಲಿಯ ಗಚ್ಚುಗಾರೆಯಿಂದ ಮಾಡಿದ ರಾಯಗೋಪುರವಿದೆ. ದೇವಾಲಯದ ಹತ್ತಿರದಲ್ಲಿಯೇ ಶಂಕರೇಶ್ವರ, ಪಾತಾಳೇಶ್ವರ, ಮತ್ತು ಅಮೃತೇಶ್ವರ ದೇವಾಲಯದ ಅವಶೇಷಗಳು ಸೇರಿ ಬೇಲೂರಿನ ಸ್ಮಾರಕಗಳು ಎಂದು ಕರೆಯಲಾಗುತ್ತದೆ.

ಪ್ರಮುಖವಾದ ಶ್ರೀಚನ್ನಕೇಶವ ದೇವಾಲಯದ ಪಕ್ಕದಲ್ಲಿಯೇ ಮತ್ತೊಂದು ದೇವಾಲಯವಿದ್ದು ಅದನ್ನು ವಿಷ್ಣುವರ್ಧನನ ಪಿರಿಯರಸಿ ಶಾಂತಲೆಯು ಕಟ್ಟಿಸಿದ್ದು ಅದನ್ನು ಚನ್ನಕೇಶವ ಎಂದು ಕರೆಯಲಾಗಿದೆ, ಆದರೆ ಈಗ ಚನ್ನಿಗರಾಯ ದೇವಸ್ಥಾನ ಎಂದು ಕರೆಯುತ್ತಾರೆ.

ಶ್ರೀ ಚನ್ನಕೇಶವ ದೇವಾಲಯವು ಗರ್ಭಗೃಹ, ಸುಕನಾಸಿ, ಮಹಾನವರಂಗ ಹೊಂದಿದ್ದು, ಹೊರಭಾಗದಲ್ಲಿ ಪ್ರದಕ್ಷಿಣಪಥ, ಮತ್ತು ಜಗತಿಯನ್ನು ಹೊಂದಿದೆ. ಇದರ ಉದ್ದ 178 ಅಡಿ ಮತ್ತು ಅಗಲ 156 ಅಡಿ. ಜಗತಿಯು ಸುಮಾರು 3 ಅಡಿ ಎತ್ತರವಾಗಿದೆ.

ದೇವಾಲಯದ ಗರ್ಭಗೃಹದಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹಿಡಿದ ಸುಮಾರು 6.5 ಅಡಿ ಎತ್ತರದ ಭವ್ಯವಾದ ಚನ್ನಕೇಶವ ಸ್ವಾಮಿಯ ವಿಗ್ರಹವಿದೆ. ಇದನ್ನು 3 ಅಡಿ ಎತ್ತರದ ಗರುಡ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ದೇವರ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳನ್ನು ಕಂಡರಿಸಲಾಗಿದೆ. ದೇವರನ್ನು ಶಾಸನದಲ್ಲಿ ಪರಬ್ರಹ್ಮಸ್ವರೂಪ, ಅತಿಪ್ರಸನ್ನ, ಶ್ರೀಮತ್ ವಿಜಯನಾರಾಯಣ ಎಂದು ಕರೆಯಲಾಗಿದೆ. ಆದ್ದರಿಂದಲೇ ವಿಜಯನಾರಾಯಣನಾದರೂ ಸಹ ಚೆನ್ನಾಗಿ ಇರುವ ಕಾರಣ ಶ್ರೀ ಚನ್ನಕೇಶವ (ಸುಂದರನಾದ ಕೇಶವ) ಎಂದೇ ಕರೆಯಲಾಗುತ್ತದೆ. ಈ ದೇವಾಲಯವನ್ನು ಶ್ರೀವೈಷ್ಣವ ಸಿದ್ಧಾಂತದ ಪಾಂಚರಾತ್ರ ಆಗಮದನ್ವಯ ಪೂಜಾ ಪದ್ಧತಿಗಳನ್ನು ನಿರ್ಮಿಸಲಾಗಿದೆ ಎಂದು ಶಾಸನದಲ್ಲಿಯೇ ಉಲ್ಲೇಖಿತವಾಗಿದೆ. ಈ ದೇವಾಲಯವನ್ನು ಶ್ರೀಮನ್ಮಹಾಪ್ರಾಸಾದ ಎಂದು ಹೇಳಿ ಅದರಲ್ಲಿ ಕೇಶವ ದೇವರನ್ನು ಹೊಯ್ಸಳ ವಿಷ್ಣುವರ್ಧನನು ಪ್ರತಿಷ್ಠಾಪಿಸಿದ್ದಾನೆ. ಆದರೆ ಪೂರ್ಣ ದೇವಾಲಯದ ನಿರ್ಮಾಣ ಅವನ ಕಾಲದಲ್ಲಿ ಆಗದೆ ಮುಂದಿನ 100 ವರ್ಷಗಳಲ್ಲಿ ಇಂದಿನ ರೂಪದಲ್ಲಿ ಪೂರ್ಣಗೊಳಿಸಲಾಗಿದೆ. ದೇವಾಲಯದಲ್ಲಿ 118 ಶಾಸನಗಳಿದ್ದು ಇವು ಈ ದೇವಾಲಯದ ವಿವಿಧ ಕಾಲಘಟ್ಟಗಳ ಇತಿಹಾಸವನ್ನು ದಾಖಲಿಸುತ್ತವೆ.

ಗರ್ಭಗೃಹದ ಹೊರಗೆ ಮತ್ತು ಸುಖನಾಸಿ ಹೊರಭಾಗದಲ್ಲಿ ದ್ವಾರಪಾಲಕರನ್ನು ನಿಲ್ಲಿಸಲಾಗಿದೆ. ಸುಖನಾಸದ ಹೊರಗೆ ಅಂದರೆ ನವರಂಗದಲ್ಲಿ ಇರುವ ಆಳೆತ್ತರದ ದ್ವಾರಪಾಲಕರಂತೂ ಸಾಕ್ಷಾತ್ ಜಯ, ವಿಜಯರೇ ಅಥವಾ ಚಂಡ, ಪ್ರಚಂಡರೇ ನಿಂತಿದ್ದಾರೆ ಎನಿಸುವಷ್ಟರ ಮಟ್ಟಿಗೆ ಭಾಸವಾಗುತ್ತದೆ. ಸುಖನಾಸದ ದ್ವಾರವು ಅತ್ಯಂತ ಸೂಕ್ಷ್ಮವಾದ ಅಲಂಕೃತ ಪಟ್ಟಿಗಳಿಂದ ಕೂಡಿದ್ದು, ಮೇಲ್ಭಾಗದಲ್ಲಿ ಪದಗಳಲ್ಲಿ ವರ್ಣಿಸಲಾಗದ ಅತೀ ಕೆತ್ತನೆಗಳಿಂದ ಕೂಡಿದ ಲಕ್ಷ್ಮೀನಾರಾಯಣರ ಕುಳಿತಿರುವ ಪ್ರತಿಮೆಯನ್ನು ಹೊಂದಿದೆ. ಈ ಪ್ರತಿಮೆಯನ್ನು ಮಕರಗಳು ಹಿಡಿದಿರುವ ತೋರಣದ ಕೆಳಭಾಗದಲ್ಲಿ ಮಧ್ಯಭಾಗದಲ್ಲಿರುವಂತೆ ಕಂಡರಿಸಲಾಗಿದೆ. ಲಕ್ಷ್ಮೀನಾರಾಯಣರ ಕೆಳಭಾಗದಲ್ಲಿ ನೃತ್ಯದ ಶಿಲ್ಪವಿದ್ದು ಆ ನೃತ್ಯಕ್ಕೆ ಪೂರಕವಾದ ಅನೇಕ ಸಂಗೀತವಾದ್ಯಗಳನ್ನು ನುಡಿಸುತ್ತಿರುವ ಸಂಗೀತಗಾರರ ಶಿಲ್ಪಗಳಿವೆ.

ಶ್ರೀ ಚನ್ನಕೇಶವ ದೇವಾಲಯದ ನವರಂಗವು ಇತರ ಯಾವುದೇ ಹೊಯ್ಸಳ ದೇವಾಲಯಗಳ ನವರಂಗಕ್ಕಿಂತ ಅತ್ಯಂತ ದೊಡ್ಡದಾಗಿದೆ. ಈ ನವರಂಗದಲ್ಲಿ ಒಟ್ಟು



48 ಕಂಬಗಳಿದ್ದು, ಇದು ನವರಂಗದ ಭವ್ಯತೆಯನ್ನು ಹೆಚ್ಚಿಸುತ್ತವೆ. ಮಧ್ಯದ ನಾಲ್ಕು ಕಂಬಗಳನ್ನು ಬಿಟ್ಟು ಉಳಿದ ಕಂಬಗಳು ಹೊಯ್ಸಳರ ಕಾಲದ ಕಂಬಗಳಾಗಿದ್ದು, ಹೊಯ್ಸಳರ ಕೆತ್ತನೆಯ ಭವ್ಯ ಶೈಲಿಯನ್ನು ಹೊಂದಿವೆ. ನವರಂಗದಲ್ಲಿ ನೃತ್ಯಕ್ಕೆ ಅನುಕೂಲವಾದ ಒಂದು ವೃತ್ತಾಕಾರದ ವೇದಿಕೆಯು ಮಧ್ಯಭಾಗದಲ್ಲಿದ್ದು, ಅದರ ಮೇಲ್ಭಾಗದಲ್ಲಿ ಅಮೋಘವಾದ 10 ಅಡಿ ವ್ಯಾಸ 6 ಅಡಿ ಆಳವಾದ ಭುವನೇಶ್ವರಿ ಇದೆ. ಭುವನೇಶ್ವರಿ ಎಂದರೆ ಹೂಕಲ್ಲಿನಲ್ಲಿ ವಿಶಿಷ್ಟವಾದ ಕೆತ್ತನೆಗಳಿದ್ದು, ಬಾಳೆಯ ಹೂವು ಮೇಲಿನಿಂದ ನೇತಾಡುತ್ತಿರುವಂತೆ ಕೆತ್ತಲಾಗಿದೆ. ಇದರಲ್ಲಿ ಮೂರು ಭಾಗಗಳಿದ್ದು ಅದರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಕೆತ್ತನೆಗಳಿದ್ದು, ಕೆಳಭಾಗದ ಪುಷ್ಪದ ಮಧ್ಯದಲ್ಲಿ ನರಸಿಂಹನನ್ನು ನಾಜೂಕಾಗಿ ಕಂಡರಿಸಲಾಗಿದೆ. ಈ ಭುವನೇಶ್ವರಿಯ ಒಳಭಾಗದಲ್ಲಿ ಅಷ್ಟದಿಕ್ಪಾಲಕರು, ವಿಷ್ಣುವಿನ ಕೇಶವಾದಿ ದ್ವಾದಶ ಮೂರ್ತಿಗಳನ್ನು ಕೆತ್ತಿದ್ದಾರೆ. ಇದೂ ಅಲ್ಲದೇ ಭಾಗವತದ ಅನೇಕ ಪ್ರಸಂಗಗಳನ್ನು ಈ ಭುವನೇಶ್ವರಿಯ ಒಳಭಾಗದಲ್ಲಿ ಕಂಡರಿಸಲಾಗಿದೆ. ಈ ರೀತಿಯ ಸೂಕ್ಷ್ಮ ಅಲಂಕರಣಗಳು ಮನಸ್ಸಿಗೆ ಮುದವನ್ನು ಉಂಟು ಮಾಡುತ್ತವೆ.

ಇದೇ ನವರಂಗದ ಅನೇಕ ಕಂಬಗಳಲ್ಲಿ ಹೊಯ್ಸಳರ ವಿಶಿಷ್ಟ ಶೈಲಿಯ ಕೆತ್ತನೆಗಳಿದ್ದು, ಒಂದು ಕಂಭದಲ್ಲಿ ಮೋಹಿನಿ ಎಂದು ಗುರುತಿಸಲಾಗುವ ಚಿತ್ರಣವಿದೆ. ಇದಂತೂ ಅತ್ಯಂತ ನಾಜೂಕಿನ ಕಲಾಕೃತಿ. ಹೆಣ್ಣಿನ ಅತ್ಯಂತ ಸುಂದರತೆಯನ್ನು ಇದು ಅಭಿವ್ಯಕ್ತಿಗೊಳಿಸುತ್ತಿದ್ದು, ಸಮುದ್ರಮಂಥನ ಕಾಲದಲ್ಲಿ ಅವತಾರ ಮಾಡಿದ ವಿಷ್ಣುವಿನ ಮೋಹಿನಿ ಶಿಲ್ಪ ಇದಾಗಿದೆ ಎಂದು ಹೇಳಲಾಗುತ್ತದೆ. ಅಲ್ಲದೇ ಕೇಶವನನ್ನೂ ಸಹ ಕೆಲವೊಮ್ಮೆ ಮೋಹಿನಿ ಅಲಂಕಾರದಲ್ಲಿ ಪೂಜೆ ಮಾಡುವುದಲ್ಲದೇ ಇದನ್ನು ಭಸ್ಮಾಸುರನನ್ನು ಮಣಿಸಿದ ಕ್ಷೇತ್ರ ಎಂದು ಸ್ಥಳಪುರಾಣದ ಪ್ರಕಾರಭಾವಿಸಲಾಗುತ್ತದೆ. ಇಲ್ಲಿನ ನರಸಿಂಹನ ಕಂಬ, ಮಧ್ಯದ ಕಂಬಗಳ ಫಲಕದ ಬಳಿ ಇರುವ ಸಾಲಭಂಜಿಕೆಯರ ಶಿಲ್ಪಗಳು, ಈ ದೇವಾಲಯದ ಒಳಗಿನ ಸೌಂದರ್ಯವನ್ನು ನೂರ್ಮಡಿಗೊಳಿಸುತ್ತವೆ.

ದೇವಾಲಯದ ಹೊರಭಾಗದಿಂದ ಗಮನಿಸುವುದಾದರೆ ದೇವಾಲಯಕ್ಕೆ ಮೂರು ದ್ವಾರಗಳಿದ್ದು ಮೂರು ದ್ವಾರಗಳನ್ನು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಆದರೆ ಅಷ್ಟೇ ಸುಂದರವಾದ ಶಿಲ್ಪಗಳಿಂದ ಅಲಂಕರಿಸಲಾಗಿದೆ. ಮೈಮಾಟಗಳನ್ನು, ಆಭರಣ, ಉಡುಗೆಗಳನ್ನು ಶಾಸ್ತ್ರಬದ್ಧವಾಗಿ ಕೆತ್ತಲಾಗಿದೆ. ಈ ಬಾಗಿಲ ಮೇಲ್ಭಾಗದಲ್ಲಿ ಪೂರ್ವದಲ್ಲಿ ಉಗ್ರ ನರಸಿಂಹ, ದಕ್ಷಿಣದಲ್ಲಿ ಹಿರಣ್ಯಾಕ್ಷನನ್ನು ಸಂಹರಿಸುತ್ತಿರುವ ವರಾಹ, ಉತ್ತರದಲ್ಲಿ ಶ್ರೀಭೂಸಮೇತ ಕೇಶವನನ್ನು ಅಲಂಕರಣಗಳ ಮಧ್ಯದಲ್ಲಿ ದ್ವಾರ ಲಲಾಟದಲ್ಲಿ ಕೆತ್ತಲಾಗಿದೆ.

ದೇವಾಲಯದ ಭಿತ್ತಿಗಳಲ್ಲಿ ವಿಷ್ಣುವಿನ ವಿವಿಧ ಕೇಶವಾದಿ ಚತುರ್ವಿಂಶತಿ ಮೂರ್ತಿಗಳು, ದಶಾವತಾರ, ಶಿವನ ಲೀಲಾ ಮೂರ್ತಿಗಳು, ರತಿಮನ್ಮಥ, ಅರ್ಜುನ ಮತ್ಸ್ಯಯಂತ್ರಭೇದನ, ದೇವಿ ಮೂರ್ತಿಗಳು ಇತ್ಯಾದಿ ಮೂರ್ತಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ರಾವಣಾನುಗ್ರಹಮೂರ್ತಿ, ಉಗ್ರನರಸಿಂಹ, ಭೀಮ ಭಗದತ್ತರ ಯುದ್ಧ, ಅಷ್ಟಾದಶ ಭುಜ ವಿಷ್ಣು, ಗಜಾಸುರಸಂಹಾರ ಮುಂತಾದವು ಅತ್ಯಪೂರ್ವವಾಗಿವೆ. ಭಿತ್ತಿಕೋಷ್ಠಗಳಲ್ಲಿಯೂ ಸುಂದರವಾದ ವಿಷ್ಣುವಿನ ವಿವಿಧ ರೂಪಗಳ ಮೂರ್ತಿಗಳಿವೆ.

ಅಧಿಷ್ಠಾನದಲ್ಲಿ ರಾಮಾಯಣ, ಮಹಾಭಾರತ, ಭಾಗವತದ ಪೌರಾಣಿಕ ಕಥೆಗಳು, ನೃತ್ಯದ ವಿವಿಧ ಭಂಗಿಗಳು, ಅಶ್ವಗಳು, ಹಂಸಗಳು, ಆನೆಗಳ ಸಾಲು ಮುಂತಾದ ಹೊಯ್ಸಳರ ವಿಶಿಷ್ಟ ಪಟ್ಟಿಕೆಗಳಿವೆ. ಕೆಳಭಾಗದ ಆನೆಯ ಸಾಲಿನಲ್ಲಿ ಒಟ್ಟು 664 ಆನೆಗಳಿವೆ. ಅಲ್ಲದೇ ಇತರ ಎಂಟು ದೊಡ್ಡ ಆನೆಗಳು ಮಂಟಪ ಮತ್ತು ಸುತ್ತಲೂ ಕಂಡು ಬರುತ್ತವೆ.

ಭಿತ್ತಿಯ ಮೇಲ್ಭಾಗದಲ್ಲಿ ಕಪೋತದ ಕೆಳಭಾಗದಲ್ಲಿ ಹೊಯ್ಸಳರ ದೇವಾಲಯಗಳಲ್ಲಿ ಮಾತ್ರ ಸುಂದರವಾಗಿ ಮೂಡಿಬಂದಿರುವ ಇತರ ರಾಜವಂಶಗಳ ಕಲೆಗಿಂತಭಿನ್ನವಾದ ಮದನಿಕೆಯರ ಅಥವಾ ಸಾಲಭಂಜಿಕೆಯರ ವಿಗ್ರಹಗಳನ್ನು ಜೋಡಿಸಲಾಗಿದೆ. ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಈ ರೀತಿಯ ಅಪೂರ್ವ ಮದನಿಕೆಯರ ವಿಗ್ರಹಗಳು ಒಳಗೆ ಮತ್ತು ಹೊರಗೆ ಸೇರಿ 42 ಇವೆ. ಇದರಲ್ಲಿ 39 ಸ್ತ್ರೀ ವಿಗ್ರಹಗಳು ಮತ್ತು 3 ಪುರುಷ ಮದನಿಕೆಯ ವಿಗ್ರಹಗಳಾಗಿವೆ.

ದೇವಾಲಯದ ಸುತ್ತಲೂ ಸುಂದರ ಪ್ರಾಕಾರವಿದ್ದು ಅಲ್ಲಿ ಆಳ್ವಾರರ, ಶ್ರೀರಾಮಾನುಜರು, ಸುದರ್ಶನರು, ಹನುಮಂತ ಮುಂತಾದ ಇತರ ದೇವತಾ ವಿಗ್ರಹಗಳಿವೆ. ದೇವಾಲಯದ ಬಲಭಾಗದಲ್ಲಿ ಸೌಮ್ಯನಾಯಕಿ ಅಮ್ಮನವರು, ಎಡಭಾಗದಲ್ಲಿ ಆಂಡಾಳ್ (ಗೋದಾದೇವಿ) ಅಮ್ಮನವರ ವಿಗ್ರಹಗಳಿವೆ. ದೇವಾಲಯದ ಹೊರಭಾಗದ ಜಾಲಂಧ್ರದ ಬಳಿ ವಿಷ್ಣುವರ್ಧನ ಮಹಾರಾಜರು ತನ್ನ ಗುರುಗಳನ್ನು ಭೇಟಿ ಮಾಡುತ್ತಿರುವ ಒಡ್ಡೋಲಗದ ಚಿತ್ರಣವಿದೆ. ಒಂದು ಗರುಡಗಂಬ ಮತ್ತು ದೀಪಸ್ತಂಭವಿದ್ದು ಈ ದೇವಸ್ಥಾನದಲ್ಲಿ ನಿತ್ಯವೂ ಪೂಜೆಯು ನಡೆಯುತ್ತಿದ್ದು ಶ್ರೀರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದ ಪಾಂಚರಾತ್ರ ಆಗಮದ ಪಾದ್ಮಸಂಹಿತೆಯ





ಪೂಜೆಯು ದೇವಾಲಯದ ಆರಂಭದಿಂದ ಇಲ್ಲಿಯವರೆಗೂ ನಡೆಯುತ್ತಿದ್ದು, ಇಂದಿಗೂ ಮೂರ್ತ ಮತ್ತು ಅಮೂರ್ತ ಪರಂಪರೆಗಳನ್ನು ಉಳಿಸಿಕೊಂಡು ಬಂದಿದೆ.

**ಹಳೇಬೀಡು ಶಾಂತಲೇಶ್ವರ ಮತ್ತು ಹೊಯ್ಸಳೇಶ್ವರ ದೇವಾಲಯ :** ಹಳೇಬೀಡು ಹಾಸನದಿಂದ 30 ಕಿ.ಮೀ. ದೂರದಲ್ಲಿದ್ದು, ಇದು ಹೊಯ್ಸಳರ ರಾಜಧಾನಿಯಾಗಿತ್ತು. ಇದನ್ನು ಶಾಸನಗಳಲ್ಲಿ ದ್ವಾರಸಮುದ್ರ ಎಂದು ಕರೆಯಲಾಗಿದೆ. ಹೊಯ್ಸಳರನ್ನು ದ್ವಾರಾವತೀಪುರವರಾಧೀಶ್ವರರು, ದ್ವಾರಸಮುದ್ರದ ಹೊಯ್ಸಳರು ಎಂದೇ ಸಂಬೋಧಿಸಲಾಗಿದೆ. ಈ ಹಳೇಬೀಡಿನಲ್ಲಿ ಹೊಯ್ಸಳೇಶ್ವರ ದೇವಾಲಯ, ಕೇದಾರೇಶ್ವರ ದೇವಾಲಯ, ಜೈನ ಬಸದಿ ಮತ್ತು ಶ್ರೀ ರಂಗನಾಥನ ದೇವಾಲಯಗಳು ಇವೆ.

ಹೊಯ್ಸಳೇಶ್ವರ ದೇವಾಲಯವು ಇಲ್ಲಿನ ಪ್ರಧಾನವಾದ ಆಕರ್ಷಣೆ. ಈ ದೇವಾಲಯಕ್ಕೆ ಪೂರ್ವದಲ್ಲಿ ಎರಡು ದ್ವಾರ, ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಹೀಗೆ ಒಟ್ಟು ನಾಲ್ಕು ದ್ವಾರಗಳಿವೆ. ಇದು ಹೊಯ್ಸಳ ದ್ವಿಕೂಟ ಮಾದರಿಯ ದೇವಾಲಯಗಳಾಗಿವೆ. ಈ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನ ಮುಖ್ಯದಂಡನಾಯಕನಾಗಿದ್ದ ಕೇತುಮಲ್ಲನು ಸುಮಾರು ಸಾ.ಶ. 1121ರಲ್ಲಿ ಕಟ್ಟಿಸಿದನು. ಆದರೆ ದೇವಾಲಯ ನಿರ್ಮಾಣದ ಕಾರ್ಯ ಬಹಳವರ್ಷಗಳು ಸಾಗಿತ್ತು ಎಂದು ಊಹಿಸಬಹುದು. ಈ ದೇವಾಲಯದ ಎರಡು ಗರ್ಭಗೃಹಗಳಲ್ಲಿ ಎರಡು ದೊಡ್ಡ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದ್ದು ಒಂದನ್ನು ಶಾಂತಲೇಶ್ವರ ಮತ್ತೊಂದನ್ನು ಹೊಯ್ಸಳೇಶ್ವರ ಎಂದು ಹೆಸರಿಸಲಾಗಿದೆ. ಈ ಎರಡೂ ಗರ್ಭಗೃಹಗಳ ಮುಂದೆ ಸುಖನಾಸಿ ಇದ್ದು, ಎರಡೂ ಸುಖನಾಸಿಗಳೂ ಒಂದೇ ನವರಂಗಕ್ಕೆ ತೆರೆದುಕೊಂಡಿವೆ. ಈ ನವರಂಗವು ಚೌಕವಾಗಿದ್ದರೂ ಎರಡೂ ಒಟ್ಟಾಗಿ ಸೇರಿ ಎರಡೂ ದಿಕ್ಕಿನಲ್ಲಿ ದ್ವಾರ ಹೊಂದಿರುವುದರಿಂದ ಆಯತಾಕಾರದ ಪಡಸಾಲೆಯಂತೆ ಕಂಡು ಬರುತ್ತದೆ. ಈ ನವರಂಗದಲ್ಲಿ ದ್ವಾರಪಾಲಕರಿದ್ದು, ಈ ದ್ವಾರಪಾಲಕರ ಕಿರೀಟದಲ್ಲಿ ಮಾನವರ ತಲೆಬುರುಡೆಗಳನ್ನು ಕೆತ್ತಲಾಗಿದೆ. ಇವು ನಿಜವಾದ ತಲೆ ಬುರುಡೆಗಳಂತೆ ಟೊಳ್ಳಾಗಿದ್ದು, ಕಣ್ಣು, ಬಾಯಿ ಹೊಂದಿವೆ. ಇಂತಹ ಅಪೂರ್ವ ಶಿಲ್ಪಗಳು ಇನ್ನಾವ ಹೊಯ್ಸಳ ಅಥವಾ ಇತರ ಶಿಲ್ಪಕಲೆಗಳಲ್ಲಿ ಕಂಡು ಬರುವುದಿಲ್ಲ. ನವರಂಗದ ಭುವನೇಶ್ವರಿಗಳಲ್ಲಿಯೂ ಸಹ ಅತ್ಯಪೂರ್ವ ಶಿಲ್ಪವೈಭವವನ್ನು ಕಂಡರಿಸಲಾಗಿದೆ.

ದೇವಾಲಯದ ಹೊರಭಾಗದಲ್ಲಿ ಎರಡೂ ಲಿಂಗಗಳ ಎದುರಿಗೆ ಮಂಟಪದಲ್ಲಿ ದೊಡ್ಡ ಗಾತ್ರದ ಏಕಶಿಲೆಯಿಂದ ಮಾಡಿದ ಎರಡು ನಂದಿಗಳನ್ನು ಕೆತ್ತಲಾಗಿದೆ. ಹೊಯ್ಸಳೇಶ್ವರ ನಂದಿಯ ಹಿಂಭಾಗದಲ್ಲಿ ಸೂರ್ಯನಾರಾಯಣನ ಗುಡಿಯನ್ನು ಕಾಣಬಹುದು. ಇನ್ನು ದೇವಾಲಯವು ಅಧಿಷ್ಠಾನ, ಭಿತ್ತಿಗಳಲ್ಲಿ ಮಾನವರು ಇತಿಹಾಸದಲ್ಲಿಯೇ ಕಂಡರಿಯದ ರೀತಿಯ ಅಪೂರ್ವ ಶಿಲ್ಪಗಳನ್ನು ಹೊಂದಿದೆ. ಅಧಿಷ್ಠಾನದಲ್ಲಿ ಹೊಯ್ಸಳರ ಕಾಲದ ಶೈಲಿಯ ಆನೆಸಾಲು, ಸಿಂಹದಸಾಲು, ಬಳ್ಳಿಯ ಸಾಲು, ಕುದುರೆ ಸವಾರರ ಸಾಲು, ಪುರಾಣಗಳ ಸಾಲು, ಯಾಳಿಯ ಸಾಲು, ಹಂಸಗಳ ಸಾಲು ಇತ್ಯಾದಿ ಪಟ್ಟಿಕೆಗಳನ್ನು ಇತರ ದೇವಾಲಯಗಳಿಗಿಂತ ದೊಡ್ಡಗಾತ್ರದಲ್ಲಿ ಹೊಂದಿದ್ದು, ಅತ್ಯಂತ ಆಕರ್ಷಕವಾಗಿದೆ ಮತ್ತು ಈ ಕಥಾನಕ ಶಿಲ್ಪಗಳನ್ನು ಕಂಡು ಹಿಡಿಯಲು ಸುಲಭವಾಗಿದೆ. ಕಥಾನಕಗಳ ಸಾಲಿನಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಶೈವಪುರಾಣದ ಕಥೆಗಳನ್ನು ಕೆತ್ತಲಾಗಿದೆ.



ಭಿತ್ತಿಯಲ್ಲಿ ಹಿಂದೂ ದೇವ, ದೇವತೆಗಳ ಪ್ರಧಾನವಾಗಿ ವೈಷ್ಣವ, ಶೈವ, ಶಾಕ್ತ, ಸೌರ, ಗಾಣಪತ್ಯ, ಕುಮಾರನ ವಿವಿಧ ಭಂಗಿಯ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ದೇವಾಲಯಕ್ಕೆ ಭೇಟಿ ನೀಡಿ ಶಿಲ್ಪವನ್ನು ಅಭ್ಯಾಸ ಮಾಡಿದರೆ ಇದು ಹಿಂದೂ ದೇವದೇವತೆಗಳ ಶಿಲ್ಪವಿಶ್ವಕೋಶದಂತೆ ಭಾಸವಾಗುತ್ತದೆ. ಗಜೇಂದ್ರಮೋಕ್ಷ, ಚಕ್ರದಾನಮೂರ್ತಿ, ಪಾರಿಜಾತಾಪಹರಣ, ದುರ್ಗಾ, ಮಹಿಷಮರ್ದಿನಿ, ಗಜಾಸುರಸಂಹಾರ, ತ್ರಿಮೂರ್ತಿಗಳು, ಉಗ್ರನರಸಿಂಹ ಇವೆಲ್ಲ ಇಲ್ಲಿನ ಅತ್ಯಂತ ಆಕರ್ಷಕ ಮೂರ್ತಿಶಿಲ್ಪಗಳಾಗಿವೆ. ಈ ದೇವಾಲಯ ಕಲಾತ್ಮಕತೆಯಲ್ಲಿ ಬೇಲೂರಿಗಿಂತ ಹೆಚ್ಚು ಮುಂದುವರೆದ ತಾಂತ್ರಿಕತೆಯನ್ನು ಒಳಗೊಂಡಂತೆ ಭಾಸವಾಗುತ್ತದೆ.



ದ್ವಾರಸಮುದ್ರದ ಮೇಲೆ ಆದ ಪರಕೀಯರ ದಾಳಿಗಳಿಂದ ಈ ದೇವಾಲಯವು ಸಾಕಷ್ಟು ನಾಶವಾಗಿದ್ದರೂ, ಈ ಶಿಲ್ಪಕಲೆಯ ವೈಭವ ನಮ್ಮನ್ನು ಇಂದಿಗೂ ಗತಕಾಲದ ನೆನಪನ್ನು ಅವರ ತಾಂತ್ರಿಕತೆಯನ್ನು ನಮಗೆ ನೆನಪಿಸುತ್ತದೆ. ಈ ಕಲ್ಲುಗಳನ್ನು ಇಲ್ಲಿಗೆ ಹೇಗೆ ತಂದರು, ಇದನ್ನು ಹೇಗೆ ಕೆತ್ತಿದರು, ಇದು ಆ ಕಾಲದಲ್ಲಿಯೇ ಮನುಷ್ಯರಿಂದ ಸಾಧ್ಯವಾಗಿದ್ದು ಹೇಗೆ ಎಂಬ ಪ್ರಶ್ನೆಗಳನ್ನು ನೋಡುಗನ ಮನಸ್ಸಿನಲ್ಲಿ ಮೂಡಿಸುತ್ತದೆ. ಒಟ್ಟಿನಲ್ಲಿ ಹಳೇಬೀಡು ದೇವಾಲಯ ಮಾನವನ ಒಂದು ಅಭೂತಪೂರ್ವ ಅದ್ಭುತ ಸೃಷ್ಟಿಯೇ ಸರಿ.

**ಸೋಮನಾಥಪುರದ ಕೇಶವ ದೇವಾಲಯ :** ಸೋಮನಾಥಪುರದ ಕೇಶವ ದೇವಾಲಯವು ಹೊಯ್ಸಳರ ಅತ್ಯುನ್ನತ ಪ್ರಬುದ್ಧ ಕಲೆಯ ಸಾಕ್ಷಿಯಾಗಿದೆ. ಈ ದೇವಾಲಯದ ನಿರ್ಮಾಣವು ಮೂರನೇ ನರಸಿಂಹನ ದಂಡನಾಯಕನಾಗಿದ್ದ ಸೋಮನಾಥದಂಡನಾಯಕನಿಂದ ಸಾ.ಶ. 1258 ರಲ್ಲಿ ನಡೆಯಿತು. ಈ ದೇವಾಲಯದ ನಿರ್ಮಾಣ, ಹೊಯ್ಸಳರ ವಂಶವೃಕ್ಷ, ಇಲ್ಲಿ ಪ್ರತಿಷ್ಠಾಪಿತವಾಗಿದ್ದ ದೇವರುಗಳು, ಇಲ್ಲಿ ನಡೆಯುತ್ತಿದ್ದ ಪೂಜೆ, ಅದಕ್ಕಾಗಿ ನಡೆಯುತ್ತಿದ್ದ ಸಿದ್ಧತೆಗಳು, ಹಣದ ವ್ಯವಸ್ಥೆ, ಇತ್ಯಾದಿ ಸಮಸ್ತವಿವರವನ್ನೂ ಈ ದೇವಾಲಯದ ಹೊರಭಾಗದಲ್ಲಿ ಇರುವ 91 ಸಾಲುಗಳ ಕನ್ನಡದ ಶಾಸನವು ದಾಖಲಿಸುತ್ತದೆ. ಈ ದೇವಾಲಯವು ಹೊಯ್ಸಳರ ಕಾಲದ ಅತ್ಯಂತ ಪ್ರಬುದ್ಧತೆಯನ್ನು ಹೊಂದಿದ ಶಿಲ್ಪಕಲೆಯ ಮಟ್ಟಕ್ಕೆ ಸಾಕ್ಷಿಯಾಗಿದೆ. ಸೋಮನಾಥಪುರವು ಒಂದು ಅಗ್ರಹಾರವಾಗಿದ್ದು, ಇದನ್ನು ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಎಂದು ಕರೆಯಲಾಗಿತ್ತು. ಈ ದೇವಾಲಯ ತ್ರಿಕೂಟ ದೇವಾಲಯವಾಗಿದ್ದು, ಇಲ್ಲಿ ಮೂರು ಗರ್ಭಗೃಹಗಳಲ್ಲಿ ಪ್ರಸನ್ನ ಕೇಶವ, ಗಂಡ ಪೆಂಡಾರ ಗೋಪಾಲ ಮತ್ತು ವರದ ಜನಾರ್ದನ ದೇವರನ್ನು ಹೊಂದಿತ್ತು. ಇದಲ್ಲದೇ ಇತರ ದೇವರುಗಳಾದ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳು, ಮತ್ಸ್ಯಾದಿ ದಶಾವತಾರ, ಹಂಸಾದಿ ದೇವರುಗಳನ್ನು ಪೂಜಿಸಲಾಗುತ್ತಿತ್ತು. ಆದರೆ ಪರಕೀಯರ ದಾಳಿಯಲ್ಲಿ ಈ ದೇವಸ್ಥಾನ ನಾಶವಾಗಿ ಹೋಗಿ, ಮೈಸೂರು ಅರಸರ ಕಾಲದಲ್ಲಿ ಕೆಲವು ಜೀರ್ಣೋದ್ಧಾರ ಕಾರ್ಯನಡೆದು ಇಂದು ಪೂಜೆಯಿಲ್ಲದ ದೇವಾಲಯವಾಗಿ ಗತವೈಭವದ ಮೂಕಸಾಕ್ಷಿಯಾಗಿದೆ.

ಈ ದೇವಾಲಯದ ವಿಶೇಷತೆ ಎಂದರೆ ಈ ದೇವಾಲಯದ ಎಲ್ಲಾ ಮೂರ್ತಿಗಳೂ ಸಹ ಪೂರ್ಣ ವೈಷ್ಣವ ಧರ್ಮವನ್ನೇ ಎತ್ತಿಹಿಡಿಯುತ್ತವೆ. ಹಾಗೂ ಈ ದೇವಾಲಯದ ಮೂರ್ತಿಗಳನ್ನು ಸುಲಭವಾಗಿ ಗುರುತಿಸಲಾಗುವುದಿಲ್ಲ. ಇದು ಯಾವ ಪುರಾಣ ಮತ್ತು ಆಗಮ ಗ್ರಂಥಗಳ



ನೆರವಿನಿಂದ ರೂಪುಗೊಂಡಿದೆ ಎಂಬುದು ಇಲ್ಲಿಯವರೆಗೆ ಗುರುತಿಸಲಾಗಿಲ್ಲ.

ಶ್ರೀ ಕೇಶವ ದೇವಾಲಯವು ಪೂರ್ವಾಭಿಮುಖವಾಗಿದ್ದು, ದೇವಾಲಯದ ಹೊರಭಾಗದಲ್ಲಿ ದೊಡ್ಡದಾದ ಗರುಡಗಂಬವಿದೆ. ಸುಂದರ ಸೋಪಾನಗಳ ಮೂಲಕ ಹತ್ತಿಹೋದರೆ ಈ ದೇವಾಲಯದ ಪ್ರವೇಶ ಮಂಟಪಕ್ಕೆ ನಾವು ಬರುತ್ತೇವೆ. ಹೊಯ್ಸಳರ ಕಾಲದ ಶ್ರೀಕರ ಮಾದರಿಯ ಕಂಬಗಳು ಈ ಮಂಟಪದಲ್ಲಿದ್ದು, ಈ ತೆರೆದ ಮಂಟಪದ ಉತ್ತರಭಾಗದಲ್ಲಿ ಸೋಮದಂಡನಾಥನ ಶಾಸನವನ್ನು ನಿಲ್ಲಿಸಲಾಗಿದೆ. ಮಂಟಪದ ಎತ್ತರದಲ್ಲಿಯೇ ಈ ದೇವಾಲಯದ ಸುತ್ತಲೂ ಕೈಸಾಲೆಯ ಪ್ರಾಕಾರವಿದ್ದು, ಈ ಪ್ರಾಕಾರದಲ್ಲಿ ದೇವರುಗಳಿಗಾಗಿ ಸಣ್ಣ ಸಣ್ಣ ಸನ್ನಿಧಿಗಳು ಅಥವಾ ಗರ್ಭಗೃಹಗಳಿವೆ. ಈ ಸುತ್ತಲ ಪ್ರಾಕಾರ ಕೋಟೆಯಂತೆ ಭಾಸವಾಗುತ್ತದೆ. ಪ್ರವೇಶ ಮಂಟಪದಿಂದ ಮೆಟ್ಟಿಲಿನ ಮೂಲಕ ಸುಮಾರು 3 ಅಡಿಯ ಕೆಳಗೆ ಇಳಿದರೆ ನಾವು ದೇವಾಲಯದ ಅಂಗಳಕ್ಕೆ ಪ್ರವೇಶ ಪಡೆಯುತ್ತೇವೆ. ಈ ದೇವಾಲಯವು ಮಧ್ಯಭಾಗದಲ್ಲಿದ್ದು, ಮೂರು ಶಿಖರಗಳಿಂದ ಕೂಡಿದ್ದು, ಮೂರು ಶಿಖರಗಳೂ ಸಹ ಸುಸ್ಥಿತಿಯಲ್ಲಿವೆ. ದೇವಾಲಯವನ್ನುಸುಮಾರು ಎರಡೂವರೆ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಜಗತಿಯಿಂದ ಹಿಡಿದು ಶಿಖರದ ಸ್ತೂಪಿಯವರೆಗೆ ನಕ್ಷತ್ರಾಕಾರದ ಕೋನಗಳನ್ನು ಹೊಂದಿದ್ದು ವೇಸರ ಶೈಲಿಯು ಪೂರ್ಣವಾಗಿ ಗೋಚರವಾಗುತ್ತದೆ. ಈ ಜಗತಿಯ ಕೋನಗಳಲ್ಲಿ ದಿಗ್ಗಜಗಳನ್ನು ಅಂದರೆ ಆನೆಗಳನ್ನು ಕೆತ್ತಲಾಗಿದೆ.

ಈ ಜಗತಿಯ ಪೂರ್ವದಿಕ್ಕಿನಲ್ಲಿ ಮಾತ್ರ ಸೋಪಾನ ಪ್ರವೇಶವಿದ್ದು ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದಲ್ಲಿ ಮೂರು ಗರ್ಭಗೃಹಗಳಿದ್ದು ಪೂರ್ವದಲ್ಲಿ ಕೇಶವ, ಉತ್ತರದ ಗರ್ಭಗೃಹದಲ್ಲಿ ವೇಣುಗೋಪಾಲ ಮತ್ತು ದಕ್ಷಿಣದ ಗರ್ಭಗೃಹದಲ್ಲಿ ಜನಾರ್ದನ ದೇವರು ಇದ್ದರು. ಈಗ ಪೂರ್ವದಲ್ಲಿ ಮತ್ತು ಉತ್ತರದಲ್ಲಿ ವಿಗ್ರಹಗಳು ವ್ಯತ್ಯಾಸವಾಗಿವೆ. ಗರ್ಭಗೃಹದಲ್ಲಿ ವಿಗ್ರಹದ ಹಿಂಭಾಗದ ಗೋಡೆಗಳಲ್ಲಿ ಆಭರಣಗಳನ್ನು ಇಡಲು ಎಂದು ಮಾಡಿರುವ ಗುಪ್ತಕೊಠಡಿಗಳು ಇವೆ. ಮೂರು ಗರ್ಭಗೃಹಕ್ಕೂ ಪ್ರತ್ಯೇಕ ಮೂರು ಸುಖನಾಸಿಗಳಿವೆ. ಎಲ್ಲಾ ಮೂರು ಗರ್ಭಗೃಹ ಮತ್ತು ಸುಖನಾಸಿಗಳು ಒಂದೇ ನವರಂಗಕ್ಕೆ ಪ್ರವೇಶ ಪಡೆಯುತ್ತವೆ. ನವರಂಗದಲ್ಲಿ ವೇದಿಕೆಯಿದ್ದು, ನವರಂಗದಲ್ಲಿ ಅತ್ಯದ್ಭುತ ಹೊಯ್ಸಳ ಮಾದರಿಯ ಕಂಬಗಳು, ಅತ್ಯಪೂರ್ವ ಭುವನೇಶ್ವರಿಗಳು ಇವೆ. ಪ್ರತಿ ಇಂಚಿನಷ್ಟು ಭಾಗವೂ ಸಹ ಅಲಂಕರಣದಿಂದ ಕೂಡಿರುವುದರಿಂದ ಇದನ್ನು ವರ್ಣಿಸಲು ಪದಗಳಿಗೆ ಸಾಧ್ಯವಿಲ್ಲ. ಒಳಗೆ ಕಕ್ಷ್ಯಾಸನವೂ ಸಹ ಕಂಡು ಬರುತ್ತದೆ. ದೇವತಾ ಮೂರ್ತಿಗಳಂತೂ ಸರ್ವಾಲಂಕೃತ ಸುಂದರವಾಗಿ ನಿಂತಿವೆ.

ದೇವಾಲಯದ ಹೊರಭಾಗದಲ್ಲಿ ಅಲಂಕೃತವಾದ ಅಧಿಷ್ಠಾನ, ಅದರಲ್ಲಿ ಹೊಯ್ಸಳ ಶೈಲಿಯ ಪಟ್ಟಿಕೆಗಳು, ಭಿತ್ತಿಯಲ್ಲಿ ಗಣೇಶ, ಆದಿಮೂರ್ತಿ, ಮತ್ಸ್ಯಮೂರ್ತಿ, ಕೂರ್ಮಮೂರ್ತಿ, ಕೃಷ್ಣ, ಬಲರಾಮ, ಮುಂತಾದ ಶಾಸನದಲ್ಲಿ ವರ್ಣಿಸಿರುವ ಎಲ್ಲ ದೇವರ ಮೂರ್ತಿಶಿಲ್ಪಗಳು ಕಂಡು ಬರುತ್ತವೆ. ಇವುಗಳು ನಾಲ್ಕು, ಆರು, ಎಂಟು ಕೈಗಳನ್ನು ಹೊಂದಿದ್ದು ಸಾಧಾರಣ ಶಿಲ್ಪಶಾಸ್ತ್ರಕ್ಕೆ ಹೊಂದುವುದಿಲ್ಲ. ಭಿತ್ತಿಯ ಎಲ್ಲ ಭಾಗಗಳೂ ಅಲಂಕರಣದಿಂದ ಕೂಡಿವೆ. ಮೇಲಿನ ಕಪೋತ, ಪ್ರಸ್ತರ, ಶೀಖರದ ತಲಗಳಂತೂ ಇನ್ನೂ ಹೆಚ್ಚಿನ ಅಲಂಕರಣದಿಂದ ಕೂಡಿ ಮೇರು ಪರ್ವತದಂತೆ ಗೋಚರಿಸುತ್ತದೆ. ಮೂರು ವಿಮಾನ ಶಿಖರಗಳ ಎಲ್ಲ ತಳಗಳಲ್ಲಿ ಅನೇಕ ಯಕ್ಷ, ಗಂಧರ್ವ, ಕಿನ್ನರ, ಕಿಂಪುರುಷ, ಸಿದ್ಧ, ಸಾಧ್ಯ, ರಾಕ್ಷಸ, ನಾಗರ ಅಲಂಕರಣಗಳು ಕಂಡು ಬರುತ್ತವೆ. ವಿಮಾನ ಶಿಖರದ ಸುಖನಾಸಿಯ ಭದ್ರಗಳಲ್ಲಿ, ಭದ್ರಶಾಲೆಗಳಲ್ಲಿ, ಕರ್ಣಗಳ ನಾಸಿಗಳಲ್ಲಿ ಅನೇಕ ಮೂರ್ತಿಗಳನ್ನು ನಾವು ಕಾಣಬಹುದು. ನೃತ್ಯ ಕೇಶವನ ಮತ್ತು ಯೋಗನಾರಾಯಣ, ಬರೆಯುತ್ತಿರುವ ಯಕ್ಷರ ಶಿಲ್ಪಗಳನ್ನಂತೂ ಅಪೂರ್ವವಾಗಿ ಕಂಡರಿಸಲಾಗಿದೆ. ಹೊಯ್ಸಳರ ಕಲೆಯ ಸಮಸ್ತಲಕ್ಷಣಗಳನ್ನೂ ಉಳ್ಳ ಈ ದೇವಾಲಯ ಹೊಯ್ಸಳ ಶಿಲ್ಪಕಲೆಯ ಪ್ರಮಾಣಭೂತವಾಗಿ ಇಂದಿಗೂ ಸೋಮನಾಥಪುರದಲ್ಲಿ ತಲೆ ಎತ್ತಿ ನಿಂತಿದೆ. ಆದರೆ ಇಲ್ಲಿ ಈಗ ಯಾವ ಪೂಜೆಗಳು ನಡೆಯುತ್ತಿಲ್ಲ.

ಈ ಮೂರು ದೇವಾಲಯಗಳೂ ಸಹ ಒಂದು ಸಾವಿರ ವರ್ಷದ ಭಾರತದ ಶಿಲ್ಪಕಲಾ ನೈಪುಣ್ಯಕ್ಕೆ, ಕಟ್ಟಡದ ತಾಂತ್ರಿಕತೆಗೆ, ಭಾರತೀಯ ಜ್ಞಾನಪರಂಪರೆಗೆ, ಆ ಕಾಲದ ಉಡುಗೆ– ತೊಡುಗೆ, ನಂಬಿಕೆಗಳು, ಸಮಾಜ, ಆಡಳಿತ, ರಾಜಕೀಯ, ಲೋಹಶಾಸ್ತ್ರ, ಕೆತ್ತನೆ, ವಾಸ್ತುವಿನ್ಯಾಸ, ಭೂಗರ್ಭಶಾಸ್ತ್ರ ಮುಂತಾದ ಅನೇಕ ವಿಜ್ಞಾನದ ಅಂಶಗಳಿಗೆ ಸಾಕ್ಷೀಭೂತವಾಗಿ ನಿಂತಿವೆ. ಈ ಮೂರು ದೇವಾಲಯಗಳು ಮಾತ್ರವಲ್ಲ ಎಲ್ಲ ಹೊಯ್ಸಳ ದೇವಾಲಯಗಳೂ ಸಹ ವಿಶ್ವಪರಂಪರೆಯ ಪಟ್ಟಿಯಲ್ಲಿರಲು ಯೋಗ್ಯವೇ ಆಗಿವೆ. ಈ ದೇವಾಲಯಗಳನ್ನು ಮಾನವರು ಜೀವಮಾನದಲ್ಲಿ ಒಂದು ಬಾರಿಯಾದರೂ ಸಹ ನೋಡಿ ಆನಂದಪಡಬೇಕು. ಇಂತಹ ಪರಂಪರೆಯನ್ನು ಉಳಿಸಿ, ಬೆಳೆಸಿ ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ.



**ಯೋಜನಾ ಓದುಗರಿಗೆ**

# ಕರ್ನಾಟಕ ರಾಜ್ಯೋತ್ಸವದ

**ಶುಭಾಶಯಗಳು**



# ಜಿ20: ಭೂಮಿ, ಜನತೆ, ಶಾಂತಿ ಮತ್ತು ಸಮೃದ್ಧಿ

* ಅಮಿತಾಭ್ ಕಾಂತ್

ದೇಶದ ಜಿ20 ಅಧ್ಯಕ್ಷತೆಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಸ್ಪಷ್ಟವಾದ ಕಾರ್ಯಸೂಚಿಯೊಂದನ್ನು ಹಾಕಿಕೊಟ್ಟಿದ್ದರು. ಅದೆಂದರೆ, ಜಾಗತಿಕವಾಗಿ ದಕ್ಷಿಣ ದೇಶಗಳ ಆಸಕ್ತಿಯನ್ನು ಕೇಂದ್ರದಲ್ಲಿ ಇರಿಸುವ ಮತ್ತು ಒಳಗೊಳ್ಳುವ ಅಧ್ಯಕ್ಷತೆ ನಮ್ಮದಾಗಿರಬೇಕು. ಈ ಗುರಿಯನ್ನು ನಾವು ಹೃದಯಪೂರ್ವಕವಾಗಿ ಒಪ್ಪಿಕೊಂಡು ಎಲ್ಲ ಅಡೆತಡೆಗಳನ್ನು ಅವಕಾಶವನ್ನಾಗಿ ಪರಿವರ್ತಿಸಿಕೊಂಡೆವು ಮತ್ತು ಈ ಪ್ರಕ್ರಿಯೆಯಲ್ಲಿ ಅವಿರೋಧವಾಗಿ, ಅತ್ಯಪೂರ್ವವಾದ 83 ಪಂಕ್ತಿಗಳ ನವದೆಹಲಿ ನಾಯಕರ ಘೋಷಣೆ (ಎನ್‌ಡಿಎಲ್‌ಡಿ) ಯನ್ನು ಪ್ರಕಟಿಸುವಲ್ಲಿ ಸಫಲರಾದೆವು. ಈ ಗಮನಾರ್ಹವಾದ ದಾಖಲೆಯು ಸಮಾನ ಸವಾಲುಗಳನ್ನು ಪರಿಹರಿಸುವಲ್ಲಿ ಜಾಗತಿಕ ಒಮ್ಮತದ ಬಲವನ್ನು ಎತ್ತಿ ತೋರಿಸುತ್ತದೆ.

ನವದೆಹಲಿ ನಾಯಕರ ಘೋಷಣೆಯು ಸಂಘರ್ಷ ಮತ್ತು ವಿಭೇದದಿಂದ ಅಭಿವೃದ್ಧಿ ಮತ್ತು ಸಹಕಾರದೆಡೆಗಿನ ಮೂಲಭೂತ ಲಕ್ಷ್ಯದ ಸ್ಥಿತ್ಯಂತರವನ್ನು ಪ್ರತಿನಿಧಿಸುತ್ತದೆ. ಜಿ20 ದೇಶಗಳ ನಡುವೆ ನಿಯಂತ್ರಣಗಳ ಹೊಂದಾಣಿಕೆ ಮತ್ತು ಕಾರ್ಯನೀತಿಗಳನ್ನು ವೃದ್ಧಿಸುವಲ್ಲಿ ಭಾರತ ಜಾಗತಿಕ ನಾಯಕನಾಗಿ ಹೊರಹೊಮ್ಮಿರುವುದನ್ನು ಇದು ತೋರಿಸುತ್ತದೆ; ಹವಾಮಾನ ಬದಲಾವಣೆ ಮತ್ತು ಒಳಗೊಳ್ಳುವ ಅಭಿವೃದ್ಧಿಯ ಆಶಯಗಳನ್ನು ಮುಂದೊತ್ತುತ್ತಲೇ ಹೆಚ್ಚು ನಂಬಿಕಾರ್ಹವಾದ ಮತ್ತು ಊಹಿಸಬಹುದಾದ ವ್ಯಾಪಾರ, ಹೂಡಿಕೆ ಮತ್ತು ಪೂರೈಕೆ ಸರಪಳಿಗಳನ್ನು ಪೋಷಿಸಲು ಪ್ರಯತ್ನಿಸುತ್ತದೆ.



**ಭಾರತದ ಜಿ20 ಅಧ್ಯಕ್ಷತೆಯು ಒಂದು ಮೈಲುಗಲ್ಲಾಗಿದ್ದು, ಹವಾಮಾನ ಬದಲಾವಣೆ ಮತ್ತು ಅಭಿವೃದ್ಧಿಯ ಕಾರ್ಯಸೂಚಿಗಾಗಿ ಯಶಸ್ವಿಯಾಗಿ ಹೋರಾಡಿದೆ ಮತ್ತು ದೇಶಗಳು ಬಡತನ ನಿವಾರಣೆ ಹಾಗೂ ಪರಿಸರ ಸಂರಕ್ಷಣೆ ನಡುವೆ ಆಯ್ಕೆ ಮಾಡಿಕೊಳ್ಳಬೇಕಿಲ್ಲ ಎಂದು ಪ್ರತಿಪಾದಿಸಿದೆ. ಭಾರತದ ಅಭಿವೃದ್ಧಿ ಮಾದರಿಯು ಸಾಮಾಜಿಕ-ಆರ್ಥಿಕ ಸ್ಥಿತ್ಯಂತರಗಳನ್ನು ತರುವಲ್ಲಿ ತನ್ನದೇ ಅನುಭವಗಳನ್ನು ಬಳಸಿಕೊಂಡಿದ್ದು, ಜಗತ್ತಿನ ಮನ್ನಣೆಗೆ ಪಾತ್ರವಾಗಿದೆ. ಜನ ಭಾಗೀದಾರಿ ಕಾರ್ಯಕ್ರಮದ ಮೂಲಕ ದೇಶದೆಲ್ಲೆಡೆಯ ನಾಗರಿಕರು ಜಿ20ಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲಾಗಿತ್ತು.**

### ಬಲಿಷ್ಟ, ಸುಸ್ಥಿರ, ಸಮತೋಲಿತ ಮತ್ತು ಒಳಗೊಳ್ಳುವ ಪ್ರಗತಿ

ದೇಶದ ಸಮೃದ್ಧಿ ಹಾಗೂ ಅಭಿವೃದ್ಧಿ ಸಾಮರ್ಥ್ಯವು ಆರ್ಥಿಕ ಬೆಳವಣಿಗೆಯನ್ನು ಆಧರಿಸಿರುತ್ತದೆ ಎಂಬುದನ್ನು ಗುರುತಿಸುವ ನವದೆಹಲಿ ಘೋಷಣೆಯು ಬಲಿಷ್ಟ, ಸುಸ್ಥಿರ, ಸಮತೋಲಿತ ಮತ್ತು ಒಳಗೊಳ್ಳುವ ಪ್ರಗತಿಯ ಅಗತ್ಯವನ್ನು ಅರ್ಥ ಮಾಡಿಕೊಂಡಿದ್ದು, ಇದರಲ್ಲಿ ಖಾಸಗಿ ಉದ್ಯಮಗಳು, ವಿಶೇಷವಾಗಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್ಎಂಇ) ಹಾಗೂ ಸ್ಟಾರ್ಟ್‌ಅಪ್‌ಗಳ ಪ್ರಮುಖ ಪಾತ್ರವನ್ನು ಸ್ಪಷ್ಟವಾಗಿ ಗುರುತಿಸುತ್ತದೆ. ಹೆಚ್ಚುವರಿಯಾಗಿ, ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯುಟಿಓ) ಯ ಸುಧಾರಣೆಯೊಟ್ಟಿಗೆ ವ್ಯಾಪಾರ ಹಾಗೂ ಹೂಡಿಕೆ ಕಾರ್ಯನೀತಿಗಳನ್ನು ಉತ್ತೇಜಿಸುವ ಮೂಲಕ ನಾಯಕತ್ವದ

* ಭಾರತದ ಜಿ20 ಶೆರ್ಪಾ ಮತ್ತು ಮಾಜಿ ಮುಖ್ಯಕಾರ್ಯನಿರ್ವಹಣಾಧಿಕಾರಿ, ನೀತಿ ಆಯೋಗ. ಇಮೇಲ್: g20sherpaoffice@mea.gov.in




ಬದ್ಧತೆಯನ್ನು ಸಾಬೀತುಪಡಿಸುತ್ತದೆ. ಅಷ್ಟಲ್ಲದೆ, ಘೋಷಣೆಯು ಕೌಶಲಗಳ ಕಂದರವನ್ನು ಮುಚ್ಚಲು, ಗೌರವಯುತ ಕೆಲಸವನ್ನು ಉತ್ತೇಜಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಅವಕಾಶ ಹಾಗೂ ಸಂಪನ್ಮೂಲಗಳನ್ನು ಒದಗಿಸಲು ಬದ್ಧತೆಯನ್ನು ತೋರಿಸಿದೆ.

ಭ್ರಷ್ಟಾಚಾರ ವಿರುದ್ಧದ ಹೋರಾಟಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಪ್ರಾಮಾಣಿಕತೆಯನ್ನು ಪೋಷಿಸಲು ಬದ್ಧತೆಯನ್ನು ಮರುವ್ಯಕ್ತಪಡಿಸುತ್ತಲೇ, ಈ ಜಾಗತಿಕ ಪಿಡುಗನ್ನು ತಡೆಗಟ್ಟಲು ಸಂಯೋಜಿತ ಪ್ರಯತ್ನಗಳು ನಡೆಯಬೇಕು ಎಂದು ಘೋಷಣೆ ಹೇಳುತ್ತದೆ.

**ಎಸ್‌ಡಿಜಿಗಳ ಪ್ರಗತಿಯ ವೇಗವರ್ಧನೆ**

ಜಗತ್ತು ಶೀಘ್ರವಾಗಿ ಗಮನ ಹರಿಸಬೇಕಾದ ಅಸ್ತಿತ್ವಕ್ಕೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುತ್ತಿದ್ದು, ಸಂದಿಗ್ಧ ಸ್ಥಿತಿಯಲ್ಲಿದೆ. ಇತ್ತೀಚಿನ ವಿಶ್ವಸಂಸ್ಥೆಯ ಎಸ್‌ಡಿಜಿ ವರದಿ ಪ್ರಕಾರ, ಎಸ್‌ಡಿಜಿ ಗುರಿಗಳಲ್ಲಿ ಕೇವಲ ಶೇ.12ರಷ್ಟು ಮಾತ್ರ ಪ್ರಗತಿ ಪಥದಲ್ಲಿದ್ದು, ಶೇ.30ರಷ್ಟು 2015ರಿಂದ ನಿಶ್ಚಲಗೊಂಡಿವೆ ಇಲ್ಲವೇ ಹಿನ್ನಡೆ ಅನುಭವಿಸುತ್ತಿವೆ. 2015–2020ರ ಅವಧಿಯಲ್ಲಿ 50 ದಶಲಕ್ಷ ಹೆಕ್ಟೇರ್ ಅರಣ್ಯ ನಾಶವಾಗಿದೆ ಮತ್ತು ಹವಾಮಾನ ಸಂಬಂಧಿ ಅವಘಡಗಳಿಂದ 1.5 ಸೆಂ. ತಾಪಮಾನ ಹೆಚ್ಚಳದ ತೂಗುಕತ್ತಿ ನೇತಾಡುತ್ತಿದೆ. ಇದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹೆಚ್ಚು ಹಾನಿಗೆ ಸಿಲುಕಲಿವೆ.

ಜಾಗತಿಕವಾಗಿ ಅಧಿಕ ಹಣದುಬ್ಬರ, ಬಿಗಿ ಆರ್ಥಿಕ ಕಾರ್ಯನೀತಿಗಳು, ಸಾಲಕ್ಕೆ ನಿರ್ಬಂಧ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಸಾಲದ ಹೊರೆ ಹೆಚ್ಚಳವಲ್ಲದೆ, ಕೊವಿಡ್ ನಂತರದ ಪುನಶ್ಚೇತನ ಪ್ರಕ್ರಿಯೆಗಳು ಹೆಚ್ಚುವರಿ ಸವಾಲುಗಳನ್ನು ಒಡ್ಡಿವೆ. ಕಾರ್ಯಸೂಚಿ 2030ರನ್ವಯ ದೇಶಗಳು ಆರ್ಥಿಕ ಅಭಿವೃದ್ಧಿಗೆ ಹಾಗೂ ಹವಾಮಾನ ಬದಲಾವಣೆ–ಹೊಂದಾಣಿಕೆಗೆ ಅಗತ್ಯ ಹೂಡಿಕೆ ಮಾಡಬೇಕಾದ ಸಂದಿಗ್ಧವನ್ನು ಒಮ್ಮೆಲೇ ಎದುರಿಸುತ್ತಿವೆ.

ಭಾರತದ ಜಿ20 ಅಧ್ಯಕ್ಷತೆಯು ಒಂದು ಮೈಲುಗಲ್ಲಾಗಿದ್ದು, ಹವಾಮಾನ ಬದಲಾವಣೆ ಮತ್ತು ಅಭಿವೃದ್ಧಿ ಕಾರ್ಯಸೂಚಿಗಾಗಿ ಯಶಸ್ವಿಯಾಗಿ ಹೋರಾಡಿದೆ ಮತ್ತು ದೇಶಗಳು ಬಡತನ ನಿವಾರಣೆ ಹಾಗೂ ಪರಿಸರ ಸಂರಕ್ಷಣೆ ನಡುವೆ ಆಯ್ಕೆ ಮಾಡಿಕೊಳ್ಳಬೇಕಿಲ್ಲ ಎಂದು ಪ್ರತಿಪಾದಿಸಿದೆ. ಭಾರತದ ನೇತೃತ್ವದಲ್ಲಿ ಅಭಿವೃದ್ಧಿಯನ್ನು ತ್ವರಿತಗೊಳಿಸಲು ದತ್ತಾಂಶದ ಪಾತ್ರದ ಪ್ರಾಮುಖ್ಯತೆಯನ್ನು ಹಾಗೂ ತ್ವರಿತಗೊಳಿಸುವ ಮಾರ್ಗವನ್ನು ಬಳಸಿಕೊಂಡು, ಎಸ್‌ಡಿಜಿಗಳ ಪ್ರಗತಿಯ ವೇಗವರ್ಧನೆಗೆ ಕ್ರಿಯಾಯೋಜನೆಯೊಂದನ್ನು ಪ್ರಸ್ತಾಪಿಸಲಾಗಿದೆ. ಜಿ20ರ ಅಭಿವೃದ್ಧಿಗಾಗಿ ದತ್ತಾಂಶ ಬಳಸುವಿಕೆ (ಡಿ4ಡಿ)ಯನ್ನು ಉತ್ತೇಜಿಸುವ ತತ್ವವು ಈ ಬದ್ಧತೆಯನ್ನು ಇನ್ನಷ್ಟು ಬಲಪಡಿಸುತ್ತದೆ. ಅಷ್ಟಲ್ಲದೆ, ಸುಸ್ಥಿರ ಅಭಿವೃದ್ಧಿಯ ಅತ್ಯಗತ್ಯ ಭಾಗವಾದ ಸಿರಿಧಾನ್ಯಗಳ ಕೃಷಿಗೆ ಉತ್ತೇಜನ ಸೇರಿದಂತೆ ಆಹಾರ ಭದ್ರತೆ ಮತ್ತು ಪೋಷಣೆ–2023ಕ್ಕೆ ಸಂಬಂಧಿಸಿದ ಜಿ20ರ ದಕ್ಷಿಣ ಉನ್ನತ ಹಂತದ ತತ್ವಗಳು (ಡೆಕ್ಕನ್ ಎಚ್‌ಎಲ್‌ಪಿ) ಜಾಗತಿಕ ಆಹಾರ ಮತ್ತು ಪೋಷಕಾಂಶ ಸುರಕ್ಷತೆಯನ್ನು ಖಾತ್ರಿಪಡಿಸುವ ಭರವಸೆಯನ್ನು ನೀಡುತ್ತವೆ.

ಭಾರತದ ಜಿ20 ಅಧ್ಯಕ್ಷತೆಯು ಆರೋಗ್ಯದ ಮೇಲೆ ಹವಾಮಾನ ಬದಲಾವಣೆಯ ಅಗಾಧ ಪರಿಣಾಮವನ್ನು ಗುರುತಿಸಿದೆ ಮತ್ತು ಮುಂದೆ ಬರಲಿರುವ ಆರೋಗ್ಯ ಸವಾಲುಗಳನ್ನು ಎದುರಿಸಲು ಡಿಜಿಟಲ್ ಆರೋಗ್ಯದ ಜಾಗತಿಕ ಉಪಕ್ರಮವೊಂದನ್ನು ಸ್ಥಾಪಿಸಿದೆ.

ಜಾಗತಿಕ ಸವಾಲುಗಳ ಈ ಯುಗದಲ್ಲಿ ಭಾರತದ ಮಾರ್ಗವು ಭೂಮಿ ರಕ್ಷಣೆ, ಸುಸ್ಥಿರ ಬೆಳವಣಿಗೆ ಮತ್ತು ಒಳಗೊಳ್ಳುವಿಕೆಯೊಂದಿಗೆ ಸಮನ್ವಯವುಳ್ಳ ಸಿದ್ಧಾಂತದೊಂದಿಗೆ ಪ್ರತಿಧ್ವನಿಸುತ್ತಿದೆ. ಈ ನಂಬಿಕೆಗಳು ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ತಮ್ಮ ಅಡಿಪಾಯ ಹೊಂದಿದ್ದು, ಸಮಾನ ಹಾಗೂ ಸುಸ್ಥಿರ ಜಗತ್ತಿನೆಡೆಗಿನ ಪ್ರಯಾಣದಲ್ಲಿ ನಮಗೆ ಮಾರ್ಗದರ್ಶನ ಮಾಡಿವೆ. ಮಹಾತ್ಮ ಗಾಂಧೀಜಿ ಮತ್ತು ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತಿತರ ಚಿಂತಕರಿಂದ ಸ್ಫೂರ್ತಿ ಪಡೆದಿದ್ದು, ಅದು 2030ರ ಕಾರ್ಯಸೂಚಿಯ ಸಾರದೊಂದಿಗೆ ಸಮ್ಮಿಳಿತಗೊಂಡಿದೆ; ಎಲ್ಲರೂ ಭೂಮಿಯಲ್ಲಿ ಸೌಹಾರ್ದದಿಂದ ಬದುಕುತ್ತಲೇ ಆರ್ಥಿಕ ಸಮೃದ್ಧಿಯನ್ನು ಹೊಂದುವ ಅವಕಾಶವನ್ನು ಕಲ್ಪಿಸುತ್ತದೆ. ಈ ಸಂಪೂರ್ಣಾತ್ಮಕ ಮಾರ್ಗವು ಭಾರತದ ಸುಸ್ಥಿರ ಬೆಳವಣಿಗೆ ಹಾದಿಯನ್ನು ರೂಪಿಸಿದೆ. ಆದರೂ, ಎಸ್‌ಡಿಜಿಗೆ ವಾರ್ಷಿಕ ಶತಕೋಟಿಯಿಂದ

ಟ್ರಿಲಿಯನ್ ಪೌಂಡ್‌ವರೆಗಿನ ಅನುದಾನದ ಕೊರತೆಯಿದ್ದು, ದೇಶಗಳು ಶುದ್ಧ ಇಂಧನಕ್ಕೆ ಸ್ಥಿತ್ಯಂತರಗೊಳ್ಳಲು ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಹಣಕಾಸಿನ ಪಾತ್ರದ ಪ್ರಾಮುಖ್ಯತೆ ಬಗ್ಗೆ ತಿಳಿಸಿಕೊಡುತ್ತದೆ. ಜಿ20 ರೂಪಿಸಿದ – ಎಸ್‌ಡಿಜಿಗಳ ಪ್ರಗತಿಯ ವೇಗವರ್ಧನೆಗೆ ಕ್ರಿಯಾಯೋಜನೆ–2023 ಒಂದು ಮೈಲುಗಲ್ಲು ಸಾಧನೆಯಾಗಿದ್ದು, ಸಮಾನ, ಬಲಿಷ್ಠ, ಸುಸ್ಥಿರ ಮತ್ತು ಒಳಗೊಂಡ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತಲೇ ಹಣಕಾಸು ಮತ್ತು ತಂತ್ರಜ್ಞಾನದ ಲಭ್ಯತೆಯ ಸವಾಲುಗಳನ್ನು ಪರಿಹರಿಸುತ್ತದೆ.

### ಹಸಿರು ಅಭಿವೃದ್ಧಿ ಒಪ್ಪಂದ, ಹವಾಮಾನ ಹಣಕಾಸು ಮತ್ತು ಮಿಷನ್ ಲೈಫ್

ಭಾರತ ಅಧ್ಯಕ್ಷತೆಯ ನವದೆಹಲಿ ನಾಯಕರ ಘೋಷಣೆ (ಎನ್‌ಡಿಎಲ್‌ಡಿ) ಯಲ್ಲಿ ಮುಂದಿನ ದಶಕದಲ್ಲಿ ಜಾಗತಿಕ ಸಹಕಾರದ ಮೂಲಕ ಪರಿಸರ ಸಂಕಷ್ಟವನ್ನು ನಿರ್ವಹಿಸಲು ರೂಪಿಸಿದ ಸಮಗ್ರ ಮಾರ್ಗನಕ್ಷೆಯಲ್ಲಿ 'ಹಸಿರು ಅಭಿವೃದ್ಧಿ ಒಪ್ಪಂದ' ಕೂಡ ಸೇರಿದೆ.

ಈ ಒಪ್ಪಂದಕ್ಕೆ ಬದ್ಧರಾಗುವ ಮೂಲಕ ಜಿ20 ನಾಯಕರು ಪಾರಿಸರಿಕವಾಗಿ ಸುಸ್ಥಿರವಾದ ಮತ್ತು ಎಲ್ಲರನ್ನೂ ಒಳಗೊಂಡ ಆರ್ಥಿಕ ಬೆಳವಣಿಗೆಗೆ ಹಾಗೂ ದಕ್ಷಿಣದ ದೇಶಗಳಿಗೆ ಲಾಭದಾಯಕವಾಗುವಂತೆ ಸಮಗ್ರ ಮತ್ತು ಸಮತೋಲನದ ಅಭಿವೃದ್ಧಿಯನ್ನು ನಿರ್ವಹಿಸಲು ಪಣ ತೊಟ್ಟರು. ಎಲ್ಲ ದೇಶಗಳು ಪ್ಯಾರಿಸ್ ಒಪ್ಪಂದದ ತಾಪಮಾನ ಗುರಿಗಳು ಹಾಗೂ ಭವಿಷ್ಯದಲ್ಲಿ ಹಸಿರು ಮನೆ ಅನಿಲ (ಜಿಎಚ್‌ಜಿ) ಹೊರಸೂಸುವಿಕೆಗಳನ್ನು ಕಡಿತಗೊಳಿಸುವ ಗುರಿಗೆ ಅನುಗುಣವಾಗಿ ರಾಷ್ಟ್ರೀಯವಾಗಿ ನಿರ್ಧರಿಸಿದ ದೇಣಿಗೆ (ಎನ್‌ಡಿಸಿಗಳು) ಯೊಂದಿಗೆ ಹೊಂದಿಸಿಕೊಳ್ಳಬೇಕು. ಹವಾಮಾನ ಕ್ರಿಯೆಗಳನ್ನು ಹೊಂದಾಣಿಕೆ, ಅಳವಡಿಸಿಕೊಳ್ಳುವಿಕೆ ಹಾಗೂ ಅನುಷ್ಠಾನದ ರೀತಿಗಳು ಮತ್ತು ಬೆಂಬಲಿಸುವಿಕೆ ಸೇರಿದಂತೆ ಸಿಓಪಿ ಕಾಪ್28ರಲ್ಲಿ ನಿಗದಿಪಡಿಸಿದ ಜಾಗತಿಕ ಇಂಗಾಲ ಪ್ರಮಾಣಕ್ಕೆ ಬದ್ಧರಾಗಿರಬೇಕು ಎಂದು ಜಿ20 ದೇಶಗಳು ಬೇರೆಲ್ಲ ದೇಶಗಳಿಗೆ ಕರೆ ನೀಡಿದವು.

ಇಂಧನ ಸ್ಥಿತ್ಯಂತರಕ್ಕೆ ಸಂಬಂಧಿಸಿದಂತೆ ಜಿ20 ಜಲಜನಕ, ಮುಖ್ಯ ಖನಿಜಗಳಲ್ಲಿ ಸಹಯೋಗ, ಜೈವಿಕ ಉರುವಲಿಗೆ ಜಾಗತಿಕ ಸಹಭಾಗಿತ್ವ ಮತ್ತು ಮರುಬಳಸಬಹುದಾದ ಇಂಧನಗಳ ಸಾಮರ್ಥ್ಯವನ್ನು ಮೂರು ಪಟ್ಟು ಹೆಚ್ಚಳಗೊಳಿಸುವುದು ಸೇರಿದಂತೆ ಉನ್ನತ ಹಂತದ ಒಪ್ಪಿಗೆ(ಎಚ್‌ಎಲ್‌ಪಿ)ಗಳಿಗೆ ಸಮ್ಮತಿಸಿದವು. ಹವಾಮಾನ ಬದಲಾವಣೆ, ಜೈವಿಕ ಸಂಪನ್ಮೂಲಗಳ ನಾಶ ಮತ್ತು ಮಾಲಿನ್ಯವನ್ನು ನಿರ್ವಹಿಸುವಲ್ಲಿ ಆರೋಗ್ಯ ವ್ಯವಸ್ಥೆಗಳ ಪಾತ್ರಕ್ಕೆ ಎನ್‌ಡಿಎಲ್‌ಡಿ ಒತ್ತು ನೀಡಿದ್ದು, ಪ್ಲಾಸ್ಟಿಕ್ ಮಾಲಿನ್ಯವನ್ನು ಅಂತ್ಯಗೊಳಿಸುವುದು ಮತ್ತು ಆವೃತ್ತೀಯ ಆರ್ಥಿಕತೆಯನ್ನು ಉತ್ತೇಜಿಸುವ ಬಗ್ಗೆ ಪ್ರಬಲ ಸಂದೇಶವನ್ನು ರವಾನಿಸಿತು. ಈ ಒಪ್ಪಂದದಲ್ಲಿ ಸುಸ್ಥಿರ ಅಭಿವೃದ್ಧಿಗೆ ಜೀವನ ಶೈಲಿಗಳು ಕುರಿತ ಎಚ್‌ಎಲ್‌ಪಿ ಕೂಡ ಇದ್ದು, 2030ರೊಳಗೆ ಮಾಲಿನ್ಯವನ್ನು ಗಮನಾರ್ಹವಾಗಿ ಕಡಿತಗೊಳಿಸುವುದೂ ಸೇರಿಕೊಂಡಿದೆ.

ಲೈಫ್, ಭಾರತ ಜಗತ್ತಿಗೆ ನೀಡಿದ ವಿಶಿಷ್ಟ ಕೊಡುಗೆಯಾಗಿದ್ದು, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಮುನ್ನೋಟದಿಂದ ಸೃಷ್ಟಿಯಾದ, ಭಾರತದ ಸಾಂಪ್ರದಾಯಿಕ, ಸುಸ್ಥಿರ ಆಚರಣೆಗಳು ಮತ್ತು ತಾತ್ವಿಕ ಜ್ಞಾನವನ್ನು ಅಳೆಯಬಹುದಾದ, ಸಮುದಾಯಗಳು ಬಳಸುವ ಮತ್ತು ಉತ್ಪಾದಿಸುವ ದಾರಿಯನ್ನು ಬದಲಿಸಲು ನಡೆಸುವ ಜಾಗತಿಕ ಆಂದೋಲನವಾಗಿರಲಿದೆ. ಹವಾಮಾನ ನ್ಯಾಯ ಮತ್ತು ಸಮಾನತೆಗೆ ಭಾರತದ ಬದ್ಧತೆಗೆ ಎನ್‌ಡಿಎಲ್‌ಡಿಯಲ್ಲಿ ಸಾಕ್ಷ್ಯ ಇರಲಿದ್ದು, ಉತ್ತರದ ದೇಶಗಳು ಹವಾಮಾನ ಬದಲಾವಣೆಯನ್ನು ಎದುರಿಸಲು ಹಾಗೂ ಸುಸ್ಥಿರ ಬೆಳವಣಿಗೆ ಯನ್ನು ಬೆಂಬಲಿಸಲು ಸಾಕಷ್ಟು ಆರ್ಥಿಕ ಬೆಂಬಲ ಹಾಗೂ ತಂತ್ರಜ್ಞಾನವನ್ನು ಪೂರೈಸಲು ಕರೆ ನೀಡುತ್ತದೆ. 2024ರೊಳಗೆ ಹವಾಮಾನ ಹಣಕಾಸು ಪೂರೈಕೆಗೆ ಮಹತ್ವಾಕಾಂಕ್ಷಿ, ಪಾರದರ್ಶಕವಾದ ಮತ್ತು ಜಾಡು ಹಿಡಿಯಬಹುದಾದ 100 ಶತಕೋಟಿ £ ಪೌಂಡ್ ಮೊತ್ತದ ನೂತನ ಸಂಗ್ರಹಿತ ಪ್ರಮಾಣಾತ್ಮಕ ಗುರಿ (ಎನ್‌ಸಿಕ್ಯುಜಿ) ಯನ್ನು ಸ್ಥಾಪಿಸಬೇಕೆಂದು ಘೋಷಣೆ ಒತ್ತಾಯಿಸುತ್ತದೆ; 2025ರೊಳಗೆ 2019ರ ಇಂಗಾಲದ ಪ್ರಮಾಣವನ್ನು ತಲುಪಲು ಸಂಗ್ರಹಿತ ಅಳವಡಿಕೆ ಹಣಕಾಸನ್ನು ದುಪ್ಪಟ್ಟುಗೊಳಿಸಬೇಕೆಂದು ಹೇಳುತ್ತದೆ.

ಅಭಿವೃದ್ಧಿಶೀಲ ದೇಶಗಳು ಎನ್‌ಡಿಸಿಯನ್ನು 2030ರೊಳಗೆ ತಲುಪಲು ಅಗತ್ಯವಾದ 5.9 ಟ್ರಿಲಿಯನ್ £ ಪೌಂಡ್



ಮತ್ತು ಶುದ್ಧ ಇಂಧನ ತಂತ್ರಜ್ಞಾನಗಳಿಗಾಗಿ ಹೆಚ್ಚುವರಿ ವಾರ್ಷಿಕ 4 ಟ್ರಿಲಿಯನ್ £ ಪೌಂಡ್ ಅಗಾಧ ಪ್ರಮಾಣದ ಮೊತ್ತ ಅವಶ್ಯಕ ಎಂಬುದನ್ನು ಅಭಿವೃದ್ಧಿ ಹೊಂದಿದ ಪ್ರಮುಖ ಆರ್ಥಿಕತೆಗಳು ಅರ್ಥ ಮಾಡಿಕೊಂಡಿವೆ. ದಕ್ಷಿಣ ದೇಶಗಳ ಅಪಾರ ಅಗತ್ಯದ ಮೇಲೆ ಇದು ಬೆಳಕು ಚೆಲ್ಲಿದೆ.

ಜಿ20 ಹಣಕಾಸು ಪೂರೈಕೆ ಅಗತ್ಯವನ್ನು ಗುರುತಿಸಿದ್ದು, ಉತ್ತಮವಾದ, ಭಾರಿಯಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕ್(ಎಂಡಿಬಿ)ಗಳಿಗೆ ಪ್ರಾಮುಖ್ಯತೆ ನೀಡಿದೆ ಮತ್ತು ಸಾಲ ಮರುಪಾವತಿ ಒಪ್ಪಂದಗಳಲ್ಲಿ ಕರೆನ್ಸಿ ವಿನಿಮಯ ಖಾತ್ರಿಗಳು ಮತ್ತು ನೈಸರ್ಗಿಕ ಅವಘಡಗಳಿಗೆ ಷರತ್ತುಗಳನ್ನು ಅಳವಡಿಸುತ್ತಿದ್ದು, ಸ್ಪಂದನಶೀಲ ಅಂತಾರಾಷ್ಟ್ರೀಯ ಅಭಿವೃದ್ಧಿ ಹಣಕಾಸು ವ್ಯವಸ್ಥೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಭಾರತ ವಿಶ್ವಸಂಸ್ಥೆಯಲ್ಲಿ ಸುಧಾರಣೆಗಳನ್ನು ವಿಶೇಷವಾಗಿ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಂಥ ಪ್ರಮುಖ ಅಂಗದ ಪುನರ್‌ವಿನ್ಯಾಸ ಪ್ರಯತ್ನದಲ್ಲಿ ಮುಂಚೂಣಿಯಲ್ಲಿದ್ದು, ದಕ್ಷಿಣದ ದೇಶಗಳ ಹಿತಾಸಕ್ತಿಯನ್ನು ಕಾಪಾಡಬಲ್ಲ ವ್ಯವಸ್ಥೆಯ ಸ್ಥಾಪನೆಯನ್ನು ಗುರಿಯಾಗಿಸಿಕೊಂಡಿದೆ.

### ತಾಂತ್ರಿಕ ಸ್ಥಿತ್ಯಂತರ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯ(ಡಿಪಿಐ)

ಸಾಮಾಜಿಕ-ಆರ್ಥಿಕ ಸ್ಥಿತ್ಯಂತರದಲ್ಲಿ ನಮ್ಮದೇ ಅನುಭವಗಳನ್ನು ಆಧರಿಸಿರುವ ಭಾರತದ ಅಭಿವೃದ್ಧಿ ಮಾದರಿಯು ಜಾಗತಿಕ ಮನ್ನಣೆಯನ್ನು ಗಳಿಸಿಕೊಂಡಿದೆ. ಭಾರತದಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯ(ಡಿಪಿಐ)ಗಳ ಪ್ರಭಾವ ಅಗಾಧವಾದುದು. ಡಿಜಿಟಲ್ ಪಾವತಿ, ಕೊ-ವಿನ್, ಡಿಜಿಲಾಕರ್ ಅಥವಾ ನೇರ ಹಣ ವರ್ಗಾವಣೆಯಲ್ಲಿ ದೂರದ ಪ್ರದೇಶಗಳನ್ನು ತಲುಪುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸಿದ್ದು, ಬದುಕುಗಳನ್ನು ಬದಲಿಸಿದೆ. ಈ ಪರಿಣಾಮಕಾರಿ ಪ್ರಯಾಣವು ಜಿ20 ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಕ್ಕೆ ಚೌಕಟ್ಟನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಜಗತ್ತಿನೆಲ್ಲೆಡೆಯ ದೇಶಗಳು ಇಂಥದ್ದೇ ಡಿಪಿಐ ಯನ್ನು ಒಪ್ಪಿಕೊಳ್ಳಲು, ಅಭಿವೃದ್ಧಿಪಡಿಸಲು ಮತ್ತು ಮೇಲ್ದರ್ಜೆಗೇರಿಸಲು ನೆರವಾಗಲಾಗುತ್ತಿದೆ.




ಒನ್ ಫ್ಯೂಚರ್ ಅಲಯನ್ಸ್‌ನ ಸಹಭಾಗಿತ್ವದಲ್ಲಿ ಕಡಿಮೆ ಮತ್ತು ಮಧ್ಯಮ ಆದಾಯದ ದೇಶ(ಎಲ್‌ಎಂಐಸಿ)ಗಳಿಗೆ ತಮ್ಮದೇ ಡಿಪಿಐಗಳನ್ನು ಸೃಷ್ಟಿಸಿಕೊಳ್ಳಲು ಸಾಮರ್ಥ್ಯ ನಿರ್ಮಾಣ ಮತ್ತು ಆರ್ಥಿಕ ಬೆಂಬಲ ಎರಡನ್ನೂ ನೀಡಲಾಗುತ್ತಿದೆ. ಈ ಸಾಮುದಾಯಿಕ ಪ್ರಯತ್ನವು ದೇಶಗಳು ತಮ್ಮ ಸಮುದಾಯಗಳ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಡಿಜಿಟಲ್ ಮೂಲಸೌಲಭ್ಯವನ್ನು ಬೆಳೆಸಿಕೊಳ್ಳಲು ನೆರವಾಗುವ ಗುರಿ ಹೊಂದಿದೆ.

### ಲಿಂಗ ಸಮಾನತೆ ಮತ್ತು ಮಹಿಳೆಯರು ಹಾಗೂ ಮಕ್ಕಳ ಸಬಲೀಕರಣ

ನವದೆಹಲಿ ಘೋಷಣೆಯು ಬಹುಮುಖಿ ಆಯಾಮವುಳ್ಳದ್ದಾಗಿದ್ದು, ಎಲ್ಲರನ್ನೂ ಒಳಗೊಳ್ಳುವ ಮಾನವ ಕೇಂದ್ರಿತ ಅಭಿವೃದ್ಧಿಯ ನಾನಾ ಅಂಶಗಳನ್ನು ಒಳಗೊಂಡಿದೆ. ಮಹಿಳಾ ಕೇಂದ್ರಿತ ಅಭಿವೃದ್ಧಿ, ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ, ಲಿಂಗ ಒಳಗೊಳ್ಳುವಿಕೆಯನ್ನುಳ್ಳ ಹವಾಮಾನ ಚಟುವಟಿಕೆ ಮತ್ತು ಮಹಿಳೆಯರ ಆಹಾರ ಸುರಕ್ಷೆಯನ್ನು ಗುರಿಯಾಗಿಟ್ಟುಕೊಂಡಿದ್ದು, ಲಿಂಗ ಸಮಾನತೆ ಹಾಗೂ ಮಹಿಳೆಯರು ಮುನ್ನಡೆಸುವ ಅಭಿವೃದ್ಧಿಯ ಅತ್ಯಂತ ಮಹತ್ವಾಕಾಂಕ್ಷಿ ಸಂದೇಶವಾಗಿದೆ. ಅಷ್ಟಲ್ಲದೆ, ಮಹಿಳಾ ಸಬಲೀಕರಣಕ್ಕೆ ಜಿ20ರ ಬದ್ಧತೆಯನ್ನು ತೋರಿಸಲು ಮಹಿಳಾ ಕಾರ್ಯಕಾರಿ ಗುಂಪನ್ನು ಸ್ಥಾಪಿಸುವ ಮೂಲಕ ಮೇಲ್ಪಂಕ್ತಿ ಹಾಕಿಕೊಟ್ಟಿದ್ದು, ಅದರ ಮೊದಲ ಸಭೆ ಬ್ರೆಜಿಲ್‌ನ ಅಧ್ಯಕ್ಷಾವಧಿಯಲ್ಲಿ ನಡೆಯಲಿದೆ.

### ಜಾಗತಿಕ ದಕ್ಷಿಣ ದೇಶಗಳ ಧ್ವನಿ

ಭಾರತದ ಪ್ರತಿಪಾದನೆಯ ಹೃದಯ ಭಾಗದಲ್ಲಿರುವುದು, ಆಫ್ರಿಕಾ ಒಕ್ಕೂಟವನ್ನು

ಜಿ20ರ ಶಾಶ್ವತ ಸದಸ್ಯನಾಗಿ ಸೇರ್ಪಡೆ ಮಾಡಿಕೊಳ್ಳಬೇಕೆಂಬ ದಾರ್ಶನಿಕ ಪ್ರಸ್ತಾವ. ಈ ಪ್ರಸ್ತಾವವು ಕಟು ವಾಸ್ತವದ ನೆಲೆಯನ್ನು ಹೊಂದಿದೆ; ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್) ಪ್ರಕಾರ, ದಕ್ಷಿಣದ ದೇಶಗಳು ಮುಖ್ಯವಾಗಿ ಆಫ್ರಿಕಾ, ಜಾಗತಿಕ ಆರ್ಥಿಕ ಬೆಳವಣಿಗೆಯಲ್ಲಿ ಶೇ.80ರಷ್ಟು ಪಾಲು ಹೊಂದಲಿದೆ. ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿನ ಸ್ಥಿತ್ಯಂತರಗಳನ್ನು ಗಮನದಲ್ಲಿರಿಸಿಕೊಂಡು, ಜಿ20ಕ್ಕೆ ಆಫ್ರಿಕವನ್ನು ಶಾಶ್ವತ ಸದಸ್ಯನಾಗಿ ಸೇರ್ಪಡೆಗೊಳಿಸಬೇಕೆಂದು ಭಾರತ ಒತ್ತಾಯಿಸಿತು. ಈ ಪ್ರಸ್ತಾವವು ಜಾಗತಿಕ ಕಾರ್ಯನೀತಿಗಳನ್ನು ರೂಪಿಸುವಲ್ಲಿ ಆಫ್ರಿಕದ ಪ್ರಾತಿನಿಧ್ಯದ ಪಾಲುದಾರಿಕೆಯನ್ನು ಬಳಸಿಕೊಳ್ಳಬೇಕೆಂಬ ನಿಜವಾದ ಆಶಯವನ್ನು ಹೊಂದಿದೆ.

ಅಷ್ಟಲ್ಲದೆ, ಭಾರತದ ಜಿ20 ಅಧ್ಯಕ್ಷತೆಯು ಮಾತಿಗೆ ಸೀಮಿತವಾಗದೆ, ಆಫ್ರಿಕದ ದೇಶಗಳ ಧ್ವನಿ ಕೇಳುವಂತೆ ಮಾಡಲು ಸಕ್ರಿಯ ಹೆಜ್ಜೆಗಳನ್ನು ಇರಿಸಿತು. ಮಾರಿಶಿಯಸ್, ಈಜಿಪ್ಟ್ ಮತ್ತು ನೈಜೀರಿಯಾ ಸೇರಿದಂತೆ ಆಫ್ರಿಕದ ದೇಶಗಳನ್ನು ಜಿ20 ಸಂವಾದಗಳಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಲಾಯಿತು. ಅಷ್ಟಕ್ಕೆ ನಿಲ್ಲದೆ, ಸಂವಾದವನ್ನು ಅರ್ಥಪೂರ್ಣಗೊಳಿಸಲು ಕೊಮೊರೊಸ್‌ನ ಆಫ್ರಿಕನ್ ಯೂನಿಯನ್‌ನ ಅಧ್ಯಕ್ಷರು ಹಾಗೂ ಎಯುಡಿಎ–ಎನ್‌ಇಪಿಎಡಿಯನ್ನು ಆಹ್ವಾನಿಸಲಾಯಿತು. ಈ ಛಲಬಿಡದ ಪ್ರಯತ್ನ ಫಲಕಾರಿಯಾಗಿ, ಜಿ20 ಸಭೆಗಳಲ್ಲಿ ಅತಿ ಹೆಚ್ಚು ಸಂಖ್ಯೆಯ ಆಫ್ರಿಕದ ದೇಶಗಳು ಪಾಲ್ಗೊಂಡಿದ್ದವು. ಇದು ಆಫ್ರಿಕದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದಲ್ಲದೆ, ಆ ದೇಶಗಳನ್ನು ಜಿ20ರ ಸಂವಾದದಲ್ಲಿ ಒಳಗೊಳ್ಳಬೇಕೆಂಬ ಇಂಡಿಯಾದ ಬದ್ಧತೆಗೆ ಸಾಕ್ಷಿಯಾಗಿದೆ.

ಭಾರತದ ಜಿ20 ಅಧ್ಯಕ್ಷತೆಯ ಪ್ರಮುಖ ಕ್ಷಣವೆಂದರೆ, 'ವಾಯ್ಸ್ ಆಫ್ ದ ಸೌಥ್ ಸಮ್ಮಿಟ್'. ವರ್ಷಾರಂಭದಲ್ಲಿ ನಡೆದ ಈ ಮೈಲುಗಲ್ಲು ಸಮಾರಂಭದಲ್ಲಿ 125 ದೇಶಗಳ ಪ್ರತಿನಿಧಿಗಳು ಮತ್ತು ದಕ್ಷಿಣದ 18 ದೇಶಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು. ಈ ಸಭೆಯು ದೇಶಗಳಿಗೆ ತಮ್ಮ ಕಾಳಜಿಗಳು, ಆಶಯಗಳು ಮತ್ತು ಆದ್ಯತೆಗಳನ್ನು ಜಾಗತಿಕ ವೇದಿಕೆಯಲ್ಲಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿತು. ಸಮಕಾಲೀನ ವಾಸ್ತವಗಳನ್ನು ಪ್ರತಿಫಲಿಸಲು ಮತ್ತು ಜಗತ್ತಿನ ಭವಿಷ್ಯವನ್ನು ರೂಪಿಸುವಲ್ಲಿ ದಕ್ಷಿಣದ ದೇಶಗಳ ಪ್ರಭಾವಶಾಲಿ ಪಾತ್ರವನ್ನು ಒಪ್ಪಿಕೊಳ್ಳುವಂತೆ ಅಂತಾರಾಷ್ಟ್ರೀಯ ಚರ್ಚೆಗಳನ್ನು ಮರುವಿನ್ಯಾಸಗೊಳಿಸಲು ಮೊದಲ ಹೆಜ್ಜೆ ಇರಿಸಲು ಈ ಸಭೆ ನೆರವಾಯಿತು.

ವಾಸ್ತವವೆಂದರೆ, ಭಾರತದ ಜಿ20 ಅಧ್ಯಕ್ಷತೆಯ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪ್ರಮುಖ ಕಾಳಜಿಗಳಾದ ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕ್(ಎಂಡಿಬಿ) ಸುಧಾರಣೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ(ಡಿಪಿಐ) ಮತ್ತು ಹವಾಮಾನ ಉಪಕ್ರಮ ಮತ್ತಿತರ ಸಂಗತಿಗಳಿಗೆ ಹೆಚ್ಚು ಗಮನ ನೀಡಿತು. ದಕ್ಷಿಣದ ದೇಶಗಳ ಅಗತ್ಯಗಳು ಮತ್ತು ಆಸಕ್ತಿಗಳನ್ನು ಮುನ್ನೆಲೆಗೆ ತರಲು ಆಗುವಂತೆ ಇಡೀ ಕಾರ್ಯಸೂಚಿಯನ್ನು ಸೂಕ್ಷ್ಮವಾಗಿ ವಿನ್ಯಾಸಗೊಳಿಸಲಾಗಿತ್ತು. ಇಂಥ ಅಂಶಗಳಿಗೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಹೆಚ್ಚು ಗಮನ ಲಭ್ಯವಾಗುವುದಿಲ್ಲ. ಈ ವಿಷಯಗಳನ್ನು ಮುನ್ನೆಲೆಗೆ ತರುವ ಮೂಲಕ ಭಾರತ ಚಾರಿತ್ರಿಕ ಅಸಮಾನತೆಯನ್ನು ಸರಿಪಡಿಸುವ ಗುರಿಯನ್ನು ಹೊಂದಿತ್ತು ಹಾಗೂ ಅಭಿವೃದ್ಧಿಶೀಲ ದೇಶಗಳ ಧ್ವನಿ ಜಾಗತಿಕ ವೇದಿಕೆಯಲ್ಲಿ ಕೇಳುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಈ ಮೂಲಕ ಜಾಗತಿಕ ನಿರ್ವಹಣೆಯಲ್ಲಿ ಹೆಚ್ಚು ಸಮಾನತೆ ಮತ್ತು ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸಿತು.

## ಜನರ ಜಿ20

ಭಾರತ, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಮಾತ್ರ ಒಳಗೊಳ್ಳುವಿಕೆಯನ್ನು ಪ್ರತಿಪಾದಿಸಲಿಲ್ಲ. ಜನ ಭಾಗೀದಾರಿ ಸಭೆಗಳ ಮೂಲಕ ದೇಶದೆಲ್ಲೆಡೆಯ ಜನರು ಜಿ20ಕ್ಕೆ ಸಂಬಂಧಿಸಿದ ಸಭೆಗಳು ಮತ್ತು ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಲಾಯಿತು. 60 ನಗರಗಳಲ್ಲಿ ನಡೆದ 220 ಸಭೆಗಳಲ್ಲಿ 25,000 ಪ್ರತಿನಿಧಿಗಳು ಪಾಲ್ಗೊಂಡಿದ್ದು, ವಿವಿಧ ಹಿನ್ನೆಲೆಯ ಜನರಿಗೆ ಜಿ20 ಮಾಹಿತಿ ಲಭ್ಯವಾಯಿತು. ಶಿಕ್ಷಣ ಇಲಾಖೆಯ ಪ್ರಯತ್ನದಿಂದಾಗಿ ವಿವಿಧ ಹಂತಗಳಲ್ಲಿ ನಡೆದ ಸಭೆಗಳಲ್ಲಿ 233 ದಶಲಕ್ಷ ಜನ ಪಾಲ್ಗೊಂಡಿದ್ದು, ಜಿ20ರ ಆದ್ಯತೆಗಳ ಬಗ್ಗೆ ಅರಿವು ಮೂಡಿಸಲಾಯಿತು.

ಜನ ಭಾಗೀದಾರಿಯು ಜನರ ಪಾಲ್ಗೊಳ್ಳುವಿಕೆಯನ್ನು ದಾಟಿ, ವಿಶ್ವವಿದ್ಯಾನಿಲಯಗಳ ಉಪನ್ಯಾಸಕರಿಂದ ಹಿಡಿದು ಮಾದರಿ ಜಿ20 ಮುಖಾಮುಖಿ ಸಭೆಗಳು, ಹಬ್ಬಗಳಲ್ಲಿ ವೇದಿಕೆಗಳು, ಪ್ರಶ್ನೋತ್ತರ ಸ್ಪರ್ಧೆಗಳು, ಆಹಾರೋತ್ಸವಗಳು ಇನ್ನಿತರ ವಿವಿಧ ಚಟುವಟಿಕೆಗಳನ್ನು ಒಳಗೊಂಡಿತು. ಕಾರ್ಯಕಾರಿ ಗುಂಪುಗಳು ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಸೈಕ್ಲೋಥಾನ್ ಮತ್ತು ರ್‍ಯಾಲಿಗಳಂಥ ಅನ್ವೇಷಣಾತ್ಮಕ ವಿಧಾನಗಳನ್ನು ಬಳಸಿದವು.

ಭಾರತದ ಸಹಕಾರ ಒಕ್ಕೂಟ ಮಾದರಿಯು ರಾಜ್ಯ ಮತ್ತು ಕೇಂದ್ರಗಳ ನಡುವೆ ಸಹಯೋಗವನ್ನು ಪ್ರೋತ್ಸಾಹಿಸುವುದಲ್ಲದೆ, ಸ್ಥಿತ್ಯಂತರಗೊಳಿಸಬಲ್ಲ ನಗರಾಭಿವೃದ್ಧಿ ಉಪಕ್ರಮಗಳಿಗೆ ದಾರಿ ಮಾಡಿಕೊಡುತ್ತದೆ; ದೇಶಿ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸುವ ಮೂಲಕ ಪ್ರವಾಸೋದ್ಯಮಕ್ಕೆ ಇಂಬು ನೀಡಿ ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಅಷ್ಟಲ್ಲದೆ, ತೊಡಗಿಸುವ ಗುಂಪುಗಳು ಜಿ20 ಸಂಕಥನದಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದವು ಹಾಗೂ ನಾಗರಿಕ ಸಮಾಜದ ಪರಿಣತಿ ಮತ್ತು ದೃಷ್ಟಿಕೋನವನ್ನು ಎನ್‌ಡಿಎಲ್‌ಡಿಯ ಅಂತಿಮ ಸೂತ್ರೀಕರಣದಲ್ಲಿ ಬಳಸಿಕೊಳ್ಳಲು ನೆರವಾದವು.

ಲೇಬರ್20, ಸೈನ್ಸ್ 20 ಮತ್ತು ಯೂಥ್ 20 ಗುಂಪುಗಳಲ್ಲಿ ಈಶಾನ್ಯ ಭಾರತ ಮತ್ತು ಜಮ್ಮು–ಕಾಶ್ಮೀರ ಸೇರಿದಂತೆ ವಿವಿಧ ಪ್ರಾಂತ್ಯಗಳ ಸಾಕಷ್ಟು ಸಂಖ್ಯೆಯ ಜನ ಪಾಲ್ಗೊಂಡಿದ್ದರು ಮತ್ತು ಸಾಮಾಜಿಕ ಮಾಧ್ಯಮಗಳು ಈ ವ್ಯಾಪ್ತಿಯನ್ನು ಇನ್ನಷ್ಟು ಹಿಗ್ಗಿಸಿದವು. ಇದರಿಂದ 14 ಟ್ರಿಲಿಯನ್‌ಗೂ ಅಧಿಕ ಬಿಂಬಗಳು ಮೂಡಿದವು.

ವಿಚ್ಛೇದಗೊಳ್ಳುತ್ತಿರುವ ಜಗತ್ತಿನಲ್ಲಿ ಭಾರತದ ಜನಕೇಂದ್ರಿತ ಮತ್ತು ಜನರಿಂದ ಚಾಲಿತ ಜಿ20 ಅಧ್ಯಕ್ಷತೆಯು ಸಾಮುದಾಯಿಕ ಕ್ರಿಯೆಗಳ ಶಕ್ತಿಯನ್ನು ಸಾಬೀತುಪಡಿಸಿತು. ಪ್ರಧಾನಿಯವರು ಇದನ್ನು ಹೆಚ್ಚು ಸಮಾನವಾದ ಜಾಗತಿಕ ಭವಿಷ್ಯವನ್ನು ರೂಪಿಸುವಲ್ಲಿ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ಚೈತನ್ಯವನ್ನು ಬಿಂಬಿಸುವ 'ಜನರ ಅಧ್ಯಕ್ಷತೆ' ಎಂದು ಕರೆದರು.

# ಭಾರತವನ್ನು ವಿಶ್ವ ವೇದಿಕೆಯಲ್ಲಿರಿಸಿದ ಜಿ20 ಶೃಂಗಸಭೆ

* ಹರ್ಷವರ್ಧನ್ ಶ್ರಿಂಗ್ಲಾ




**ಭಾರತದ "ಜಿ20" ಅಧ್ಯಕ್ಷತೆಯು ನಿಜವಾಗಿಯೂ ಒಂದು ರಾಜತಾಂತ್ರಿಕ ತಿರುವಿಗೆ ಹೆಗ್ಗುರುತಾಗಿದೆ. ಇದರ ಸ್ಮರಣೀಯ ಯಶಸ್ಸು ವಿಶ್ವ ವೇದಿಕೆಯಲ್ಲಿ ಅನುರಣಿಸಿದೆ. ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾದ ಭಾರತವು ಪ್ರಬಲ ಶಕ್ತಿಯಾಗಿ ಬೆಳೆದಿದೆ. ಜಾಗತಿಕ ದಕ್ಷಿಣದ ಕಾಳಜಿಗಳನ್ನು ಪ್ರತಿಪಾದಿಸುವ ತನ್ನ ಅಚಲ ಬದ್ಧತೆಯ ಮೂಲಕ ಭಾರತವು 'ವಿಶ್ವ ಮಿತ್ರ', 'ಸಾರ್ವತ್ರಿಕ ಸ್ನೇಹಿತ' ಮತ್ತು 'ಮಧ್ಯಸ್ಥಿಕೆ ನೇತಾರ' ಎಂಬ ಬಿರುದುಗಳಿಗೆ ಪಾತ್ರವಾಗಿದೆ.**

ಭಾರತದ 'ಜಿ20' ಅಧ್ಯಕ್ಷತೆಯು ಜಾಗತಿಕ ರಾಜತಾಂತ್ರಿಕತೆಯ ಇತಿಹಾಸದಲ್ಲಿ ಒಂದು ಸ್ಮರಣೀಯ ಸಾಧನೆಯಾಗಿ ನಿಂತಿದೆ. 'ಜಿ20' ಪ್ರಕ್ರಿಯೆಯನ್ನು ವಿಕೇಂದ್ರೀಕರಿಸುವ ಮತ್ತು ಪ್ರಜಾಸತ್ತಾತ್ಮಕಗೊಳಿಸುವ ಭಾರತದ ಪ್ರಧಾನ ಮಂತ್ರಿಯವರ ಕ್ರಾಂತಿಕಾರಿ ದೃಷ್ಟಿಕೋನವು ಈ ಯಶಸ್ಸಿಗೆ ಕಾರಣವಾಗಿದೆ. ಈ ಕಾರ್ಯವಿಧಾನವು ಅಳಿಸಲಾಗದ ಹೆಗ್ಗುರುತನ್ನು ಉಳಿಸಿರುವುದು ಮಾತ್ರವಲ್ಲದೆ, ಭಾರತದ 'ಜಿ20'ಯ ಶಾಶ್ವತ ಪರಂಪರೆಯಾಗಲಿದೆ. ಇದಲ್ಲದೆ, ನಿರ್ಣಾಯಕ ಹಾಗೂ ಸಮಗ್ರ 'ನವದೆಹಲಿ ನಾಯಕರ ಘೋಷಣೆ'ಯನ್ನು ಅಂಗೀಕರಿಸಿರುವುದು ಭಾರತದ ರಾಜತಾಂತ್ರಿಕ ಪರಾಕ್ರಮವನ್ನು ಮತ್ತಷ್ಟು ಪ್ರಚುರಪಡಿಸುತ್ತದೆ. ಭಾರತದ 'ಜಿ20' ಅಧ್ಯಕ್ಷತೆಯು ಅಂತಾರಾಷ್ಟ್ರೀಯವಾಗಿ ಅತ್ಯುನ್ನತ ಮಟ್ಟದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ ಮತ್ತು ಶಾಂತಿಯ ಜಾಗತಿಕ ಚಾಂಪಿಯನ್ ಆಗಿ ಭಾರತದ ಸ್ಥಾನಮಾನವನ್ನು ಮತ್ತಷ್ಟು ಉತ್ತುಂಗಕ್ಕೇರಿಸಿದೆ.

'ಜಿ20' ಇಂದಿನ ವಿಶ್ವದಲ್ಲಿ ಅತ್ಯಂತ ಪ್ರಭಾವಶಾಲಿ ಗುಂಪುಗಳಲ್ಲಿ ಒಂದೆನಿಸಿದೆ. ಏಕೆಂದರೆ ಇದು ಜಾಗತಿಕ ಜಿಡಿಪಿಯ ಸುಮಾರು 85%, ಜಾಗತಿಕ ವ್ಯಾಪಾರದ 75% ಕ್ಕಿಂತ ಹೆಚ್ಚು ಮತ್ತು ವಿಶ್ವದ ಜನಸಂಖ್ಯೆಯ ಮೂರನೇ ಎರಡರಷ್ಟು ಭಾಗವನ್ನು ಪ್ರತಿನಿಧಿಸುತ್ತದೆ. ವಿಶ್ವ ಇತಿಹಾಸದಲ್ಲಿ ವಿಶೇಷವಾಗಿ ಸವಾಲಿನ ಸಮಯದಲ್ಲಿ ಭಾರತವು ಈ ಪ್ರತಿಷ್ಠಿತ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು. ಆ ಸಮಯದಲ್ಲಿ ವಿಶಿಷ್ಟವಾದ ಬಿಕ್ಕಟ್ಟುಗಳು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಆವರಿಸಿದ್ದವು. ಅದಾಗಲೇ ಜಗತ್ತು ಕೊವಿಡ್ ಸಾಂಕ್ರಾಮಿಕದ ಪರಿಣಾಮಗಳಿಂದ ತತ್ತರಿಸಿತ್ತು. ಇದರ ನಡುವೆಯೇ ಉಕ್ರೇನ್ ಸಂಘರ್ಷವು ಬಿಕ್ಕಟ್ಟನ್ನು ಉಲ್ಬಣಗೊಳಿಸಿತು. ಇದು ಜಾಗತಿಕ ಆರ್ಥಿಕ ಹಿಂಜರಿತ, ಅಧಿಕ ಹಣದುಬ್ಬರ; ಇಂಧನ, ಆಹಾರ ಮತ್ತು ಸಾಲ ಬಿಕ್ಕಟ್ಟುಗಳ ಆತಂಕಕ್ಕೆ ಕಾರಣವಾಗಿತ್ತು.

ಈ ಅನಿಶ್ಚಿತತೆಯ ಪರಿಸ್ಥಿತಿಯ ನಡುವೆ ದಿಟ್ಟ ನಾಯಕತ್ವವು ಅತ್ಯಗತ್ಯವಾಗಿತ್ತು. ಭಾರತವು ಸಂದರ್ಭಕ್ಕೆ ತಕ್ಕಂತೆ ಎದ್ದು ನಿಲ್ಲುವುದು ಅನಿವಾರ್ಯವಾಗಿತ್ತು ಮತ್ತು

* ಪ್ರಧಾನ ಸಂಯೋಜಕರು 'ಜಿ20', ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ. ಇಮೇಲ್: chiefg20coord@mea.gov.in

# ಜಿ20 ಶೃಂಗಸಭೆ ನವದೆಹಲಿ

## ಐತಿಹಾಸಿಕ ಉಪಕ್ರಮಗಳ ಆರಂಭ




ಜಾಗತಿಕ ಜೈವಿಕ ಇಂಧನ ಮೈತ್ರಿ




ಭಾರತ-ಮಧ್ಯಪ್ರಾಚ್ಯ-ಐರೋಪ್ಯ ಆರ್ಥಿಕ ಕಾರಿಡಾರ್ (ಐಎಂಇಸಿ)

ಭಾರತವು ಈ ಕೆಲಸವನ್ನು ಅಸಾಧಾರಣ ರೀತಿಯಲ್ಲಿ ಮಾಡಿತು. ನಮ್ಮದು 'ಎಲ್ಲರನ್ನೂ ಒಳಗೊಂಡ, ಮಹತ್ವಾಕಾಂಕ್ಷೆಯ, ನಿರ್ಣಾಯಕ ಮತ್ತು ಕ್ರಿಯಾ-ಆಧರಿತ' ಅಧ್ಯಕ್ಷತೆ ಎಂದು ಪ್ರಧಾನ ಮಂತ್ರಿಗಳು ಕಳೆದ ವರ್ಷ ಬಾಲಿಯಲ್ಲಿ ಸಂಕಲ್ಪ ಮಾಡಿದ್ದರು. ನಾವು ನಮ್ಮ ಅಧ್ಯಕ್ಷೀಯ ಅವಧಿಯ ಕೊನೆಯ ತಿಂಗಳನ್ನು ಪ್ರವೇಶಿಸುತ್ತಿದ್ದಂತೆ, ಭಾರತದ 'ಜಿ20' ಆ ಪ್ರತಿಜ್ಞೆಯನ್ನು ಪೂರೈಸಿದೆ. ಭಾರತವು ಎಲ್ಲರನ್ನೂ ಒಳಗೊಂಡ ಮತ್ತು ಅಂತರ್-ಸಂಪರ್ಕಿತ ವಿಶ್ವ ವ್ಯವಸ್ಥೆಗೆ ಒಂದು ಪೂರ್ವನಿದರ್ಶನವನ್ನು ಮುಂದಿಟ್ಟಿದೆ.

ಭಾರತವು ತನ್ನ ಅಧ್ಯಕ್ಷೀಯ ಅವಧಿಯಲ್ಲಿ ಮಾನವ ಕೇಂದ್ರಿತ ಮತ್ತು ಪ್ರಜಾಪ್ರಭುತ್ವ ವಿಧಾನಕ್ಕೆ ಆದ್ಯತೆ ನೀಡಿತು. ಇದು 'ಜಿ20' ಉದ್ದಗಲಕ್ಕೂ ಇರುವ ಬಲವಾದ ಭೌಗೋಳಿಕ-ರಾಜಕೀಯ ಮತ್ತು ಸೈದ್ಧಾಂತಿಕ ವಿಭಜನೆಗಳ ಹಿನ್ನೆಲೆಯಲ್ಲಿ ಇದು ನಿರ್ಣಾಯಕ ನಿರ್ಧಾರವಾಗಿತ್ತು. ನಮ್ಮ ರಾಷ್ಟ್ರದ ವೈವಿಧ್ಯತೆಯ ಆಚರಣೆಯನ್ನು ಪ್ರದರ್ಶಿಸುವ ಮತ್ತು ಈ ವೈವಿಧ್ಯತೆಯು ಜಾಗತಿಕ ವೇದಿಕೆಯಲ್ಲಿ ಏಕೀಕೃತ ಶಕ್ತಿಯಾಗಿ ಹೇಗೆ ಕಾರ್ಯನಿರ್ವಹಿಸಬಹುದು ಎಂಬುದನ್ನು ಪ್ರದರ್ಶಿಸುವ ಧ್ಯೇಯದೊಂದಿಗೆ ಪ್ರಧಾನ ಮಂತ್ರಿಗಳು ಭಾರತದ 'ಜಿ20' ಪ್ರಯಾಣವನ್ನು ಪ್ರಾರಂಭಿಸಿದರು.

ಇದನ್ನು ಪರಿಣಾಮಕಾರಿಯಾಗಿ ಸಾಧಿಸಲು, ಭಾರತದ ಉದ್ದಗಲಕ್ಕೂ, ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 200ಕ್ಕೂ ಹೆಚ್ಚು 'ಜಿ20' ಸಭೆಗಳನ್ನು ನಡೆಸಲಾಯಿತು. ಇದರಿಂದಾಗಿ, 'ಜಿ20' ಪ್ರತಿನಿಧಿಗಳು ಭಾರತದ ಪ್ರತಿಯೊಂದು ವೈವಿಧ್ಯಮಯ ಭಾಗವು ಏನನ್ನು ನೀಡುತ್ತದೆ ಎಂಬುದರ ಬಗ್ಗೆ ಮೊದಲ ಅನುಭವವನ್ನು ಪಡೆಯಲು ಸಾಧ್ಯವಾಯಿತು. ಈ ವಿಸ್ತಾರವಾದ ವಿಶಾಲ-ಭಾರತ ಕಾರ್ಯವಿಧಾನದಿಂದಾಗಿ, ಪ್ರತಿ ರಾಜ್ಯವೂ ಅಲ್ಲಿಗೆ ಭೇಟಿ ನೀಡುವ ಪ್ರತಿನಿಧಿಗಳ ಮನಸ್ಸಿನಲ್ಲಿ ಅಚ್ಚಳಿಯದ ಸಾಂಸ್ಕೃತಿಕ ಛಾಪು ಮೂಡಿಸಲು ಸದವಕಾಶವನ್ನು ಪಡೆದುಕೊಂಡಿತು. ರಾಜ್ಯಗಳಲ್ಲಿ ಪ್ರವಾಸ ಕೈಗೊಂಡ ಪ್ರತಿನಿಧಿಗಳು ಭಾರತದ ಶ್ರೀಮಂತ, ಅನನ್ಯ ಪರಂಪರೆಯ ಸಾಂಸ್ಕೃತಿಕ ರಾಯಭಾರಿಗಳಾಗಿ ತಮ್ಮ ತಾಯ್ನಾಡಿಗೆ ಮರಳಿದ್ದಾರೆ. ಇದು ರಾಜತಾಂತ್ರಿಕ ಔಪಚಾರಿಕತೆಗಳನ್ನು ಮೀರಿದ ಮತ್ತು ರಾಷ್ಟ್ರಗಳ ನಡುವೆ ನಿಜವಾದ ಸಂಪರ್ಕಗಳನ್ನು ಬೆಳೆಸುವ ಆಳವಾದ ವಿಚಾರ ವಿನಿಮಯವಾಗಿತ್ತು. ಈ ಪರಿವರ್ತನಾತ್ಮಕ ವಿಧಾನವು, ಜಗತ್ತನ್ನು ಭಾರತಕ್ಕೆ ಸ್ವಾಗತಿಸಿದ್ದಲ್ಲದೆ, ಜಾಗತಿಕ ವೇದಿಕೆಯಲ್ಲಿ ತನ್ನ ಅತ್ಯುತ್ತಮ ಅಭ್ಯಾಸಗಳನ್ನು ಪ್ರದರ್ಶಿಸಲು ಭಾರತಕ್ಕೆ ಅವಕಾಶ ಮಾಡಿಕೊಟ್ಟಿತು. 60ಕ್ಕೂ ಹೆಚ್ಚು ನಗರಗಳಲ್ಲಿ 200ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಸಭೆಗಳನ್ನು ನಡೆಸಲಾಯಿತು. ಈ ಸಭೆಗಳನ್ನು ಆಯೋಜಿಸಲು ಅಗತ್ಯವಾದ ಸಹಕಾರಿ ಒಕ್ಕೂಟ ವ್ಯವಸ್ಥೆಯ ಸುಗಮ ಸಂಯೋಜನೆಯು ಭಾರತದ ಸಾಂಸ್ಥಿಕ ಪರಾಕ್ರಮ ಹಾಗೂ ಸಹಯೋಗದ ಮನೋಭಾವವನ್ನು ಜಗತ್ತಿಗೆ ಪ್ರದರ್ಶಿಸಿತು. ರಾಷ್ಟ್ರಗಳ ಒಕ್ಕೂಟವು ತನ್ನ ಸಾಮಾನ್ಯತೆ ಮೀರಿ, ಮರೆಯಲಾಗದ ಒಂದು ಅಧ್ಯಕ್ಷತೆಯಾಗಿ ವಿಕಸನಗೊಂಡಿತು, ಅದು ಭಾರತ ಮತ್ತು ಪ್ರಪಂಚದ ಮೇಲೆ ಅಳಿಸಲಾಗದ ಗುರುತನ್ನು ಮೂಡಿಸಿತು.

ಭಾರತದ ಸಾಮರ್ಥ್ಯದ ಬಗ್ಗೆ ಪ್ರಧಾನಿಯವರ ನಂಬಿಕೆಯೇ ಈ ಮಹತ್ವದ ಕಾರ್ಯಕ್ಕೆ ಉತ್ತೇಜನ ನೀಡಿತು. ಸಂಪೂರ್ಣ ಸರ್ಕಾರ ಮತ್ತು ಇಡೀ ಸಮಾಜದ ವಿಧಾನಗಳನ್ನು ಬಳಸಿಕೊಳ್ಳುವ ಮೂಲಕ, ಹಿಂದೆಂದೂ ಕಾಣದ ಭಾರತವನ್ನು ಅನಾವರಣಗೊಳಿಸಲಾಯಿತು. ಈಶಾನ್ಯ ಭಾರತ ಪ್ರದೇಶ ಸೇರಿದಂತೆ ಈ ಹಿಂದೆ ಜಾಗತಿಕವಾಗಿ ಗಮನ ಸೆಳೆಯದ ನಗರಗಳಲ್ಲಿ 'ಜಿ20' ಸಭೆಗಳನ್ನು ಆಯೋಜಿಸಲು ಅವರು ಉದ್ದೇಶಪೂರ್ವಕವಾಗಿ ಕರೆ ನೀಡಿದರು. ಈ ದೂರದೃಷ್ಟಿಯ ಕ್ರಮವು ಈ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮೇಲೆ ಕ್ರಾಂತಿಕಾರಿ ಪರಿಣಾಮವನ್ನು ಬೀರಿತು. ಅಗತ್ಯ ಭೌತಿಕ ಮೂಲಸೌಕರ್ಯಗಳೊಂದಿಗೆ ಸಜ್ಜುಗೊಂಡ, ವಿಶ್ವ ದರ್ಜೆಯ ಸಮ್ಮೇಳನಗಳಿಗೆ ಅತ್ಯುತ್ತಮ ಆತಿಥ್ಯ ವಹಿಸಬಲ್ಲ ರಾಜ್ಯಗಳ ಸ್ಥಾನಮಾನಕ್ಕೆ ಅವುಗಳನ್ನು ಏರಿಸಿತು. ನಗರಗಳ ಈ ರೂಪಾಂತರ, ಆತಿಥೇಯ ನಗರಗಳಲ್ಲಿ ಸುಧಾರಣೆಗಳು, ಸೇರ್ಪಡೆಗಳು ಮತ್ತು ಸೌಂದರ್ಯ ವರ್ಧನೆಗಳು, ಅನೇಕ ರಾಜ್ಯಗಳಿಗೆ ಹೊಸ ವಿಶ್ವಾಸ ಮತ್ತು ಜಾಗತಿಕ ಗೋಚರತೆಯನ್ನು ನೀಡಿದವು.

ಅಲ್ಲದೆ, ಇದರಿಂದ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪ್ರವಾಸೋದ್ಯಮದ ನಿರೀಕ್ಷೆಗಳನ್ನು ಹೊಂದಿರದ ಸ್ಥಳಗಳನ್ನು




ಬೆಳಕಿಗೆ ತರಲು ನೆರವಾಯಿತು. ಜೊತೆಗೆ, ಕೊವಿಡ್‌ನಿಂದಾಗಿ ಸೊರಗುತ್ತಿದ್ದ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಪುನರುಜ್ಜೀವನಕ್ಕೆ ಕಾರಣವಾಯಿತು.

ಹೊಸ ವಿಶ್ವ ವ್ಯವಸ್ಥೆಯು ಮಾನವ ಕೇಂದ್ರಿತ ಜಾಗತೀಕರಣದ ಮೇಲೆ ಕೇಂದ್ರೀಕರಿಸಬೇಕು ಎಂದು ಪ್ರಧಾನಿ ಆಗಾಗ್ಗೆ ಹೇಳುತ್ತಿರುತ್ತಾರೆ. 'ಜಿ20'ಯನ್ನು ಭಾರತವು 'ಜನರ20' ಆಗಿ ಪರಿವರ್ತಿಸುವ ಮೂಲಕ ಈ ತತ್ವವನ್ನು ಕಾರ್ಯರೂಪಕ್ಕೆ ತಂದಿದೆ. 'ಜನ ಭಾಗೀದಾರಿ' ಅಥವಾ ನಾಗರಿಕರ ಪಾಲ್ಗೊಳ್ಳುವಿಕೆ ಕಾರ್ಯಕ್ರಮಗಳ ಮೂಲಕ 1.5 ಕೋಟಿಗೂ ಹೆಚ್ಚು ನಾಗರಿಕರು 'ಜಿ20' ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. 'ಜಿ20' ವಿಶ್ವವಿದ್ಯಾಲಯ ಸಂಪರ್ಕ ಕಾರ್ಯಕ್ರಮದಲ್ಲಿ ದೇಶಾದ್ಯಂತ 101 ವಿಶ್ವವಿದ್ಯಾಲಯಗಳು ಮತ್ತು ಲಕ್ಷಾಂತರ ವಿದ್ಯಾರ್ಥಿಗಳು ನೇರವಾಗಿ ಭಾಗವಹಿಸಿದ್ದರು. ಭಾರತದ 'ಜಿ20' ಲೋಗೋವನ್ನು ಸಹ ಸಾವಿರಾರು ಭಾರತೀಯರ ಸಾಮೂಹಿಕ ಜಾಣ್ಮೆಯಿಂದ ರಚಿಸಲಾಗಿದೆ. ಹೀಗಾಗಿ, ಪ್ರತಿಯೊಬ್ಬ ನಾಗರಿಕರು ಭಾರತದ 'ಜಿ20' ಅಧ್ಯಕ್ಷತೆಯಲ್ಲಿ ಪಾಲುದಾರರೇ ಹೌದು.

ಶಿಕ್ಷಣ, ಕೃಷಿ, ವ್ಯಾಪಾರ, ಸಂಸ್ಕೃತಿ ಮತ್ತು ಮಹಿಳಾ ಅಭಿವೃದ್ಧಿ ಸೇರಿದಂತೆ ಮಾನವ ಪ್ರಯತ್ನದ 37 ವಿವಿಧ ಕ್ಷೇತ್ರಗಳನ್ನು ವ್ಯಾಪಿಸಿರುವ 'ಜನ ಭಾಗೀದಾರಿ' ಉಪಕ್ರಮವು ದೈನಂದಿನ ಜೀವನದಲ್ಲಿ ಜಾಗತಿಕ ಆದರ್ಶಗಳ ಪಾಲನೆಗೆ ಅವಕಾಶ ಒದಗಿಸಿದೆ. ಭಾರತದ 'ಜಿ20' ಪ್ರಯತ್ನಗಳ ಪ್ರವೇಶ ಮತ್ತು ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲು, ವಿಶೇಷ 'ಜಿ20' ವೆಬ್‌ಸೈಟ್ ಮತ್ತು ಮೊಬೈಲ್ ತಂತ್ರಾಂಶ, ಮಾಸಿಕ ಸುದ್ದಿಪತ್ರಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಸಮಗ್ರ 'ಜಿ20' ಮಾಹಿತಿಯನ್ನು ಲಭ್ಯವಾಗುವಂತೆ ಮಾಡಲಾಯಿತು.

ಈ ರಾಷ್ಟ್ರವ್ಯಾಪಿ ಭಾಗವಹಿಸುವಿಕೆಯ ಫಲವಾಗಿ, ಭಾರತದ 'ಜಿ20'ಯು ಅಭೂತಪೂರ್ವ ಜನಪ್ರಿಯತೆ ಮತ್ತು ಆಚರಣೆಗೆ ಸಾಕ್ಷಿಯಾಯಿತು. ಆ ಮೂಲಕ ಭಾರತದ 'ಜಿ20' ಲಾಂಛನವು ರಾಷ್ಟ್ರೀಯ ಹೆಮ್ಮೆಯ ಸಂಕೇತವಾಯಿತು.

'ಜಿ20' ಕುರಿತ ಈ ವಿಶಿಷ್ಟ ಕಾರ್ಯವಿಧಾನವು ಐತಿಹಾಸಿಕ 'ನವದೆಹಲಿ ನಾಯಕರ ಶೃಂಗಸಭೆ'ಯಲ್ಲೂ ಪ್ರಕಾಶಿಸಿತು. ವಿಶೇಷವಾಗಿ, ಜಿ20 ಮೈತ್ರಿಕೂಟದಲ್ಲಿರುವ ಭೌಗೋಳಿಕ ರಾಜಕೀಯ ವಿಭಜನೆಗಳನ್ನು ಪರಿಗಣಿಸುವುದಾದರೆ, 'ಜಿ20 ನವದೆಹಲಿ ನಾಯಕರ ಘೋಷಣೆ'ಗೆ ಸಾರ್ವತಿಕ ಅಂಗೀಕಾರ ದೊರೆತಿರುವುದು ನಿಜಕ್ಕೂ ಒಂದು ಅಸಾಧಾರಣ ಸಾಧನೆಯೇ ಸರಿ. ಸಾಮಾನ್ಯ ಸಂದರ್ಭಗಳಲ್ಲಿಯೂ, 'ಜಿ20' ಮಾತುಕತೆಗಳಂತಹ ಸಂಕೀರ್ಣ ಬಹುಪಕ್ಷೀಯ ಪ್ರಕ್ರಿಯೆಗಳು ಕೊನೆಯ ಕ್ಷಣದಲ್ಲಿ ಯಶಸ್ಸು ಕಾಣುತ್ತವೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮತ್ತು ಸಂಕೀರ್ಣ ಭೌಗೋಳಿಕ ರಾಜಕೀಯ ಸನ್ನಿವೇಶಗಳ ಹೊರತಾಗಿಯೂ, ನಾಯಕರ ಶೃಂಗಸಭೆಯ ಮೊದಲ ಅಧಿವೇಶನದ ಮೊದಲಾರ್ಧದಲ್ಲೇ ಸದಸ್ಯ ರಾಷ್ಟ್ರಗಳ ನಡುವೆ ಒಮ್ಮತದ ಬಗ್ಗೆ ಪ್ರಧಾನಿ ಘೋಷಿಸಿದರು. ಜಾಗತಿಕ ವೇದಿಕೆಯಲ್ಲಿ ವಿಶ್ವಾಸಾರ್ಹ ಪಾಲುದಾರನಾಗಿ ಭಾರತದ ಗುರುತನ್ನು ಭದ್ರಪಡಿಸುವ ನಿಟ್ಟಿನಲ್ಲಿ ಕಳೆದ ದಶಕದಲ್ಲಿ ಅವರು ತೋರಿದ ದೃಢವಾದ ಬದ್ಧತೆಯೇ 'ನವದೆಹಲಿ ನಾಯಕರ ಘೋಷಣೆ'ಗೆ ಸರ್ವಾನುಮತದ ಅಂಗೀಕಾರದ ಪಡೆಯುವಲ್ಲಿ ಯಶಸ್ಸಿಗೆ ನಿರ್ಣಾಯಕ ಅಂಶವಾಯಿತು. ನಮ್ಮ ಪರಸ್ಪರ ಹಂಚಿಕೆಯ ಮಾನವೀಯತೆಯನ್ನು ಅಂತಾರಾಷ್ಟ್ರೀಯ ಸಮುದಾಯಕ್ಕೆ ನೆನಪಿಸುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿಗಳು ಒಂದು ದಶಕದಷ್ಟು ಸುದೀರ್ಘ ಕಾಲ ಅಚಲವಾದ ಸಮರ್ಪಣೆಯೊಂದಿಗೆ ಕೆಲಸ ಮಾಡಿದ್ದಾರೆ. ಪ್ರಧಾನ ಮಂತ್ರಿ ಶ್ರೀ ಮೋದಿ ಅವರ ಈ ಸಮರ್ಪಿತ ಕಾರ್ಯವು 'ಜಿ20' ಅಧ್ಯಕ್ಷರಾಗಿ ಭಾರತ ಆಯ್ಕೆ ಮಾಡಿದ 'ವಸುಧೈವ ಕುಟುಂಬಕಂ' ಎಂಬ ಘೋಷವಾಕ್ಯದಲ್ಲಿ ಸಾಕಾರಗೊಂಡಿತು.

ನಮ್ಮ ಸಾಂಸ್ಕೃತಿಕ ನೀತಿಗಳಲ್ಲಿ ಬೇರೂರಿರುವ – 'ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯ' ಎಂಬ ಪರಿವರ್ತನಾತ್ಮಕ ತತ್ವವು 'ಜಿ20'ಯನ್ನು ಒಂದುಗೂಡಿಸಿತು. ಪರಸ್ಪರ ಸಹಯೋಗದ ಕಾರ್ಯವಿಧಾನವು ಜಾಗತಿಕ ಬದಲಾವಣೆ ವೇಗವನ್ನು ಹೇಗೆ ಹೆಚ್ಚಿಸಬಲ್ಲದು ಹಾಗೂ 'ಎಲ್ಲರಿಗೂ ಉಪಶಮನ, ಸಾಮರಸ್ಯ ಮತ್ತು ಭರವಸೆಯನ್ನು' ಬೆಳೆಸಬಲ್ಲದು ಎಂಬುದಕ್ಕೆ 'ಪ್ರಜಾಪ್ರಭುತ್ವದ ಮಾತೆ'ಯಾಗಿ ಭಾರತವು ಒಂದು ಯಶಸ್ಸಿನ ಉದಾಹರಣೆಯಾಗಿದೆ.




ಭಾರತದ 'ಜಿ20' ನಾಯಕತ್ವದಲ್ಲಿ ಮಹತ್ವದ 112 ಫಲಿತಾಂಶಗಳು ಹೊರಹೊಮ್ಮಿವೆ ಮತ್ತು ಅಧ್ಯಕ್ಷೀಯ ದಾಖಲೆಗಳು ಸಿದ್ಧಗೊಂಡಿವೆ. ಹಿಂದಿನ ಅಧ್ಯಕ್ಷತೆಯಲ್ಲಿ ಆದ ಕೆಲಸಗಳಿಗೆ ಹೋಲಿಸಿದರೆ ಇವು ದುಪ್ಪಟ್ಟು. 83 ಪಂಕ್ತಿಗಳ ಘೋಷಣೆಯು ಜಾಗತಿಕ ಸವಾಲುಗಳನ್ನು ಎದುರಿಸಲು ಸಂಘಟಿತ ಪ್ರಯತ್ನವನ್ನು ಸಂಕೇತಿಸುತ್ತದೆ. ಜೊತೆಗೆ ಸಹಯೋಗ, ಸಹಕಾರ ಮತ್ತು ಹಂಚಿಕೆಯ ಜವಾಬ್ದಾರಿಯ ಮನೋಭಾವವನ್ನು ಸಾಕಾರಗೊಳಿಸುತ್ತದೆ. ಇದು ಮಾನವ ಕೇಂದ್ರಿತ ಜಾಗತೀಕರಣದ ಸುವರ್ಣ ಯುಗಕ್ಕೆ ನಾಂದಿ ಹಾಡಿದ ಐತಿಹಾಸಿಕ ಮತ್ತು ಮಹತ್ವದ ಘೋಷಣೆಯಾಗಿದೆ.

ತನ್ನ ಅತ್ಯುತ್ತಮ ಕಾರ್ಯವಿಧಾನಗಳನ್ನು ವಿಶ್ವದೊಂದಿಗೆ ಹಂಚಿಕೊಳ್ಳುವುದು ಭಾರತದ ಧ್ಯೇಯವಾಗಿತ್ತು. ಶೃಂಗಸಭೆಯಲ್ಲಿ ಅಂಗೀಕರಿಸಿದ ಘೋಷಣೆಯಲ್ಲಿ ಇದನ್ನು ಯಶಸ್ವಿಯಾಗಿ ಸಾಧಿಸಲಾಗಿದೆ. 'ನವದೆಹಲಿ ನಾಯಕರ ಘೋಷಣೆ'ಯು 'ಆಹಾರ ಭದ್ರತೆ ಮತ್ತು ಪೌಷ್ಟಿಕಾಂಶ ಕುರಿತಾದ ದಕ್ಷಿಣದ ಉನ್ನತ ಮಟ್ಟದ ತತ್ವಗಳು', 'ನೀಲಿ / ಸಾಗರ ಆರ್ಥಿಕತೆಗಾಗಿ ಚೆನ್ನೈ ಉನ್ನತ ಮಟ್ಟದ ತತ್ವಗಳು', 'ಪ್ರವಾಸೋದ್ಯಮಕ್ಕಾಗಿ ಗೋವಾ ಮಾರ್ಗಸೂಚಿ', 'ಭೂ ಪುನಃಸ್ಥಾಪನೆಗಾಗಿ ಗಾಂಧಿನಗರ ಅನುಷ್ಠಾನ ಮಾರ್ಗಸೂಚಿ' ಮತ್ತು 'ಎಂಎಸ್‌ಎಂಇಗಳಿಗೆ ಮಾಹಿತಿಯ ಪ್ರವೇಶವನ್ನು ಹೆಚ್ಚಿಸಲು ಜೈಪುರ ಕರೆ' ಇವುಗಳನ್ನು ಅಳವಡಿಸಿಕೊಳ್ಳುವ ಮೂಲಕ 'ನವದೆಹಲಿ ನಾಯಕರ ಘೋಷಣೆ'ಯಲ್ಲಿ ಭಾರತವು ಮಹತ್ವದ ಪಾತ್ರವನ್ನು ಹೊಂದಿದೆ.

'ಜಿ20'ರ ಅಧ್ಯಕ್ಷನಾಗಿ ಹವಾಮಾನ ಉಪಕ್ರಮ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸುಸ್ಥಿರ ಅಭಿವೃದ್ಧಿ ಮತ್ತು ಅಂತರ್ಗತ ಆಡಳಿತ ಸೇರಿದಂತೆ ತನ್ನ ದೇಶೀಯ ಆದ್ಯತೆಗಳೊಂದಿಗೆ ಹೊಂದಿಕೊಳ್ಳುವ ಮಹತ್ವಾಕಾಂಕ್ಷೆಯ ಹಾಗೂ ಪ್ರಾಯೋಗಿಕ ಪರಿಹಾರಗಳ ಬಗ್ಗೆ ಸದಸ್ಯ ರಾಷ್ಟ್ರಗಳಲ್ಲಿ ಒಮ್ಮತವನ್ನು ಪಡೆಯುವ ಪ್ರಯತ್ನಗಳನ್ನು ಭಾರತ ಮುನ್ನಡೆಸಿತು. ಜಾಗತಿಕ ದಕ್ಷಿಣದ ಧ್ವನಿಯನ್ನು ಇನ್ನು ಮುಂದೆ ಕಡೆಗಣಿಸಲಾಗದ ಹೆಚ್ಚು ಅಂತರ್ಗತ ಜಗತ್ತನ್ನು ರಚಿಸುವುದು ಭಾರತದ 'ಜಿ20' ಅಧ್ಯಕ್ಷತೆಯ ಪ್ರಮುಖ ಆದ್ಯತೆಯಾಗಿತ್ತು. ಆಫ್ರಿಕನ್ ಒಕ್ಕೂಟವನ್ನು 'ಜಿ20' ಗುಂಪಿನ ಖಾಯಂ ಸದಸ್ಯನಾಗಿ ಸ್ವಾಗತಿಸುವ ಭಾರತದ ಪ್ರಸ್ತಾಪವನ್ನು ಒಪ್ಪಿಕೊಂಡಿದ್ದು ಈ ನಿಟ್ಟಿನಲ್ಲಿ ದೊಡ್ಡ ಸಾಧನೆಯಾಗಿದೆ. ಕಳೆದ ವರ್ಷ ಸೆನೆಗಲ್ ಅಧ್ಯಕ್ಷರು ಮತ್ತು ಆಫ್ರಿಕನ್ ಒಕ್ಕೂಟದ ಮಾಜಿ ಅಧ್ಯಕ್ಷ ಶ್ರೀ ಮ್ಯಾಕಿ ಸಾಲ್ ಅವರಿಗೆ ಪ್ರಧಾನ ಮಂತ್ರಿ ಶ್ರೀ ಮೋದಿ ಅವರು ನೀಡಿದ ಭರವಸೆಯಂತೆ ಆಫ್ರಿಕನ್ ಒಕ್ಕೂಟವು ಈಗ 'ಜಿ20'ಯ ಖಾಯಂ ಸದಸ್ಯನಾಗಿದ್ದು, 'ಜಿ20' ಅನ್ನು ಇಂದು ಅಸ್ತಿತ್ವದಲ್ಲಿರುವ ಅತ್ಯಂತ ಪ್ರಾತಿನಿಧಿಕ ಅಂತಾರಾಷ್ಟ್ರೀಯ ಗುಂಪುಗಳಲ್ಲಿ ಒಂದನ್ನಾಗಿ ಮಾಡುವಲ್ಲಿ ಭಾರತ ಯಶಸ್ವಿಯಾಗಿದೆ. ಇದು 21ನೇ ಶತಮಾನದ ವಾಸ್ತವಗಳನ್ನು ನಿಜವಾಗಿಯೂ ಪ್ರತಿಬಿಂಬಿಸುತ್ತದೆ.

ಭಾರತವು 'ಜಾಗತಿಕ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಭಂಡಾರ'ವನ್ನು ರಚಿಸಲು ಮುಂದಾಳತ್ವ ವಹಿಸಿದ್ದು, ಇದು 'ವರ್ಚುವಲ್ ಸ್ಟ್ಯಾಕ್' (ವಿದ್ಯುನ್ಮಾನಿತ ಸುಸಂಬಂಧಿತ ಜೋಡಣೆ) ಆಗಿದೆ. ಅಲ್ಲಿ 'ಜಿ20' ಮತ್ತು 'ಜಿ20' ಸದಸ್ಯರಲ್ಲದ ದೇಶಗಳು ಪರಸ್ಪರ ಪ್ರಯೋಜನಕಾರಿ ಪರಿಸರ ವ್ಯವಸ್ಥೆಯನ್ನು ಮುನ್ನಡೆಸಲು ತಮ್ಮ ಸರ್ವರಿಗೂ ಮುಕ್ತವಾದ ಕಾರ್ಯವಿಧಾನಗಳನ್ನು ಸ್ವಯಂಪ್ರೇರಿತವಾಗಿ ಹಂಚಿಕೊಳ್ಳಬಹುದು. ಸ್ವಯಂಪ್ರೇರಿತ ಉಪಕ್ರಮವಾದ 'ಒನ್ ಫ್ಯೂಚರ್ ಅಲೈಯನ್ಸ್' ರಚಿಸುವ ಪ್ರಸ್ತಾಪವನ್ನು ಸಹ ಸ್ವಾಗತಿಸಲಾಯಿತು. ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಾಮರ್ಥ್ಯ ಹೆಚ್ಚಳ, ತಾಂತ್ರಿಕ ನೆರವು ಹಾಗೂ ಸಮರ್ಪಕ ಧನಸಹಾಯದ ಬೆಂಬಲವನ್ನು ಒದಗಿಸುವುದು 'ಒನ್ ಫ್ಯೂಚರ್ ಅಲೈಯನ್ಸ್'ನ ಉದ್ದೇಶವಾಗಿದೆ.

ಸುಸ್ಥಿರ ಹಾಗೂ ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ 'ನವದೆಹಲಿ ನಾಯಕರ ಘೋಷಣೆ'ಯಲ್ಲಿ ಆದ್ಯತೆ ನೀಡಲಾಗಿದೆ. ಜಾಗತಿಕ ಮೌಲ್ಯ ಸರಪಳಿಗಳನ್ನು ಬಲಪಡಿಸಲು, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯ ಮಾಡಲು ಹಾಗೂ ಸುಸ್ಥಿರ ಹೂಡಿಕೆಯನ್ನು ಉತ್ತೇಜಿಸಲು 'ಜಿ20' ಬದ್ಧತೆ ವ್ಯಕ್ತಪಡಿಸಿದೆ. ಕೌಶಲ್ಯ ಅಂತರಗಳನ್ನು ನಿವಾರಿಸುವುದು ಮತ್ತು ಯೋಗ್ಯ ಕೆಲಸವನ್ನು

## ಸುಸ್ಥಿರ ಭವಿಷ್ಯಕ್ಕಾಗಿ ಪಾರಂಪರಿಕ ಧಾನ್ಯಗಳ ಕೃಷಿ ಪುನರುಜ್ಜೀವನ

# ಮಹರ್ಷಿ

**ಸಿರಿಧಾನ್ಯ ಮತ್ತು ಇತರ ಪಾರಂಪರಿಕ ಧಾನ್ಯ ಕುರಿತಾದ ಅಂತಾರಾಷ್ಟ್ರೀಯ ಸಂಶೋಧನಾ ಉಪಕ್ರಮ**

***ಮ್ಯಾಕ್ಸ್ ಜಿ20ರಲ್ಲಿ ಪ್ರತಿಪಾದನೆ***



ಉತ್ತೇಜಿಸುವ ನಿಟ್ಟಿನಲ್ಲಿ ಇದೇ ಬದ್ಧತೆಯನ್ನು ತೋರಲಾಗಿದೆ. 'ಸುಸ್ಥಿರ ಅಭಿವೃದ್ಧಿ ಗುರಿ'ಗಳ (ಎಸ್‌ಡಿಜಿ) ಪ್ರಗತಿಯಲ್ಲಿ ಹಿಂದುಳಿದಿರುವದನ್ನು ಜಿ20 ಗುರುತಿಸಿದ್ದು, '2030ರ ಕಾರ್ಯಸೂಚಿ'ಯನ್ನು ತ್ವರಿತಗೊಳಿಸಲು ಕ್ರಿಯಾ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ. ಸರ್ಕಾರದ 'ಮಿಷನ್ ಲೈಫ್' ಅನ್ನು ಆಧರಿಸಿದ 'ಸುಸ್ಥಿರ ಅಭಿವೃದ್ಧಿಗಾಗಿ ಜೀವನಶೈಲಿಯ ಉನ್ನತ ಮಟ್ಟದ ತತ್ವಗಳು' ನೀತಿಯು ಇದರಲ್ಲಿ ಸೇರಿದೆ. ಇದಲ್ಲದೆ, ಹವಾಮಾನ–ಸ್ಥಿತಿಸ್ಥಾಪಕ ಧಾನ್ಯಗಳ ಮೇಲೆ 'ಜಿ20' ಗಮನ ಕೇಂದ್ರೀಕರಿಸಿದೆ. ಇದರ ಭಾಗವಾಗಿ 'ಸಿರಿಧಾನ್ಯಗಳು ಮತ್ತು ಇತರ ಪ್ರಾಚೀನ ಧಾನ್ಯಗಳ ಅಂತಾರಾಷ್ಟ್ರೀಯ ಸಂಶೋಧನಾ ಉಪಕ್ರಮ' (ಮಹರ್ಷಿ) ಆರಂಭಿಸುವ ಭಾರತದ ಪ್ರಸ್ತಾಪವನ್ನು ಸ್ವಾಗತಿಸಲಾಗಿದ್ದು, ಆ ಮೂಲಕ ಜಾಗತಿಕ ಆಹಾರ ಭದ್ರತೆ ಮತ್ತು ಪೌಷ್ಟಿಕಾಂಶದ ಬಲವರ್ಧನೆಗೆ 'ಜಿ20'ಬದ್ಧತೆ ವ್ಯಕ್ತಪಡಿಸಿದೆ. ಇದಲ್ಲದೆ, ಹವಾಮಾನ ಉಪಕ್ರಮಕ್ಕೆ ಸಂಬಂಧಿಸಿದಂತೆಯೂ ಭಾರತದ ಸಮರ್ಥ ನಾಯಕತ್ವಕ್ಕೆ 'ಜಿ20' ಗುಂಪಿನಲ್ಲಿರುವ ಅಭಿವೃದ್ಧಿ ಹೊಂದಿದ ದೇಶಗಳಿಂದ ದೃಢವಾದ ಬದ್ಧತೆ ವ್ಯಕ್ತವಾಗಿದೆ. 2025ರವರೆಗೆ ವಾರ್ಷಿಕವಾಗಿ 100 ಶತಕೋಟಿ ಡಾಲರ್ ಒದಗಿಸುವ ಭರವಸೆಯನ್ನು ಈ ದೇಶಗಳು ನೀಡಿವೆ.

ಬಹುಪಕ್ಷೀಯ ಸಂಸ್ಥೆಗಳಲ್ಲಿ ಸುಧಾರಣೆ ತರುವುದು ಭಾರತದ ಆದ್ಯತೆಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕುಗಳನ್ನು ಸುಧಾರಿಸಲು ಮತ್ತು ಜಾಗತಿಕ ಸಾಲದ ಸಮಸ್ಯೆಗಳನ್ನು ಪರಿಹರಿಸಲು 'ಜಿ20' ಬದ್ಧತೆ ವ್ಯಕ್ತಪಡಿಸಿರುವುದು ಗಮನಾರ್ಹ ಸಾಧನೆಯಾಗಿದೆ.

'ನವೋದ್ಯಮ – 20', 'ವಿಪತ್ತು ಪರಿಹಾರ; ಕಡಿತ ಪಡೆ' ಮತ್ತು 'ಸೈಬರ್ ಭದ್ರತೆ ಕುರಿತ ಸಭೆ' ಮುಂತಾದ ಹೊಸ ಉಪಕ್ರಮಗಳು 'ಜಿ20' ಅಧ್ಯಕ್ಷತೆಯ ಅವಧಿಯಲ್ಲಿ ನಡೆದ ಭಾರತದ ಸಕ್ರಿಯ ಕಾರ್ಯವಿಧಾನವನ್ನು ಪ್ರತಿಬಿಂಬಿಸುತ್ತವೆ.

ಭಾರತದ 'ಜಿ20' ಅಧ್ಯಕ್ಷತೆಯು ನಿಜವಾಗಿಯೂ ಒಂದು ರಾಜತಾಂತ್ರಿಕ ತಿರುವಿಗೆ ಹೆಗ್ಗುರುತಾಗಿದೆ. ಇದರ ಸ್ಮರಣೀಯ ಯಶಸ್ಸು ವಿಶ್ವ ವೇದಿಕೆಯಲ್ಲಿ ಪ್ರತಿಧ್ವನಿಸಿದೆ. ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾದ ಭಾರತವು ಪ್ರಬಲ ಶಕ್ತಿಯಾಗಿ ಬೆಳೆದಿದೆ. ಜಾಗತಿಕ ದಕ್ಷಿಣದ ಕಾಳಜಿಗಳನ್ನು ಪ್ರತಿಪಾದಿಸುವ ತನ್ನ ಅಚಲ ಬದ್ಧತೆಯ ಮೂಲಕ ಭಾರತವು 'ವಿಶ್ವಮಿತ್ರ', 'ಸಾರ್ವತ್ರಿಕ ಸ್ನೇಹಿತ' ಮತ್ತು 'ಮಧ್ಯಸ್ಥಿಕೆ ನೇತಾರ' ಎಂಬ ಬಿರುದುಗಳಿಗೆ ಪಾತ್ರವಾಗಿದೆ.

ದೂರದೃಷ್ಟಿಯ ನಾಯಕತ್ವ, ಸರ್ವರ ಒಳಗೊಳ್ಳುವಿಕೆ ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು ದೃಢವಾದ ಬದ್ಧತೆಯ ಮೂಲಕ ಭಾರತವು ಸಹಕಾರ ಮತ್ತು ಸಹಯೋಗದ ಪರಿವರ್ತಕ ಯುಗಕ್ಕೆ ನಾಂದಿ ಹಾಡಿದೆ. ಭಾರತವು ಕೇವಲ ತನ್ನ ಹಿತಾಸಕ್ತಿಗಳನ್ನಷ್ಟೇ ಪರಿಗಣಿಸದೆ, ಸಾಮೂಹಿಕ ಒಳಿತನ್ನು ಪರಿಗಣಿಸುವ ಕಾಳಜಿಯನ್ನು ತೋರಿದೆ. ರಾಷ್ಟ್ರಗಳ ನಡುವೆ ಪರಸ್ಪರ ಸಂಪರ್ಕಕ್ಕೆ ಹಂಚಿಕೆಯ ಜವಾಬ್ದಾರಿಯ ಅಗತ್ಯವಿದೆ ಎಂದು ಗುರುತಿಸಿದೆ. 'ಜಿ20' ಗುಂಪಿನೊಳಗೆ ಅಭಿವೃದ್ಧಿ ಕಾರ್ಯಸೂಚಿಗೆ ಆದ್ಯತೆ ನೀಡುವ ಮೂಲಕ, ಭಾರತವು ಹೆಚ್ಚು ಸ್ಥಿತಿಸ್ಥಾಪಕ ಮತ್ತು ಎಲ್ಲರನ್ನೂ ಒಳಗೊಂಡ ಆರ್ಥಿಕ ಕ್ರಮದತ್ತ ಮಾರ್ಗಸೂಚಿಯನ್ನು ಸುಗಮಗೊಳಿಸಿದೆ. ಎಲ್ಲರಿಗೂ ಸಮೃದ್ಧ ಮತ್ತು ಸಮಾನ ಭವಿಷ್ಯಕ್ಕೆ ವೇದಿಕೆಯನ್ನು ಕಲ್ಪಿಸಿದೆ.

'ಜಿ20' ನಾಯಕನಾಗಿ ಭಾರತವು ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯ ಏರಿಳಿತಗಳನ್ನು ಕೇವಲ ನಿರ್ವಹಣೆ ಮಾಡಿದ್ದು ಮಾತ್ರವಲ್ಲದೆ, ಆ ಸವಾಲುಗಳನ್ನು ಎದುರಿಸಲು ಮುಂದಾಳತ್ವ ವಹಿಸಿದೆ. ಭವಿಷ್ಯವನ್ನು ರೂಪಿಸುವ ಮಾರ್ಗದಲ್ಲಿ ಮುಂದಾಳತ್ವ ವಹಿಸುವ ಜೊತೆಗೆ, ಸಂಕೀರ್ಣ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ಭಾರತ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಭಾರತವು ಜಿ20 ಅಧ್ಯಕ್ಷತೆಯನ್ನು ಹಸ್ತಾಂತರಿಸಿದರೂ, 'ಜಿ20' ದೇಶಗಳು ಹಾಗೂ ವಿಶ್ವದ ಮೇಲೆ ಆಳವಾದ ಪ್ರಭಾವ ಬೀರುವ ಅಸಾಧಾರಣ ನಾಯಕತ್ವ ಪರಂಪರೆಯನ್ನು ಮುಂದುವರಿಸಲಿದೆ. ಆ ಮೂಲಕ ಮುಂದಿನ ಪೀಳಿಗೆಗೆ ಉಜ್ವಲ ಮತ್ತು ಹೆಚ್ಚು ಸಾಮರಸ್ಯದ ಹಾದಿಯನ್ನು ರೂಪಿಸುತ್ತದೆ. ಈ ಪರಿವರ್ತನಾತ್ಮಕ ಪಯಣದಲ್ಲಿ, ಜಾಗತಿಕ ನಾಯಕನಾಗಿ ಭಾರತದ ಉದಯವು ಕೇವಲ ಪ್ರತಿಷ್ಠೆಯ ವಿಷಯವಲ್ಲ, ಬದಲಿಗೆ ಎಲ್ಲರಿಗೂ ಉತ್ತಮ ಜಗತ್ತನ್ನು ರೂಪಿಸುವ ಭಾರತದ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ.

# ವರ್ತುಲ ವಿಶ್ವ ಆರ್ಥಿಕತೆ ವಿನ್ಯಾಸದೆಡೆಗೆ

* ಅತುಲ್ ಬಗ್ಯೆ
** ಮನಿಷಾ ಚೌಧರಿ



**ಭಾರತದ ಜಿ20 ಅಧ್ಯಕ್ಷತೆಯ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಾದ ಸುಸ್ಥಿರ ಅಭಿವೃದ್ಧಿಗಾಗಿನ ಜೀವನಶೈಲಿ ಕುರಿತಾದ ಉನ್ನತ ಮಟ್ಟದ ಮೌಲ್ಯಗಳು, ಸುಸ್ಥಿರ ಬಳಕೆ ಮತ್ತು ಉತ್ಪಾದನೆ ಉತ್ತೇಜನದ ಬದ್ಧತೆಯ ಅಗತ್ಯವನ್ನು ಪ್ರತಿಫಲಿಸುತ್ತವೆ. ಎಲ್ಲರ ಅಗತ್ಯಗಳನ್ನು ಪೂರೈಸುವ ಜೊತೆಗೆ ಜಾಗತಿಕವಾಗಿ ವಸ್ತುಗಳ ಬಳಕೆ ಕಡಿಮೆ ಮಾಡಲು ಇದು ಸರಿಯಾದ ಸಮಯ. ವಿವಿಧ ಅಭಿವೃದ್ಧಿ ಮತ್ತು ರಾಷ್ಟ್ರೀಯ ಸನ್ನಿವೇಶಗಳ ಅಗತ್ಯಗಳಿಗೆ ಸ್ಪಂದಿಸುವ ಜೊತೆಗೆ ವರ್ತುಲಾವೃತ್ತ ಮತ್ತು ಹಸಿರು ಆರ್ಥಿಕ ಪ್ರಗತಿಯೆಡೆಗೆ ಪರಿವರ್ತನೆಗೆ ಸೂಕ್ತ ಪರಿಸರ ರೂಪಿಸುವುದು ಮುಖ್ಯ.**

ವಿಶ್ವದ ಜನಸಂಖ್ಯೆ 2050ರ ವೇಳೆಗೆ 10 ಶತಕೋಟಿ ತಲುಪಬಹುದಾಗಿದೆ. ಅಂದರೆ ಆಹಾರ, ಪ್ರವೃತ್ತಿ, ಪ್ರವಾಸ, ವಸತಿ ಮತ್ತಿತರ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಹೆಚ್ಚಾಗಲಿದೆ ಎಂದು ಹೇಳಬಹುದು. ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಲು, ವಾರ್ಷಿಕ ಜಾಗತಿಕ ಉತ್ಪನ್ನಗಳ ಬೇಡಿಕೆ ಈಗಾಗಲೇ ಏರಿಕೆಯಾಗಿದೆ. 1970 ರಲ್ಲಿ 22 ಶತಕೋಟಿ ಟನ್ ಗಳಷ್ಟಿದ್ದು, 2010 ಕ್ಕೆ 70 ಶತಕೋಟಿ ಟನ್ ಗಳಿಗೆ ಏರಿಕೆಯಾಗಿದೆ, 2060ರ ವೇಳೆಗೆ ಇದು ದ್ವಿಗುಣಗೊಳ್ಳುವ ನಿರೀಕ್ಷೆ ಇದೆ. ಈ ವರ್ಷದಲ್ಲಿ ಎಂಟು ತಿಂಗಳಿಗೂ ಕಡಿಮೆ ಅವಧಿಯಲ್ಲೆ ಪರಿಸರ ಸಂಪನ್ಮೂಲಗಳು ಮತ್ತು ಸೇವೆಗಳಿಗಾಗಿ ಮಾನವನ ಬೇಡಿಕೆಯ ಪ್ರಮಾಣ 2023 ರಲ್ಲಿ ಭೂಮಿ ಎಷ್ಟು ನೀಡಬಲ್ಲದೋ ಅದಕ್ಕಿಂತ ಹೆಚ್ಚಿದೆ, ಹಾಗೇ ನಮ್ಮ ಬಳಕೆಯ ದರ ಕೂಡ ಏರಿಕೆಯಾಗಿದೆ. ಇದರಿಂದಾಗಿ ಭೂಮಿಯ ಸೀಮಿತ ಸಂಪನ್ಮೂಲಗಳ ಮೇಲೆ ಒತ್ತಡ ಹೆಚ್ಚಾಗಿದೆ. ಇದು ಸಂಪನ್ಮೂಲ ಅಭದ್ರತೆ ಸೃಷ್ಟಿಸಿದೆ ಮತ್ತು ಜೈವಿಕ ವೈವಿಧ್ಯತೆಯ ನಷ್ಟ, ಮಾಲಿನ್ಯ, ಹೆಚ್ಚುತ್ತಿರುವ ಹೊರಸೂಸುವಿಕೆಗಳು ಮತ್ತು ಹವಾಮಾನ ಬದಲಾವಣೆಗೂ ಕಾರಣವಾಗಿದೆ.

ಸುಸ್ಥಿರ ಜೀವನಶೈಲಿ ಅಳವಡಿಸಿಕೊಳ್ಳುವುದು ಮತ್ತು ಸೂಕ್ತ ಬದಲಾವಣೆಗಳು ನಮ್ಮ ಹವಾಮಾನ ಮತ್ತು ಪರಿಸರ ಗುರಿಗಳನ್ನು ತಲುಪುವಲ್ಲಿ ನಿರ್ಣಾಯಕವಾಗಿವೆ. ಇವು ಬದ್ಧ ಬಳಕೆ ಮತ್ತು ಉತ್ಪಾದನೆಯ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ 12) ಕ್ಕೆ ಅನುಗುಣವಾಗಿವೆ. ಎಲ್ಲ ವಲಯಗಳಲ್ಲಿ ನೀತಿ ನಿರೂಪಣೆಗಳು, ಉತ್ಪನ್ನಗಳು, ಕಡಿಮೆ – ಇಂಗಾಲಾಮ್ಲ, ಕಡಿಮೆ ಹೊರಸೂಸುವಿಕೆ ಪರ್ಯಾಯಗಳು, ಮೂಲಸೌಕರ್ಯ, ಸೇವೆ, ತಂತ್ರಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಗೆ ಮಹತ್ವದ ಹೂಡಿಕೆಗಳ ಅಗತ್ಯವಿದೆ. ವಸ್ತುಗಳ ಲಭ್ಯತೆ ಅಥವಾ ಚಲಾವಣೆ ಖಾತರಿಪಡಿಸಲು ಬಳಕೆ ಮತ್ತು ಉತ್ಪಾದನೆಯ ಸುಸ್ಥಿರ ವಿಧಾನಗಳತ್ತ ಹೊರಳಬೇಕಾದ ತುರ್ತು ಅಗತ್ಯವಿದೆ. ವಸ್ತುಗಳ ಲಭ್ಯತೆಯ ಸರಪಳಿ ಅಥವಾ ವರ್ತುಲಾವೃತ್ತ ಎನ್ನುವ ಪರಿಕಲ್ಪನೆಯನ್ನು ವಸ್ತುವಿನ ಗರಿಷ್ಠ ಮೌಲ್ಯದ ಬಳಕೆಗೆ ಬಳಸಲಾಗುತ್ತದೆ. ಇದರಡಿ, ಉತ್ಪನ್ನಗಳು ಮತ್ತು ವಸ್ತುಗಳ ಪೂರ್ತಿ ಜೀವನಚಕ್ರ ಸೇರುತ್ತದೆ. ಅಂದರೆ ಉತ್ಪನ್ನಗಳನ್ನು ದೀರ್ಘಾವಧಿ ಬಾಳಿಕೆ ಬರುವಂತೆ ವಿನ್ಯಾಸ ಮಾಡುವುದು ಮತ್ತು ಮರುಬಳಕೆ ಮೂಲಕ ವಸ್ತುಗಳನ್ನು ಮತ್ತೆ ಪಡೆಯಬಹುದು ಎಂಬುದನ್ನು ಖಾತರಿಪಡಿಸಿಕೊಳ್ಳುವುದು, ಉತ್ಪನ್ನದ ಪೂರ್ಣ ಬಳಕೆಯ ಅವಧಿಯವರೆಗೆ ಅದನ್ನು ನಿರ್ವಹಿಸುವುದು. ಇದರಲ್ಲಿ ಸೇರಿವೆ. ಸುಸ್ಥಿರವಲ್ಲದ ಬಳಕೆ ಮತ್ತು ಉತ್ಪಾದನೆಯ ಹಾನಿಕಾರಕ ಪರಿಸರಾತ್ಮಕ ಮತ್ತು ಸಾಮಾಜಿಕ–ಆರ್ಥಿಕ ಪರಿಣಾಮಗಳನ್ನು ನಿಗ್ರಹಿಸುವ ಮೂಲಕ ಬಳಕೆ ಆಧರಿತ ಪರಿಸರ ಅವನತಿ ಮತ್ತು ಹಸಿರು ಅನಿಲ ಹೊರಸೂಸುವಿಕೆ ತಗ್ಗಿಸುವುದು ವರ್ತುಲಾವೃತ್ತಿಯ ಮುಖ್ಯ ಉದ್ದೇಶವಾಗಿದೆ. ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡುವುದು ಅಥವಾ ನಿಯಂತ್ರಿಸುವುದು ಕೂಡ ಅದರ ಮತ್ತೊಂದು ಉದ್ದೇಶ. ವರ್ತುಲಾವೃತ್ತಿಯ ಆರ್ಥಿಕತೆಯು ಹಸಿರು ಉದ್ಯೋಗಗಳು ಮತ್ತು ವರ್ತುಲಾವೃತ್ತಿಯ ವ್ಯಾಪಾರ ಅವಕಾಶಗಳನ್ನು ಕೂಡ ನೀಡಲಿದೆ.

ನಮ್ಮ ಜೀವನಶೈಲಿ ಆಯ್ಕೆಗಳು ವರ್ತುಲಾವೃತ್ತ ಆರ್ಥಿಕ ಪ್ರಗತಿಯತ್ತ ಬದಲಾವಣೆಯ ಮೇಲೆ ಪ್ರಭಾವ ಬೀರಬಲ್ಲದು. ಒಟ್ಟು ಹಸಿರು ಅನಿಲ ಹೊರಸೂಸುವಿಕೆಗಳ ಎರಡನೇ ಮೂರರಷ್ಟು ಪ್ರಮಾಣ ಗೃಹಬಳಕೆ ಮತ್ತು ಜೀವನಶೈಲಿಯ ಪರಿಣಾಮ ಎಂಬುದನ್ನು ಸಾಕ್ಷ್ಯಾಧಾರಗಳು ಸೂಚಿಸುತ್ತವೆ. ಸುಸ್ಥಿರ ಮತ್ತು ಕಡಿಮೆ ಇಂಗಾಲಾಮ್ಲ ಜೀವನಶೈಲಿಗಾಗಿ ಸಾರಿಗೆ,

* ಮುಖ್ಯಸ್ಥರು. ** ಕಾರ್ಯಕ್ರಮ ಅಧಿಕಾರಿ, ವಿಶ್ವ ಸಂಸ್ಥೆ ಪರಿಸರ ಕಾರ್ಯಕ್ರಮದ ಭಾರತದ ಕಚೇರಿ.
ಇಮೇಲ್: * bagai@un.org ** manisha.choudhary@un.org




ವಸತಿ ಮತ್ತು ಇಂಧನ ಬಳಕೆ, ಪಥ್ಯದ ಆಯ್ಕೆಗಳು, ಆಹಾರ ಮತ್ತು ಹೊಸ ವ್ಯಾಪಾರ ಮಾದರಿಗಳು ಅಗತ್ಯವಾಗಿವೆ. ಈ ವಿಷಯಗಳಲ್ಲಿ ಸುಸ್ಥಿರತೆಯ ಮೇಲೆ ವೈಯಕ್ತಿಕ ಮಟ್ಟದ ಪ್ರಭಾವ ಬೀರಲು ಅವಕಾಶವಿದೆ. ಹೊಸ ವ್ಯಾಪಾರ ಮಾದರಿಯಲ್ಲಿ, ಫ್ಯಾಷನ್ ಇಂಡಸ್ಟ್ರಿ ಬಗ್ಗೆ ಮರುಚಿಂತನೆ ಅಗತ್ಯವಿದೆ. ಯುಎನ್‌ಇಪಿ ನೀಡಿರುವ ವರದಿ ಪ್ರಕಾರ, ಕಳೆದ 15 ವರ್ಷಗಳಲ್ಲಿ ಫ್ಯಾಷನ್ ಉಡುಪು ಬಳಕೆ ದುಪ್ಪಟ್ಟಿಗಿಂತ ಹೆಚ್ಚಾಗಿದೆ. ಹಾಗೇ ಇನ್ನು ತೊಡುವುದು ಬೇಡ ಎಂದು ವಸ್ತ್ರಗಳನ್ನು ಬೇಗ ಬಿಸಾಡಲಾಗುತ್ತಿದೆ. ಬೇಡ ಎಂದು ನಿರ್ಧರಿಸುವ ಮುನ್ನ ಬಟ್ಟೆಗಳನ್ನು ಧರಿಸುವ ಪ್ರಮಾಣ ಶೇಕಡ 36 ರಷ್ಟು ಕಡಿಮೆಯಾಗಿದೆ. ಇಡೀ ಜಗತ್ತಿನಾದ್ಯಂತ, ಪ್ರತಿ ಕ್ಷಣ ಅಂದರೆ ಪ್ರತಿ ಸೆಕೆಂಡ್ ನಲ್ಲೂ ಅಂದಾಜು 460 ಶತಕೋಟಿ ಡಾಲರ್ ಮೌಲ್ಯದಷ್ಟು ವಸ್ತ್ರಗಳನ್ನು ಬಿಸಾಡಲಾಗುತ್ತಿದೆ. ಪ್ರಸ್ತುತದ ಬಳಕೆಯ ಪ್ರವೃತ್ತಿಗಳು ಮತ್ತು ಅಂದಾಜುಗಳನ್ನು ಗಮನಿಸಿದರೆ, ಫ್ಯಾಷನ್ ವಲಯ ಇನ್ನೂ ವರ್ತುಲಾವೃತ್ತಿಯ ಪಥದಲ್ಲಿಲ್ಲ ಎಂಬುದು ತೋರುತ್ತದೆ. ಪ್ರಸ್ತುತ ಫ್ಯಾಷನ್ ವಲಯದ ಸುಸ್ಥಿರತೆ ಹೆಚ್ಚಿಸಲು ಇಡೀ ಜವಳಿ ಮೌಲ್ಯ ಸರಪಳಿಯಲ್ಲಿ ಸೂಕ್ತ ಕ್ರಮದ ಅಗತ್ಯವಿದೆ.

### ಜಿ20 ರಾಷ್ಟ್ರಗಳ ಹೆಚ್ಚಿನ ಆದ್ಯತೆ

ಭಾರತದ ಜಿ20 ಅಧ್ಯಕ್ಷತೆಯ ಸಂದರ್ಭದಲ್ಲಿ ಸದಸ್ಯ ರಾಷ್ಟ್ರಗಳು ಅಳವಡಿಸಿಕೊಂಡಿರುವ ಸುಸ್ಥಿರ ಅಭಿವೃದ್ಧಿಗಾಗಿ ಜೀವನಶೈಲಿಯ ಉನ್ನತ ಮಟ್ಟದ ಮೌಲ್ಯಗಳು, ಸುಸ್ಥಿರ ಬಳಕೆ ಮತ್ತು ಉತ್ಪಾದನೆ ಉತ್ತೇಜನದ ಬದ್ಧತೆಯ ಅಗತ್ಯವನ್ನು ಪ್ರತಿಫಲಿಸುತ್ತದೆ. ಜಿ20, ಪರಿಸರ ಮತ್ತು ಹವಾಮಾನ ಸಚಿವರುಗಳು ಸಭೆಯ ಫಲಶೃತಿಯ ದಾಖಲೆಯ ಜೊತೆಗೆ, ಉನ್ನತ ಮಟ್ಟದ ಮೌಲ್ಯಗಳು ಸುಸ್ಥಿರ ಅಭಿವೃದ್ಧಿಯ ಗುರಿ ಸಾಧಿಸುವಲ್ಲಿ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಮತ್ತು ವರ್ತುಲಾವೃತ್ತಿ ಆರ್ಥಿಕತೆಯು ನಿರ್ಣಾಯಕ ಪಾತ್ರ ವಹಿಸಿದೆ ಎಂಬುದನ್ನು ಗುರುತಿಸುತ್ತದೆ. ಜಾಗತಿಕವಾಗಿ ವಸ್ತುಗಳ ಬಳಕೆ ಕಡಿಮೆ ಮಾಡುವ ಜೊತೆಗೆ ಎಲ್ಲರಿಗೂ ಮೂಲಭೂತ ಅಗತ್ಯ ಸಿಗುವುದನ್ನು ಖಾತರಿಪಡಿಸಲು ಕಾರ್ಯಪ್ರವೃತ್ತರಾಗಲು ಸಮಯ ಈಗ ಒದಗಿ ಬಂದಿದೆ. ವಿವಿಧ ಅಭಿವೃದ್ಧಿ ಅಗತ್ಯಗಳಿಗೆ ಮತ್ತು ರಾಷ್ಟ್ರೀಯ ಸನ್ನಿವೇಶಗಳಿಗೆ ತಕ್ಕಂತೆ ವರ್ತುಲಾವೃತ್ತ ಮತ್ತು ಹಸಿರು ಆರ್ಥಿಕ ಪ್ರಗತಿಯತ್ತ ಪರಿವರ್ತನೆಗೆ ಸೂಕ್ತ ಪರಿಸರವನ್ನು ನಿರ್ಮಿಸಿಕೊಳ್ಳಲು ಹೀಗೆ ಮಾಡುವುದು ಅಗತ್ಯ.

ಹವಾಮಾನ ವಿಪತ್ತುಗಳನ್ನು ತಡೆಯಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿ ಹಾಗೂ ಹವಾಮಾನ, ಜೀವವೈವಿಧ್ಯ, ಮಾಲಿನ್ಯದಂತಹ ಇತರ ಜಾಗತಿಕ ಗುರಿಗಳ ಸಾಕಾರಕ್ಕಾಗಿ ಮುನ್ನೋಟದ ದೃಷ್ಟಿಕೋನವಾಗಿ ಹಾಗೂ ಜಿ20 ರಾಷ್ಟ್ರಗಳ ಬದ್ಧತೆಯ ಸಹಕಾರಕ್ಕಾಗಿ ಪ್ರಸ್ತುತ ಬಳಕೆ ಮತ್ತು ಉತ್ಪಾದನಾ ವಿಧಾನದಲ್ಲಿ ವ್ಯವಸ್ಥೆ ವ್ಯಾಪಿಯಾಗಿ ಪರಿವರ್ತನೆ ತುರ್ತು ಅಗತ್ಯವಾಗಿದೆ. ಆರ್ಥಿಕತೆಯ ಮೇಲೆ ಹೆಚ್ಚು ಪ್ರಭಾವ ಬೀರುವ ವಲಯಗಳಲ್ಲಿ ಪರಿವರ್ತನಾ ಪೂರೈಕೆ ಬದಲಾವಣೆಗಳು ಅಗತ್ಯವಾಗಿದೆ. (ಸಾರಿಗೆ, ಜವಳಿ, ಪ್ಲಾಸ್ಟಿಕ್, ಕಟ್ಟಡ ಮತ್ತು ನಿರ್ಮಾಣ ಇತ್ಯಾದಿ ವಲಯಗಳು). ಮಾನವೀಯತೆ ಎದುರಿಸುತ್ತಿರುವ ಪರಿಸರಾತ್ಮಕ, ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟುಗಳನ್ನು ಒಟ್ಟಾಗಿ ಕ್ಷಿಪ್ರವಾಗಿ ಮತ್ತು ಸವಾಲಿನ ತೀವ್ರತೆಗೆ ಅನುಗುಣವಾಗಿ ಎದುರಿಸಬೇಕಾಗಿದೆ. ಇದೇ ವೇಳೆ ಪ್ರತಿ ರಾಷ್ಟ್ರಕ್ಕೂ ಬೇಕಾಗಿರುವ ನಿರ್ದಿಷ್ಟ ಅಗತ್ಯಗಳನ್ನು ಗುರುತಿಸಬೇಕಿದೆ.

### ಭಾರತದ ಸಕ್ರಿಯ ಕ್ರಮಗಳು

ಭಾರತ ಸರ್ಕಾರ ವರ್ತುಲಾವೃತ್ತ ಆರ್ಥಿಕತೆಗೆ, ಸಂಪನ್ಮೂಲದ ಸಮರ್ಥ ಬಳಕೆಗೆ ಹಾಗೂ ಸುಸ್ಥಿರ ಬಳಕೆ ಮತ್ತು ಉತ್ಪಾದನೆಗೆ ವಿಶೇಷ ಆದ್ಯತೆ ನೀಡಿದೆ. ತಯಾರಿಕಾ ಆಧರಿತ ಪ್ರಗತಿಯತ್ತ ಭಾರತದ ಪರಿವರ್ತನೆಯು ಉತ್ಪಾದನಾ ವಲಯದಲ್ಲಿ ವರ್ತುಲಾವೃತ್ತ ಆರ್ಥಿಕತೆಯ ವಿಧಾನವನ್ನು ಅಳವಡಿಸಿಕೊಳ್ಳಲು ಗಮನಾರ್ಹ ಅವಕಾಶ ಒದಗಿಸಲಿದೆ. ಇತ್ತೀಚಿನ ವರದಿಗಳ ಪ್ರಕಾರ, ಉದ್ಯಮ ವ್ಯಾಪಾರಗಳು ಎಂದಿನಂತೆ ನಡೆಯುವ ಸನ್ನಿವೇಶವಿದ್ದಲ್ಲಿ, ವರ್ತುಲಾವೃತ್ತ ಆರ್ಥಿಕ ಪ್ರಗತಿಯತ್ತ ಪರಿವರ್ತನೆಯು ಭಾರತದಲ್ಲಿ 2050ರ ವೇಳೆಗೆ ವಾರ್ಷಿಕ ಸುಮಾರು 624 ಶತಕೋಟಿ ಡಾಲರ್ ಮೌಲ್ಯದಷ್ಟು ಆರ್ಥಿಕ ಲಾಭವನ್ನು ತರಬಹುದಾಗಿದೆ. ವರ್ತುಲಾವೃತ್ತ ಆರ್ಥಿಕತೆಯೆಡೆಗಿನ ಪರಿವರ್ತನೆಯು ಜಾಗತಿಕ ಉದ್ಯೋಗ ಮತ್ತು ಹಸಿರು ಉದ್ಯೋಗಗಳನ್ನು ಹೆಚ್ಚಿಸಬಲ್ಲದು. ಐಎಲ್‌ಓ ಅಂದಾಜಿನ ಪ್ರಕಾರ ವರ್ತುಲಾವೃತ್ತ ಆರ್ಥಿಕತೆಯೆಡೆ ಹೊರಳಿದಲ್ಲಿ ಜಾಗತಿಕ ಉದ್ಯೋಗ 6 ದಶಲಕ್ಷದಷ್ಟು ಬೆಳವಣಿಗೆ ಕಾಣಬಹುದಾಗಿದೆ.

"ಸಂಪನ್ಮೂಲಗಳ ಸಮರ್ಥ" ಬಳಕೆಗೆ ಮತ್ತು ವರ್ತುಲಾವೃತ್ತ ಆರ್ಥಿಕ ಪ್ರಗತಿಯೆಡೆಗೆ ಭಾರತ ಉಪಕ್ರಮಗಳ ಪೈಕಿ ರಾಷ್ಟ್ರೀಯ ಸಂಪನ್ಮೂಲ ಸಾಮರ್ಥ್ಯ ನೀತಿ – (2019) ರ ಕರಡು, ಸ್ಟೀಲ್ ಸ್ಕ್ರ್ಯಾಪ್ ಮರುಬಳಕೆ ನೀತಿ, ವಾಹನ ಸ್ಕ್ರ್ಯಾಪ್ ನೀತಿ ಮತ್ತು ಇತ್ತೀಚಿನ ವರ್ತುಲಾವೃತ ಆರ್ಥಿಕತೆಗಾಗಿನ ವಲಯಾತ್ಮಕ ಅಭಿವೃದ್ಧಿ ಕ್ರಿಯಾ ಯೋಜನೆಗಳು ಸೇರಿವೆ.

ಇದರ ಜೊತೆಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ – 2016ರಡಿ ಪ್ಲಾಸ್ಟಿಕ್ ಪ್ಯಾಕೇಜಿಂಗ್‌ಗಳ ಕುರಿತಂತೆ ಇತ್ತೀಚೆಗೆ ಪ್ರಕಟವಾದ ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್) ಮಾರ್ಗಸೂಚಿಗಳು ಪ್ಲಾಸ್ಟಿಕ್ ಪ್ಯಾಕಿಂಗ್ ತ್ಯಾಜ್ಯಗಳ ವರ್ತುಲಾವೃತ್ತಿ ಆರ್ಥಿಕತೆ ಪ್ರೋತ್ಸಾಹಿಸಲು ಮತ್ತು ಈ ವಲಯದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳಲು ಚೌಕಟ್ಟು ನೀಡಿವೆ.

ವರ್ತುಲಾವೃತ್ತ ಆರ್ಥಿಕತೆ ಮತ್ತು ಸಂಪನ್ಮೂಲ ಸಾಮರ್ಥ್ಯತೆಗಾಗಿನ ಜಾಗತಿಕ ಮೈತ್ರಿ (ಜಿಎಸಿಇಆರ್‌ಇ) ಗೆ ಭಾರತ ಕೂಡ ಸದಸ್ಯರಾಷ್ಟ್ರವಾಗಿದೆ. ಈ ಜಾಗತಿಕ ಮೈತ್ರಿಯು ನೈಸರ್ಗಿಕ ಸಂಪನ್ಮೂಲಗಳು ಸುಸ್ಥಿರ ನಿರ್ವಹಣೆಗೆ ಮತ್ತು ನ್ಯಾಯೋಚಿತ ವರ್ತುಲಾವೃತ್ತ ಆರ್ಥಿಕತೆಯೆಡೆಗೆ ಪರಿವರ್ತನೆಗೆ ಪ್ರತಿಪಾದಿಸುವ ಸಮಾನ ಮನಸ್ಕ ಸರ್ಕಾರಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಮೈತ್ರಿ ಇದಾಗಿದೆ. ಐದನೇ ವಿಶ್ವ ಸಂಸ್ಥೆ ಪರಿಸರ ಸಭೆ (ಯುಎನ್‌ಇಎ – 5.1) ರ ಮೊದಲ ಭಾಗದ ನೇಪಥ್ಯದಲ್ಲಿ 2021ರ

ಫೆಬ್ರವರಿಯಲ್ಲಿ ಆರಂಭವಾದ ಜಿಎಸಿಇಆರ್‌ಇಗೆ ಯುಎನ್‌ಇಪಿ (ವಿಶ್ವಸಂಸ್ಥೆ ಪರಿಸರ ಕಾರ್ಯಕ್ರಮಗಳು) ಮತ್ತು ಯುಎನ್‌ಐಡಿಓ (ವಿಶ್ವಸಂಸ್ಥೆ ಕೈಗಾರಿಕಾ ಅಭಿವೃದ್ಧಿ ಯೋಜನೆಗಳು) ಬೆಂಬಲವಿದೆ.

ಸಂಪನ್ಮೂಲ ಸಮರ್ಥತೆ ಮತ್ತು ವರ್ತುಲಾವೃತ್ತ ಆರ್ಥಿಕತೆ ಕೈಗಾರಿಕಾ ಮೈತ್ರಿಯನ್ನು ಚೆನ್ನೈನಲ್ಲಿ 2023ರ ಜುಲೈ 27 ರಂದು ನಡೆದ 4ನೇ ಜಿ20 ಪರಿಸರ ಮತ್ತು ಹವಾಮಾನ ಸುಸ್ಥಿರತೆ ಕಾರ್ಯನಿರ್ವಹಣಾ ಸಮೂಹ (ಇಸಿಎಸ್‌ಡಬ್ಲ್ಯುಜಿ) ಮತ್ತು ಪರಿಸರ ಹಾಗೂ ಹವಾಮಾನ ಸಚಿವರ ಸಭೆ ವೇಳೆ ಭಾರತ ಅನಾವರಣಗೊಳಿಸಿತು. ಈ ಮೈತ್ರಿಯು ಉದ್ದಿಮೆಗಳ ನಡುವಿನ ಮೈತ್ರಿ ವಿಸ್ತರಿಸಲಿದೆ. ಅಲ್ಲದೇ ಅನುಭವ ಹಂಚಿಕೆಗೆ ಅನುವು ಮಾಡಿಕೊಡಲಿದೆ, ವಿವಿಧ ವಲಯಗಳಲ್ಲಿ ಸಾಮರ್ಥ್ಯವೃದ್ಧಿಗೆ ಮತ್ತು ಮೌಲ್ಯ ಸರಪಳಿಗೆ ಹಾಗೂ ವರ್ತುಲಾವೃತ್ತ ಆರ್ಥಿಕ ಪರಿವರ್ತನೆಗಳಿಗೆ ಕ್ರಿಯೆಗಳನ್ನು ಹೆಚ್ಚಿಸುವುದು ಇದರ ಗುರಿಯಾಗಿದೆ.

### ಮಿಷನ್ ಲೈಫ್

ಅಕ್ಟೋಬರ್ 2022 ರಲ್ಲಿ ಜಾರಿಯಾದ ಮಿಷನ್ ಲೈಫ್, ಮೂರು ತತ್ವಗಳನ್ನಾಧರಿಸಿದ ಜಾಗತಿಕ ಚಳವಳಿಯಾಗಿದೆ. ಜವಾಬ್ದಾರಿಯುತ ಬಳಕೆ(ಬೇಡಿಕೆ)ಯತ್ತ ವರ್ತನೆ, ಬದಲಾಗುತ್ತಿರುವ ಅಗತ್ಯಗಳಿಗೆ ತಕ್ಕಂತೆ ಮಾರುಕಟ್ಟೆಗಳು ಕ್ಷಿಪ್ರವಾಗಿ ಪೂರೈಸುವಂತಾಗುವಂತೆ ಮಾಡುವುದು (ಪೂರೈಕೆ) ಮತ್ತು ಈ ಉಪಕ್ರಮಗಳಿಗೆ (ನೀತಿ ನಿರೂಪಣೆಗಳಿಗೆ) ಪೂರಕವಾಗುವ ಸರ್ಕಾರಿ ಮತ್ತು ಕೈಗಾರಿಕಾ ನೀತಿಗಳ ಮೇಲೆ ಪರಿಣಾಮ ಬೀರುವುದು – ಎಂಬ ಮೂರು ತತ್ವಗಳನ್ನು ಇದು ಆಧರಿಸಿದೆ. ಭಾರತ ಸರ್ಕಾರ ತನ್ನ ನೀತಿ ನಿರೂಪಣೆಗಳ ಮೂಲಕ ಸುಸ್ಥಿರ ಜೀವನವಿಧಾನಗಳ ಮಹತ್ವದ ಬಗ್ಗೆ ತಿಳಿಸುತ್ತದೆ ಮತ್ತು ಭಾರತದ ನ್ಯಾಷನಲಿ ಡಿಟರ್ಮಿಂಡ್ ಕಾಂಟ್ರಿಬ್ಯೂಷನ್ (ರಾಷ್ಟ್ರೀಯ ಕಾರ್ಯಸೂಚಿ) ಹವಾಮಾನ ಬದಲಾವಣೆ ವಿರುದ್ಧ ಹೋರಾಟಕ್ಕೆ ಸುಸ್ಥಿರ ಜೀವನಶೈಲಿ ಅಗತ್ಯ ಎಂಬುದನ್ನು ಒತ್ತಿ ಹೇಳುತ್ತದೆ.

ಕಡಿಮೆ ಇಂಗಾಲಾಮ್ಲದತ್ತ ಪರಿವರ್ತನೆಗೆ ಮತ್ತು ವರ್ತುಲಾವೃತ್ತ ವ್ಯಾಪಾರ ಪರಿಹಾರಗಳಿಗೆ ಚುರುಕು ನೀಡುತ್ತಾ ಇಂಧನ ಉತ್ಪಾದನೆಯಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಲು, ಸಾರಿಗೆ ಹೊರಸೂಸುವಿಕೆಗಳನ್ನು ಕಡಿಮೆ ಮಾಡಲು ಮತ್ತು ನೈಸರ್ಗಿಕ ಪರಿಹಾರೋಪಾಯಗಳನ್ನು ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಮತ್ತು ಕಾರ್ಯಾಚರಣೆಗಳಲ್ಲಿ ಸೇರ್ಪಡೆಯಾಗಿಸುವಲ್ಲಿ ಸುಸ್ಥಿರ ಪ್ರವಾಸೋದ್ಯಮ ಕೂಡ ಮಹತ್ವದ ಪಾತ್ರ ನಿರ್ವಹಿಸಬಲ್ಲದಾಗಿದೆ. ಮಿಷನ್ ಲೈಫ್‌ನ ಅಭಿಯಾನಕ್ಕನುಗುಣವಾಗಿನ 'ಟ್ರಾವೆಲ್ ಫಾರ್ ಲೈಫ್' (ಜೀವನ ಪಯಣ), ಎಂಬ ಕಾರ್ಯಕ್ರಮವು ದೊಡ್ಡ ಮಟ್ಟದಲ್ಲಿ ಪ್ರವಾಸಿಗರಲ್ಲಿ ಮತ್ತು ಪ್ರವಾಸೋದ್ಯಮ ಉದ್ಯಮದಲ್ಲಿ ನಡವಳಿಕೆಯಲ್ಲಿ ಬದಲಾವಣೆಯನ್ನು ತರುವ ಗುರಿಯನ್ನು ಹೊಂದಿದೆ. ಈ ಬದಲಾವಣೆಯು ಪರಿಸರ ಸಂರಕ್ಷಣೆ ಮತ್ತು ಹವಾಮಾನ ರಕ್ಷಣೆಯ ಕ್ರಮಗಳ ಮೇಲೆ ಮಹತ್ವದ ಪರಿಣಾಮ ಬೀರಬಲ್ಲದಾಗಿದೆ.

ನವದೆಹಲಿ ನಾಯಕರ ಘೋಷಣೆಯು ಜವಾಬ್ದಾರಿಯುತ ಮತ್ತು ಸುಸ್ಥಿರ ಸ್ಮಾರ್ಟ್ ತಾಣಗಳ ಅಭಿವೃದ್ಧಿಯಲ್ಲಿ 'ಜೀವನಕ್ಕಾಗಿ ಪ್ರಯಾಣ'ದ ಪಾತ್ರವನ್ನು ದಾಖಲಿಸುತ್ತದೆ. ಗೋವಾದಲ್ಲಿ ಜೂನ್ 2023 ರಲ್ಲಿ ನಡೆದ ಜಿ20 ಪ್ರವಾಸೋದ್ಯಮ ಕಾರ್ಯನಿರ್ವಹಣಾ ಸಮೂಹದ ನಾಲ್ಕನೇ ಸಭೆಯಲ್ಲಿ, ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯವು ಯುಎನ್‌ಇಪಿ ಮತ್ತು ವಿಶ್ವ ಸಂಸ್ಥೆ ಪ್ರಪಂಚ ಪರ್ಯಟನೆ ಸಂಸ್ಥೆ (ಯುಎನ್‌ಡಬ್ಲ್ಯುಟಿಒ) ಸಹಯೋಗದೊಂದಿಗೆ, "ಪ್ರವಾಸೋದ್ಯಮ–ದಲ್ಲಿ ಪ್ಲಾಸ್ಟಿಕ್‌ಗಳ ವರ್ತುಲಾವೃತ್ತ ಆರ್ಥಿಕತೆಯೆಡೆಗೆ – ಜಾಗತಿಕ ಪ್ರವಾಸೋದ್ಯಮ ಪ್ಲಾಸ್ಟಿಕ್ ಉಪಕ್ರಮ" ಎಂಬ ವಿಷಯಾಧರಿತ ಕಾರ್ಯಕ್ರಮ ರೂಪಿಸಿತ್ತು. ಜಾಗತಿಕ ಪ್ರವಾಸೋದ್ಯಮ ಪ್ಲಾಸ್ಟಿಕ್ಸ್ ಉಪಕ್ರಮ (ಜಿಟಿಪಿಐ) ದೊಂದಿಗೆ ಭಾರತದ ಪಂಜಾಬ್ ರಾಜ್ಯ, ಸುಸ್ಥಿರ ಪ್ರವಾಸೋದ್ಯಮಕ್ಕಾಗಿನ ಕೇಂದ್ರ ನೋಡೆಲ್ ಏಜೆನ್ಸಿ ಮತ್ತು ಭಾರತದ ಜವಾಬ್ದಾರಿಯುತ ಪ್ರವಾಸೋದ್ಯಮ ಸಂಘಗಳು ಸೇರ್ಪಡೆಯಾಗಲು ಈ ಕಾರ್ಯಕ್ರಮ ಸಾಕ್ಷಿಯಾಯಿತು. ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣಕ್ಕೆ, ವಾಸ್ತವದಲ್ಲಿ ಕಾರ್ಯರೂಪಕ್ಕೆ ತರಬಹುದಾದ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಪ್ರವಾಸೋದ್ಯಮ ಉದ್ಯಮಗಳು ಮತ್ತು ತಾಣಗಳ ಸಂಯೋಗ ಹಾಗೂ ಪ್ಲಾಸ್ಟಿಕ್‌ಗಾಗಿನ



ವರ್ತುಲಾವೃತ್ತ ಆರ್ಥಿಕತೆಯೆಡೆಗೆ ಸಮಾನ ಮುನ್ನೋಟದೊಂದಿಗೆ ಪ್ರವಾಸೋದ್ಯಮ ವಲಯದ ಏಕೀಕರಣದ ಗುರಿಯನ್ನು ಜಿಟಿಪಿಐ ಹೊಂದಿದೆ.

ವರ್ತುಲಾವೃತ್ತ ಮತ್ತು ಹಸಿರು ಆರ್ಥಿಕ ಪ್ರಗತಿಯತ್ತ ಬದಲಾವಣೆಗೆ ಪೂರಕವಾಗಬಲ್ಲ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗೆ ಪೂರಕವಾಗಿರುವ ಕ್ರಮಗಳನ್ನು ಭಾರತ ಸರ್ಕಾರ ಕೈಗೊಂಡಿರುವುದು ಹೃದಯಸ್ಪರ್ಶಿಯಾಗಿದೆ.

ಸುಸ್ಥಿರ ಅಭಿವೃದ್ಧಿ ಗುರಿ 12ರಡಿಯಲ್ಲಿನ ಒಟ್ಟು 12 ಸೂಚಕಗಳ ಪೈಕಿ 8 ರ ಜವಾಬ್ದಾರಿ ಹೊಂದಿರುವ (ಕಸ್ಟೋಡಿಯನ್ ಆಗಿರುವ) ಯುಎನ್‌ಇಪಿ ಏಜೆನ್ಸಿಯು ಸುಸ್ಥಿರ ಬಳಕೆ ಮತ್ತು ಉತ್ಪಾದನೆ (ಎಸ್‌ಸಿಪಿ) ವಿಧಾನಗಳತ್ತ ಪರಿವರ್ತನೆ ಉತ್ತೇಜಿಸುವ ಮತ್ತು ಸಾಧ್ಯವಾಗಿಸುವ ಗುರಿ ಹೊಂದಿದೆ.

ವರ್ತುಲಾವೃತ್ತದೆಡೆಗೆ ಜಾಗತಿಕ ಕ್ರಿಯೆಗೆ ಹಾಗೂ ಸುಸ್ಥಿರ ಬಳಕೆ ಮತ್ತು ಉತ್ಪಾದನೆಗೆ ಚುರುಕು ನೀಡಲು ಯುಎನ್‌ಇಪಿಯು ಜೀವನಚಕ್ರ ಉಪಕ್ರಮ, ಸುಸ್ಥಿರ ಅಭಿವೃದ್ಧಿ ಗುರಿಗಳಿಗಾಗಿ ಜಾಗತಿಕ ಅವಕಾಶಗಳು (ಜಿಓ4ಎಸ್‌ಡಿಜಿಗಳು), ಅಂತಾರಾಷ್ಟ್ರೀಯ ಸಂಪನ್ಮೂಲ ಸಮಿತಿ (ಐಆರ್‌ಪಿ), ಸುಸ್ಥಿರ ಬಳಕೆ ಮತ್ತು ಉತ್ಪಾದನೆಗಾಗಿನ ಕಾರ್ಯಕ್ರಮಗಳ 10 ವರ್ಷದ ಚೌಕಟ್ಟು ಹಾಗೂ ಸುಸ್ಥಿರ ಬಳಕೆ ಮತ್ತು ಉತ್ಪಾದನಾ ಜನಪ್ರಿಯತಾಣಗಳ ವಿಶ್ಲೇಷಣಾ ಸಾಧನ (ಎಸ್‌ಸಿಪಿ–ಎಚ್‌ಎಟಿ) ಮೊದಲಾದ ಟೂಲ್, ವೇದಿಕೆ ಮತ್ತು ಚೌಕಟ್ಟುಗಳನ್ನು ನೀಡಿದೆ.

ಪಾಲುದಾರ ಸಂಘಗಳೊಂದಿಗೆ ಯುಎನ್‌ಇಪಿಯು ಜೀವನಶೈಲಿ ಕುರಿತಾದ ಇತ್ತೀಚಿನ ವಿಜ್ಞಾನ ಆಧರಿತ ಸಾಕ್ಷಿಗಳನ್ನು ಒದಗಿಸುವತ್ತ ಕಾರ್ಯನಿರ್ವಹಿಸುತ್ತಿದೆ. 2021 ರಲ್ಲಿ ಪ್ರಕಟವಾದ "1.5 ಡಿಗ್ರಿ ಜೀನವಶೈಲಿ:

(24ನೇ ಪುಟಕ್ಕೆ)

# ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಅಭಿವೃದ್ಧಿ ಒಪ್ಪಂದ

* ಲೀನಾ ನಂದನ್

**ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಅಭಿವೃದ್ಧಿ ಒಪ್ಪಂದವು ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾದ ಕ್ರಮಗಳನ್ನು ಯಶಸ್ವಿಯಾಗಿ ಸಂಯೋಜಿತಗೊಳಿಸಿದೆ. ಇದು ಜಗತ್ತಿನಲ್ಲಿಂದು ಮುಖ್ಯವೆಂದು ಹೇಳಲಾಗುವ ಎಲ್ಲ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಜಾಗತಿಕ ದಕ್ಷಿಣದ ಕಾಳಜಿಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯತಂತ್ರವನ್ನು ರೂಪಿಸುವಲ್ಲಿ ಭಾರತವು ಯಶಸ್ವಿಯಾಗಿದೆ.**

ಭವಿಷ್ಯದ ಪೀಳಿಗೆಯ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ವರ್ತಮಾನದ ಹಾಗೂ ಮುಂದೊದಗಬಹುದಾದ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ಆರ್ಥಿಕ, ಪರಿಸರ ಮತ್ತು ಸಾಮಾಜಿಕ ಅಭಿವೃದ್ಧಿ ಪಥದಲ್ಲಿ ಸಮತೋಲನವನ್ನು ಸಾಧಿಸುವುದು ಸುಸ್ಥಿರ ಅಭಿವೃದ್ಧಿಯ ಮೂಲ ತತ್ವವಾಗಿದೆ. ಹವಾಮಾನ ಬದಲಾವಣೆಯ ವಿವಿಧ ಲಕ್ಷಣಗಳು ದೇಶಗಳು ತಮ್ಮ ನೀತಿಗಳು ಮತ್ತು ಕ್ರಮಗಳನ್ನು ಮರುಪರಿಶೀಲಿಸುವ ಅಗತ್ಯವನ್ನು ಒತ್ತಿಹೇಳುತ್ತವೆ. ಪ್ರತಿ ವಲಯದಲ್ಲಿ ಸುಸ್ಥಿರತೆಗೆ ಒತ್ತು ನೀಡಬೇಕೆನ್ನುವುದನ್ನು ಖಚಿತಪಡಿಸುತ್ತದೆ. ಆರ್ಥಿಕತೆ ಮತ್ತು ಪರಿಸರ ಎರಡನ್ನೂ ಒಟ್ಟಿಗೆ ಇಟ್ಟುಕೊಂಡು ಅಭಿವೃದ್ಧಿಯ ಹಾದಿಯಲ್ಲಿ ನಡೆಯುವ ಮಾದರಿಗೆ ಭಾರತವು ಉತ್ತಮ ಉದಾಹರಣೆಯಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಭಾರತವು ಜಿ20 ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಾಗ, ಹವಾಮಾನ ಮತ್ತು ಪರಿಸರದ ಸುಸ್ಥಿರತೆಯನ್ನು ಪ್ರಮುಖ ವಿಷಯಗಳಾಗಿ ಗುರುತಿಸಲಾಯಿತು. ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಜೀವನೋಪಾಯಗಳ ಅವಕಾಶಗಳನ್ನು ಹೆಚ್ಚಿಸಲು ವಿವಿಧ ವಲಯಗಳನ್ನು ಒಟ್ಟಾಗಿ ಅಳವಡಿಸಿಕೊಳ್ಳುವ ಮತ್ತು ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವ ತುರ್ತು ಅಗತ್ಯವನ್ನು ಜಿ20 ಒತ್ತಿ ಹೇಳಿತು. ಜಿ20 ದೇಶಗಳು ಒಟ್ಟಾರೆ ವಿಶ್ವದ ಜನಸಂಖ್ಯೆಯ ಮೂರನೇ ಎರಡರಷ್ಟನ್ನು ಪ್ರತಿನಿಧಿಸುತ್ತಿದ್ದು, ಜಾಗತಿಕ ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) 85% ರಷ್ಟು ಮತ್ತು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ 75%ರಷ್ಟು ಕೊಡುಗೆ ನೀಡುತ್ತದೆ. ಪರಿಸರ ಸಮಸ್ಯೆಗಳು, ಕಾಲಾನಂತರದಲ್ಲಿ, ಪ್ರಮುಖ ಜಾಗತಿಕ ಕಾಳಜಿಗಳಾಗಿ ಮಾರ್ಪಟ್ಟಿವೆ. ಹಸಿರು ಮತ್ತು ಸ್ಥಿತಿಸ್ಥಾಪಕತ್ವವುಳ್ಳ ಅಭಿವೃದ್ಧಿಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಲು ದೇಶಗಳನ್ನು ಪ್ರೇರೇಪಿಸುತ್ತದೆ. ಈ ಪೀಠಿಕೆಯೊಂದಿಗೆ ಜಿ 20 ನಾಯಕರು ಹಸಿರು ಅಭಿವೃದ್ಧಿ ಒಪ್ಪಂದವನ್ನು ಅಳವಡಿಸಿಕೊಂಡರು. ಇದು ಅರಣ್ಯಗಳು, ಪರಿಸರ ವ್ಯವಸ್ಥೆಗಳ ಸಂರಕ್ಷಣೆ, ಜಾಗತಿಕ ಭೂ ಮರುಸ್ಥಾಪನೆಯ ಗುರಿಗಳು, ಸಾಗರದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ತಡೆಗಟ್ಟುವಂತಹ ನಿರ್ಣಾಯಕ ವಿಷಯಗಳನ್ನು ಪರಿಹರಿಸುವಲ್ಲಿ ಎಲ್ಲರೂ ಒಟ್ಟಾಗಿ ಕ್ರಮಗಳನ್ನು ಕೈಗೊಳ್ಳುವುದನ್ನು ಒಳಗೊಂಡಿದೆ. ಸಹಭಾಗಿತ್ವಗಳು ಸುಸ್ಥಿರ ಪ್ರಗತಿಗೆ ಮುಖ್ಯ, ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟವು ಭಾರತದ ಜಿ20 ಅಧ್ಯಕ್ಷತೆಯನ್ನು ನಿರೂಪಿಸುವ ರಚನಾತ್ಮಕ ಸಹಯೋಗಕ್ಕೆ ಉತ್ತಮ ಉದಾಹರಣೆಯಾಗಿದೆ.

ಮಿಷನ್ LiFE - Lifestyle for Environment ಎನ್ನುವ ಪ್ರಧಾನ ಮಂತ್ರಿಯವರ ಹೇಳಿಕೆಯು ಜಿ20 ದೇಶಗಳಲ್ಲಿ ದೊಡ್ಡಮಟ್ಟದಲ್ಲಿ ಸ್ಪಂದನೆಯನ್ನು ಪಡೆದಿದೆ. ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಬಳಸಬೇಕೆನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದು, ಸುಸ್ಥಿರ ಜೀವನ ಶೈಲಿಗಾಗಿ ಉನ್ನತ ಮಟ್ಟದ ತತ್ವಗಳನ್ನು ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ. ವೈಯಕ್ತಿಕ ಆಯ್ಕೆಗಳು ಮತ್ತು ನಡವಳಿಕೆಗಳಲ್ಲಿ ಸುಸ್ಥಿರತೆಯ ಮುಖ್ಯಪರಿಕಲ್ಪನೆಗಳನ್ನು ಒಳಗೊಳ್ಳುವುದು ಮತ್ತು ಮೌಲ್ಯಸರಪಳಿಯಲ್ಲಿ ಅವುಗಳನ್ನು ಸಾರ್ವತ್ರಿಕವಾಗಿ ಸಾಂಸ್ಥಿಕಗೊಳಿಸುವುದನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಪರಿಸರ ನಾಶದ ಹೆಚ್ಚಳವನ್ನು ತಡೆಯಲು, ಪ್ರಾಥಮಿಕ ಸಂಪನ್ಮೂಲಗಳ ಬಳಕೆ ಸೇರಿದಂತೆ ಸುಸ್ಥಿರ ಬಳಕೆ ಹಾಗೂ ಉತ್ಪಾದನೆಯನ್ನು ಹೆಚ್ಚಿಸಲು, ಜಿ 20 ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ವರ್ತುಲ ಆರ್ಥಿಕತೆ, ಉತ್ಪಾದಕರ ಹೆಚ್ಚಿದ ಜವಾಬ್ದಾರಿ, ಪರಿಣಾಮಕಾರಿ ಸಂಪನ್ಮೂಲಗಳು ವಹಿಸುವ ಮಹತ್ವದ ಪಾತ್ರದ ಮೇಲೆ ಗಮನವನ್ನು




* ಕಾರ್ಯದರ್ಶಿ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ. ಇಮೇಲ್: secy-moef@nic.in




ಕೇಂದ್ರೀಕರಿಸಿದೆ. 'ನುಡಿದಂತೆ ನಡೆಯಲು' ಮಾಡಲು, ಭಾರತದ ಅಧ್ಯಕ್ಷತೆಯು ಸಂಪನ್ಮೂಲ ದಕ್ಷತೆ ಮತ್ತು ವರ್ತುಲ ಆರ್ಥಿಕ ಔದ್ಯಮಿಕ ಮೈತ್ರಿ ಕೂಟ (ಆರ್‌ಇಸಿಇಐಸಿ) ಪ್ರಾರಂಭಿಸಿತು. ಈ ಉಪಕ್ರಮವನ್ನು ಜಿ20 ನಾಯಕರು ಸಹ ಒಪ್ಪಿಕೊಂಡರು. ವರ್ತುಲ ಆರ್ಥಿಕತೆಯ ಅತ್ಯಂತ ಮಹತ್ವದ ಪ್ರಯೋಜನವೆಂದರೆ ತ್ಯಾಜ್ಯ ಉತ್ಪಾದನೆಯು ಕಡಿಮೆಯಾಗುವುದು. ಉತ್ಪನ್ನಗಳು ಮತ್ತು ವಸ್ತುಗಳನ್ನು ಮರುಬಳಕೆ ಮಾಡುವುದು, ನವೀಕರಿಸುವುದು ಮತ್ತು ಪುನರ್‌ಬಳಕೆ ಮಾಡುವುದರಿಂದ ಭೂಮಿಯಲ್ಲಿ ಹೂಳುವ ಅಥವಾ ದಹನಕಾರಕಗಳಲ್ಲಿ ಸುಡುವ ತ್ಯಾಜ್ಯದ ಪ್ರಮಾಣ ಕಡಿಮೆಯಾಗುತ್ತದೆ. ತ್ಯಾಜ್ಯ ವಿಲೇವಾರಿಯು ಪರಿಸರದ ಮೇಲುಂಟು ಮಾಡುವ ಪರಿಣಾಮವನ್ನು ಕಡಿಮೆ ಮಾಡುತ್ತದೆ. ವರ್ತುಲ ಆರ್ಥಿಕ ಪದ್ಧತಿಗಳು ಉತ್ಪನ್ನಗಳು ಮತ್ತು ವಸ್ತುಗಳ ಜೀವಿತಾವಧಿಯನ್ನು ವಿಸ್ತರಿಸುವುದರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ, ಹೀಗಾಗಿ ಖನಿಜಗಳು, ಲೋಹಗಳು ಮತ್ತು ಪಳೆಯುಳಿಕೆ ಇಂಧನಗಳಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುತ್ತದೆ. ಇದು ಸಂಪನ್ಮೂಲ ಹೊರತೆಗೆಯುವಿಕೆಯ ಅಗತ್ಯವನ್ನು ಕಡಿಮೆ ಮಾಡುವ ಮೂಲಕ ಅದರಿಂದಾಗುವ ಪರಿಸರ ಹಾನಿಯನ್ನು ತಗ್ಗಿಸಲು ಸಹಾಯ ಮಾಡುತ್ತದೆ. ವರ್ತುಲ ಆರ್ಥಿಕತೆಯು ದುರಸ್ತಿ, ಮರುಉತ್ಪಾದನೆ, ಮರುಬಳಕೆ ಮತ್ತು ತ್ಯಾಜ್ಯ ನಿರ್ವಹಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

ಹಸಿರು ಅಭಿವೃದ್ಧಿ ಒಪ್ಪಂದವು ಪರಿಸರ ವ್ಯವಸ್ಥೆಯ ಪುನಃಸ್ಥಾಪನೆಗೆ ಹೆಚ್ಚಿನ ಒತ್ತು ನೀಡಿದೆ. ನಾಶವಾದ ಪರಿಸರ ವ್ಯವಸ್ಥೆಯನ್ನು 2030ರ ವೇಳೆಗೆ ಕನಿಷ್ಠ 30%ರಷ್ಟು ಮರುಸ್ಥಾಪಿಸಲು ಮತ್ತು ಭೂಮಿಯ ಅವನತಿಯನ್ನು ತಡೆಗಟ್ಟುವ ಪ್ರಯತ್ನಗಳನ್ನು ಮಾಡುವುದಕ್ಕೆ ಬದ್ಧವಾಗಿರುವ ಪ್ರಯತ್ನಗಳನ್ನು ಹೆಚ್ಚಿಸುವುದಕ್ಕೆ ಜಿ20 ಸಮ್ಮತಿಸಿದ್ದು ಪರಿಸರದ ಅವನತಿಯ ಸವಾಲನ್ನು ಎದುರಿಸಲು ಸಿದ್ಧವಾಗಿರುವುದನ್ನು ಸೂಚಿಸುತ್ತದೆ. ಕಾಡ್ಗಿಚ್ಚುಗಳ ತಡೆಗಟ್ಟುವಿಕೆ, ತಗ್ಗಿಸುವಿಕೆ ಮತ್ತು ಗಣಿಗಾರಿಕೆಯಿಂದ ನಾಶವಾದ ಜಮೀನುಗಳ ಪರಿಹಾರಕ್ಕಾಗಿ ಬದ್ಧವಾಗಿರುವುದು ಈ ಘೋಷಣೆಯ ಪ್ರಮುಖ ಅಂಶವಾಗಿದೆ. ಎಲ್ಲಾ ಸದಸ್ಯರು ಸ್ವಯಂಪ್ರೇರಿತರಾಗಿ 2040ರ ವೇಳೆಗೆ ಭೂ ಅವನತಿಯನ್ನು 50%ರಷ್ಟು ಕಡಿಮೆ ಮಾಡುವ ಜಿ20ರ ಮಹತ್ವಾಕಾಂಕ್ಷೆಯನ್ನು ಬೆಂಬಲಿಸಿದರು. ಈ ಸಂದರ್ಭದಲ್ಲಿ ಗಾಂಧಿನಗರ ಅನುಷ್ಠಾನ ಮಾರ್ಗಸೂಚಿ ಮತ್ತು ಗಾಂಧಿನಗರ ಮಾಹಿತಿ ವೇದಿಕೆಯನ್ನು ಆರಂಭಿಸಲಾಯಿತು. ಸಾಗರ–ಆಧರಿತ ಪರಿಸರ ವ್ಯವಸ್ಥೆಗಳ ರಕ್ಷಣೆ ಮತ್ತು ನೀಲಿ ಆರ್ಥಿಕತೆಯ ಪ್ರದೇಶವನ್ನು ಹೆಚ್ಚಿನ ಸಾಮರ್ಥ್ಯವಿರುವ ಕ್ಷೇತ್ರವೆಂದು ಗುರುತಿಸುವುದಕ್ಕೂ ಆದ್ಯತೆ ನೀಡಲಾಯಿತು. ಜಿ20 ಸುಸ್ಥಿರ ಮತ್ತು ಸ್ಥಿತಿಸ್ಥಾಪಕತ್ವವುಳ್ಳ ನೀಲಿ/ಸಾಗರ–ಆಧರಿತ ಆರ್ಥಿಕತೆಗಾಗಿ ಉನ್ನತ ಮಟ್ಟದ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಸಮುದ್ರಗಳು ಮತ್ತು ಸಾಗರಗಳ ಸಾಮರ್ಥ್ಯವನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳುವ ಕುರಿತು ನಿರ್ಣಯ ಕೈಗೊಳ್ಳಲಾಯಿತು. ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಅಭಿವೃದ್ಧಿ ಒಪ್ಪಂದವು ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾದ ಕ್ರಮಗಳನ್ನು ಯಶಸ್ವಿಯಾಗಿ ಸಂಯೋಜಿತಗೊಳಿಸಿದೆ. ಒಪ್ಪಂದವು ಇತ್ತೀಚಿನ ವಿಜ್ಞಾನಕ್ಕೆ ಮನ್ನಣೆ ನೀಡಿದ್ದು, ಸ್ವಯಂಪ್ರೇರಿತವಾಗಿ ಹಾಗೂ ಪರಸ್ಪರ ಒಪ್ಪಿಗೆಯ ನಿಯಮಗಳನ್ನಾಧರಿಸಿ ತಂತ್ರಜ್ಞಾನ ಅಭಿವೃದ್ಧಿ, ವರ್ಗಾವಣೆ ಮತ್ತು ಸಾಮರ್ಥ್ಯವೃದ್ಧಿ ಮತ್ತು ಹಣಕಾಸು ಇವೆಲ್ಲವುಗಳ ಮೇಲೆ ದೀರ್ಘಾವಧಿಯಲ್ಲಿ ಅರ್ಥಪೂರ್ಣ ಪ್ರಭಾವವನ್ನು ಬೀರಿದೆ.

ಹವಾಮಾನ ಬದಲಾವಣೆ ಮತ್ತು ಪರಿವರ್ತನೆಯ ಮಾರ್ಗಗಳಿಂದ ಉಂಟಾಗುವ ಸ್ಥೂಲ ಆರ್ಥಿಕ ಅಪಾಯಗಳ ಕುರಿತು ಜಿ20 ವರದಿಯೊಂದಿಗೆ ಒಪ್ಪಂದವು ಸ್ಥೂಲ ಆರ್ಥಿಕ ಅಪಾಯಗಳು ಮತ್ತು ಹವಾಮಾನ ಆರ್ಥಿಕ ಅಂಶಗಳನ್ನು ಆಳವಾಗಿ ಪರಿಶೀಲಿಸುತ್ತಿದೆ. ಎಸ್‌ಡಿಜಿಗಳನ್ನು ಸಾಧಿಸಲು ಮತ್ತು ಅಳವಡಿಕೆ ಕ್ರಿಯೆಯನ್ನು ಅನುಷ್ಠಾನಗೊಳಿಸಲು ಹಣಕಾಸು ಅತ್ಯಗತ್ಯ ಎನ್ನುವುದನ್ನು ಗುರುತಿಸಿದ್ದು ಜಿ20ರ ಗಮನಾರ್ಹ ಸಾಧನೆಯಾಗಿದೆ. ಹಣಕಾಸು, ಖಾಸಗಿ ಹಣಕಾಸು ಮತ್ತು ಅಪಾಯ ಹಂಚಿಕೆ ಸೌಲಭ್ಯಗಳು ಹಾಗೂ ಎಂಡಿಬಿ ಗಳು ಹವಾಮಾನ ಹಣಕಾಸನ್ನು ಹೆಚ್ಚಿಸುವಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಪ್ರತಿ




ವರ್ಷಕ್ಕೆ 100 ಶತಕೋಟಿ ಡಾಲರ್‌ಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಒದಗಿಸುವುದಾಗಿ ತಿಳಿಸಿದ್ದು, ಉತ್ತಮ ಭವಿಷ್ಯದ ದೃಷ್ಟಿಯಿಂದ ಈ ವರ್ಷ ಇದನ್ನು ಮೊದಲ ಬಾರಿಗೆ ಪೂರೈಸಲಾಗುವುದು ಎನ್ನುವ ನಿರೀಕ್ಷೆಯಿದೆ. ಬಹು–ವರ್ಷದ ಜಿ20 ತಾಂತ್ರಿಕ ನೆರವು ಕ್ರಿಯಾ ಯೋಜನೆ (ಟಿಎಎಪಿ) ಮತ್ತು ಹವಾಮಾನ ಹೂಡಿಕೆಗಳಿಗೆ ಡೇಟಾ–ಸಂಬಂಧಿತ ಅಡೆತಡೆಗಳನ್ನು ನಿವಾರಿಸಲು ಸ್ವಯಂಪ್ರೇರಿತವಾಗಿ ಮಾಡಿದ ಶಿಫಾರಸುಗಳಿಗೆ ಜಿ20ಯಲ್ಲಿ ಅನುಮೋದನೆ ದೊರಕಿತು. ಇದು ಜಿ20ಯ ಪ್ರಮುಖ ಮೈಲಿಗಲ್ಲು. ಹವಾಮಾನ ವೈಪರೀತ್ಯಗಳಿಂದ ತಳಮಟ್ಟದ ಜೀವನ ಹೊಡೆತಗಳನ್ನು ಎದುರಿಸಬೇಕಾಗುತ್ತದೆ. ಹಳ್ಳಿಗಳು, ಪಟ್ಟಣಗಳಲ್ಲಿ ಬದುಕುವ ಸಮುದಾಯಗಳು ಈ ರೀತಿಯ ಹವಾಮಾನ ಅಪಾಯಗಳಿಗೆ ಸಿಲುಕಿಕೊಳ್ಳುತ್ತವೆ. ಒಪ್ಪಂದವು ಅಪಾಯ ಕಡಿಮೆಗೊಳಿಸುವ (ಡಿಆರ್‌ಆರ್) ಕಾರ್ಯ ಪಡೆಯ ಸಾಂಸ್ಥಿಕರಣದ ಮೂಲಕ ವಿಪತ್ತುಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವ ಪ್ರಯತ್ನಗಳನ್ನು ಸುವ್ಯವಸ್ಥಿತಗೊಳಿಸುವ ಗುರಿಯನ್ನು ಹೊಂದಿದೆ. ದೇಶೀಯ ಮತ್ತು ಸ್ಥಳೀಯ ಸಾಮರ್ಥ್ಯಗಳು, ನವೀನ ಹಣಕಾಸು ಸಾಧನಗಳು, ಖಾಸಗಿ ವಲಯದ ಹೂಡಿಕೆ ಮತ್ತು ಜ್ಞಾನ ಹಂಚಿಕೆಯನ್ನು ಬಲಪಡಿಸುವ ಮೂಲಕ ಮುನ್ಸೂಚನೆ ಮತ್ತು ಮುಂಜಾಗ್ರತಾ ಕ್ರಮಗಳ ಪ್ರಗತಿಯನ್ನು ಚುರುಕುಗೊಳಿಸುವುದಕ್ಕೆ ಒಪ್ಪಂದವು ಕರೆ ನೀಡಿದೆ. ಇಂದಿರುವ ನಗರಗಳನ್ನು ಭವಿಷ್ಯಕ್ಕೆ ತಕ್ಕಂತೆ ಸಿದ್ಧಗೊಳಿಸಲು ಮೂಲಸೌಕರ್ಯಗಳನ್ನು ರೂಪಿಸುವುದು ಮುಖ್ಯ. ಅದಕ್ಕೆ ತಕ್ಕಂತೆ ಹಣಕಾಸನ್ನು ಕ್ರೋಢೀಕರಿಸಲು ಯೋಜನೆಯನ್ನು ರೂಪಿಸಬೇಕಿದೆ.

ಹಸಿರು ಅಭಿವೃದ್ಧಿ ಒಪ್ಪಂದವು ಜಗತ್ತಿನಲ್ಲಿಂದು ಮುಖ್ಯವೆಂದು ಹೇಳಲಾಗುವ ಎಲ್ಲ ಸಮಸ್ಯೆ ಪರಿಹಾರಗಳನ್ನು ಒಳಗೊಂಡಿದೆ. ಜಾಗತಿಕ ದಕ್ಷಿಣದ ಕಾಳಜಿಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯತಂತ್ರವನ್ನು ರೂಪಿಸುವಲ್ಲಿ ಭಾರತವು ಯಶಸ್ವಿಯಾಗಿದೆ. ಹಸಿರು ಅಭಿವೃದ್ಧಿ ಒಪ್ಪಂದದ ಅನುಷ್ಠಾನವು ಎಸ್‌ಡಿಜಿ ಗುರಿಗಳನ್ನು ಸಾಧಿಸಲು ಜಿ20 ಸದಸ್ಯ ರಾಷ್ಟ್ರಗಳ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಎಲ್ಲ ದೇಶಗಳು ಪ್ರಮುಖ ಕ್ಷೇತ್ರಗಳಲ್ಲಿ ಒಟ್ಟಾಗುವ ಅಗತ್ಯವನ್ನು ಒತ್ತಿಹೇಳುವ ಮೂಲಕ ಭಾರತದ ಅಧ್ಯಕ್ಷತೆಯಡಿಯಲ್ಲಿ ಜಿ20ರ ನಾಯಕರು ಸ್ಪಷ್ಟ ಮಾರ್ಗಸೂಚಿಯನ್ನು ಘೋಷಿಸಿದ್ದಾರೆ.

## ವರ್ತುಲ ವಿಶ್ವ ಆರ್ಥಿಕತೆ ವಿನ್ಯಾಸದೆಡೆಗೆ

(21ನೇ ಪುಟದಿಂದ)

ಎಲ್ಲರಿಗೂ ಬಳಕೆಗೆ ಅವಕಾಶದತ್ತ" ಕುರಿತಾದ ಯುಎನ್‌ಇಪಿಯ ವರದಿಯು ಜಿ20 ರಾಷ್ಟ್ರಗಳ ಪೈಕಿ 10 ರಲ್ಲಿ ಜೀವನಶೈಲಿಯಿಂದಾಗಿ ಇಂಗಾಲಾಮ್ಲ ಹೊರಸೂಸುವಿಕೆ ಪರೀಕ್ಷಿಸಿ, ಇವುಗಳನ್ನು ಕಡಿಮೆ ಮಾಡುವುದು ಹೇಗೆ ಎಂಬ ಬಗ್ಗೆ ನೀತಿನಿರೂಪಣೆಗಳ ಶಿಫಾರಸ್ಸು ನೀಡಿದೆ.

ಅದು ಭಾರತದಲ್ಲಿ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ರಾಷ್ಟ್ರ ಮಟ್ಟದಲ್ಲಿ ಮತ್ತು ಉಪ ಮಟ್ಟಗಳಲ್ಲಿ ತಾಂತ್ರಿಕ ಸಹಕಾರ ಒದಗಿಸಲಿದೆ. ವರ್ತುಲಾವೃತ್ತವನ್ನು ಮುಖ್ಯವಾಹಿನಿಗೆ ತರಲು ಮತ್ತು ವಿವಿಧ ವಲಯಗಳಲ್ಲಿ (ಇಂಧನ, ಜವಳಿ, ಫ್ಯಾಷನ್, ಪ್ಲಾಸ್ಟಿಕ್ ಮತ್ತು ಪ್ರವಾಸೋದ್ಯಮ ಇತ್ಯಾದಿ) ಸಂಪನ್ಮೂಲದ ಸಮರ್ಥ ಬಳಕೆಗೆ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನಗಳಿಗೆ ತಾಂತ್ರಿಕ ನೆರವು ನೀಡುವ ಜೊತೆಗೆ ನೀತಿನಿರೂಪಣೆಗಳ ಮೂಲಕ ಹಸಿರು ಆರ್ಥಿಕ ಪ್ರಗತಿಯತ್ತ ಪರಿವರ್ತನೆ ಸಾಧ್ಯವಾಗಿಸುವ ಉತ್ತಮ ಅಭ್ಯಾಸಗಳ ಬಗ್ಗೆ ಜ್ಞಾನಹಂಚಿಕೆಯನ್ನು ಮಾಡಿಕೊಳ್ಳಲಿದೆ. ಭವಿಷ್ಯದ ಪೀಳಿಗೆಗಾಗಿ ರಾಜಿ ಇಲ್ಲದೇ ರಾಷ್ಟ್ರಗಳು ಮತ್ತು ಜನರು ತಮ್ಮ ಜೀವನಮಟ್ಟ ಸುಧಾರಿಸಿಕೊಳ್ಳುವುದನ್ನು ಸಾಧ್ಯವಾಗಿಸಲು ಅತ್ಯಾಧುನಿಕ ವಿಜ್ಞಾನ, ಸಹಕಾರ ಮತ್ತು ಬೆಂಬಲಗಳ ಮೂಲಕ ಪ್ರೋತ್ಸಾಹ ಮತ್ತು ಮಾಹಿತಿ ನೀಡುವುದನ್ನು ನಾವು ಮುಂದುವರಿಸಲಿದ್ದೇವೆ.

# ‘ಮೇರಾ ಯುವ ಭಾರತ್’ಗೆ ಚಾಲನೆ, ‘ನನ್ನ ಮಣ್ಣು ನನ್ನ ದೇಶ’ಕ್ಕೆ ಗೌರವ



ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 31.10.2023 ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ಮೇರಿ ಮಾಟಿ ಮೇರಾ ದೇಶ್ (ನನ್ನ ಮಣ್ಣು, ನನ್ನ ದೇಶ) ಅಭಿಯಾನದ ಅಮೃತ ಕಲಶ ಯಾತ್ರೆಯ ಮುಕ್ತಾಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಮಾರೋಪ ಸಮಾರಂಭವೂ ಆಗಿತ್ತು. ಕಾರ್ಯಕ್ರಮದ ಸಂದರ್ಭದಲ್ಲಿ, ಪ್ರಧಾನಮಂತ್ರಿಯವರು ಅಮೃತ ವಾಟಿಕಾ ಮತ್ತು ಅಮೃತ ಮಹೋತ್ಸವ ಸ್ಮಾರಕಕ್ಕೆ ಶಿಲಾನ್ಯಾಸವನ್ನು ನೆರವೇರಿಸಿದರು ಮತ್ತು ದೇಶದ ಯುವಜನರಿಗಾಗಿ ಮೇರಾ ಯುವ ಭಾರತ್ - MY Bharat ಪ್ಲಾಟ್ ಫಾರ್ಮ್‌ಗೆ ಚಾಲನೆ ನೀಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಯವರು, ಮಹಾತ್ಮ ಗಾಂಧೀಜಿಯವರ ದಂಡಿ ಯಾತ್ರೆಯಿಂದ ಪ್ರೇರಿತವಾದ ಸ್ವಾತಂತ್ರ್ಯದ ಅಮೃತ ಮಹೋತ್ಸವ ದೀಕ್ಷೆಯು ಮಾರ್ಚ್ 12, 2021 ರಂದು ಆರಂಭವಾಗಿದ್ದನ್ನು ಸ್ಮರಿಸಿಕೊಂಡು, ಸರ್ದಾರ್ ಪಟೇಲ್ ಅವರ ಜನ್ಮದಿನವಾದ ಅಕ್ಟೋಬರ್ 31, 2023 ರಂದು ಅದರ ಸಮಾರೋಪ ನಡೆಯುತ್ತಿದೆ ಎಂದು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ 2 ವರ್ಷಗಳ ಆಚರಣೆಗಳು ನನ್ನ ಮಣ್ಣು ನನ್ನ ದೇಶ’ಅಭಿಯಾನದೊಂದಿಗೆ ಮುಕ್ತಾಯಗೊಂಡಿವೆ ಎಂದು ಹೇಳಿದರು.

ನಾವು ಇಂದು ಭವ್ಯವಾದ ಆಚರಣೆಗೆ ವಿದಾಯ ಹೇಳುತ್ತಿದ್ದೇವೆ, ಹಾಗೆಯೇ ಮೇರಾ ಯುವ ಭಾರತ್ ಸಂಕಲ್ಪದೊಂದಿಗೆ ಹೊಸ ಆರಂಭ ಮಾಡುತ್ತಿದ್ದೇವೆ. 21ನೇ ಶತಮಾನದಲ್ಲಿ ಮೇರಾ ಯುವ ಭಾರತ್ ಸಂಸ್ಥೆಯು ರಾಷ್ಟ್ರ ನಿರ್ಮಾಣದಲ್ಲಿ ದೊಡ್ಡ ಪಾತ್ರವನ್ನು ವಹಿಸಲಿದೆ ಎಂದು ಪ್ರಧಾನಿಯವರು ಹೇಳಿದರು.

ಭಾರತದ ಶೌರ್ಯದ ಹಲವಾರು ಸಾಹಸಗಾಥೆಗಳನ್ನು ಪ್ರಸ್ತಾಪಿಸಿದ ಅವರು ಶಹೀದ್ ಭಗತ್ ಸಿಂಗ್ ಅವರ ಕೊಡುಗೆಗಳನ್ನು ಉಲ್ಲೇಖಿಸಿದರು. ಪ್ರತಿಯೊಬ್ಬ ಪ್ರಜೆಯೂ ಮಾತೃಭೂಮಿಯ ಮಣ್ಣಿನಲ್ಲಿ ಹೇಗೆ ಆಳವಾಗಿ ಬೇರೂರಿದ್ದಾನೆ ಎಂಬುದನ್ನು ಎತ್ತಿ ಹೇಳಿದ ಪ್ರಧಾನಮಂತ್ರಿಯವರು, ಭಾರತದ ಮಣ್ಣಿನ ಋಣವನ್ನು ತೀರಿಸದಿದ್ದರೆ ಜೀವನ ಸಾರ್ಥಕವಲ್ಲ ಎಂದು ಹೇಳಿದರು. ದೆಹಲಿಗೆ ಆಗಮಿಸಿರುವ ಸಾವಿರಾರು ‘ಅಮೃತ ಕಲಶ’ಗಳ ಮಣ್ಣು






ಪ್ರತಿಯೊಬ್ಬರಿಗೂ ಕರ್ತವ್ಯ ಅಥವಾ ಜವಾಬ್ದಾರಿಯ ಭಾವನೆಯನ್ನು ನೆನಪಿಸುತ್ತದೆ ಮತ್ತು ವಿಕಸಿತ ಭಾರತದ ಸಂಕಲ್ಪವನ್ನು ಸಾಧಿಸಲು ಪ್ರತಿಯೊಬ್ಬರನ್ನು ಪ್ರೇರೇಪಿಸುತ್ತದೆ ಎಂದು ಅವರು ಹೇಳಿದರು. ರಾಷ್ಟ್ರ ನಿರ್ಮಾಣಕ್ಕೆ ಎಲ್ಲರೂ ಕೊಡುಗೆ ನೀಡಬೇಕು. ಸುಮಾರು 1000 ದಿನಗಳ ಕಾಲ ನಡೆದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಕಾರಾತ್ಮಕ ಪರಿಣಾಮವು ಭಾರತದ ಯುವ ಪೀಳಿಗೆಯ ಮೇಲೆ ಬೀರಿದೆ ಎಂದು ಪ್ರಧಾನಮಂತ್ರಿಗಳು ಹೇಳಿದರು.

ಅಮೃತ ಮಹೋತ್ಸವವು ಒಂದು ರೀತಿಯಲ್ಲಿ ಭವಿಷ್ಯದ ಪೀಳಿಗೆಗೆ ಇತಿಹಾಸದ ಕಾಣೆಯಾದ ಪುಟಗಳನ್ನು ಸೇರಿಸಿದೆ. ಭಾರತದ ಜನರು ಅಮೃತ ಮಹೋತ್ಸವವನ್ನು ಜನಾಂದೋಲನವನ್ನಾಗಿ ಮಾಡಿದರು. ಹರ್ ಘರ್ ತಿರಂಗಾದ ಯಶಸ್ಸು ಪ್ರತಿಯೊಬ್ಬ ಭಾರತೀಯನ ಯಶಸ್ಸು; ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಕುಟುಂಬ ಮತ್ತು ಗ್ರಾಮಗಳ ಕೊಡುಗೆಯ ಬಗ್ಗೆ ಜನರು ತಿಳಿದುಕೊಂಡರು ಎಂದು ಅವರು ಅಭಿಪ್ರಾಯ ಪಟ್ಟರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅವಧಿಯಲ್ಲಿ ಭಾರತದ ಸಾಧನೆಗಳನ್ನು ವಿವರಿಸಿದ ಪ್ರಧಾನಮಂತ್ರಿಯವರು, ವಿಶ್ವದ ಅಗ್ರ 5 ಆರ್ಥಿಕತೆಯಾಗಿ ಭಾರತದ ಸ್ಥಾನ ಏರಿಕೆ, ಚಂದ್ರಯಾನ 3 ರ ಯಶಸ್ವಿ ಲ್ಯಾಂಡಿಂಗ್, ಜಿ20 ಶೃಂಗಸಭೆಯ ಆಯೋಜನೆ, ಏಶಿಯನ್ ಕ್ರೀಡಾಕೂಟ ಮತ್ತು ಪ್ಯಾರಾ ಏಶಿಯನ್ ಕ್ರೀಡಾಕೂಟದಲ್ಲಿ 100 ಕ್ಕೂ ಹೆಚ್ಚು ಪದಕಗಳನ್ನು ಗಳಿಸಿದ ಐತಿಹಾಸಿಕ ದಾಖಲೆ, ನೂತನ ಸಂಸತ್ ಭವನ ಉದ್ಘಾಟನೆ, ನಾರಿ ಶಕ್ತಿ ವಂದನಾ ಅಧಿನಿಯಮ ಅಂಗೀಕಾರ, ರಫ್ತಿನಲ್ಲಿ ಹೊಸ ದಾಖಲೆಗಳು, ಕೃಷಿ ಉತ್ಪನ್ನಗಳು, ವಂದೇ ಭಾರತ್ ರೈಲು ಜಾಲದ ವಿಸ್ತರಣೆ, ಅಮೃತ ಭಾರತ ನಿಲ್ದಾಣ ಅಭಿಯಾನದ ಆರಂಭ, ದೇಶದ ಮೊದಲ ಪ್ರಾದೇಶಿಕ ಕ್ಷಿಪ್ರ ರೈಲು ನಮೋ ಭಾರತ್, 65,000 ಕ್ಕೂ ಹೆಚ್ಚು ಅಮೃತ್ ಸರೋವರಗಳ ನಿರ್ಮಾಣ, ಮೇಡ್ ಇನ್ ಇಂಡಿಯಾ 5ಜಿ ಯ ಬಿಡುಗಡೆ ಮತ್ತು ಸಂಪರ್ಕವನ್ನು ಸುಧಾರಿಸಲು ಪ್ರಧಾನಮಂತ್ರಿ ಗತಿಶಕ್ತಿ ಮಾಸ್ಟರ್‌ಪ್ಲಾನ್ ಯೋಜನೆಯ ಆರಂಭವನ್ನು ಪ್ರಸ್ತಾಪಿಸಿದರು. "ಒಂದು ಅಂತ್ಯವು ಯಾವಾಗಲೂ ಹೊಸದರ ಆರಂಭವನ್ನು ಸೂಚಿಸುತ್ತದೆ" ಎಂದು ಪ್ರಧಾನಮಂತ್ರಿಯವರು ಸಂಸ್ಕೃತ ಶ್ಲೋಕವೊಂದನ್ನು ಉಲ್ಲೇಖಿಸಿದರು. ಅಮೃತ ಮಹೋತ್ಸವದ ಸಮಾರೋಪದೊಂದಿಗೆ ಮೇರಾ ಯುವ ಭಾರತ್ ಪ್ರಾರಂಭವಾಗುತ್ತಿರುವುದನ್ನು ಅವರು ಉಲ್ಲೇಖಿಸಿದರು. ಮೇರಾ ಯುವ ಭಾರತ್, ಭಾರತದ ಯುವ ಶಕ್ತಿಯ ಘೋಷಣೆಯಾಗಿದೆ ಎಂದು ಅವರು ಹೇಳಿದರು. ದೇಶದ ಪ್ರತಿಯೊಬ್ಬ ಯುವಜನರನ್ನು ಒಂದೇ ವೇದಿಕೆಯಲ್ಲಿ ತರಲು ಮತ್ತು ರಾಷ್ಟ್ರ ನಿರ್ಮಾಣಕ್ಕೆ ಅವರ ಹೆಚ್ಚಿನ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಇದು ಉತ್ತಮ ಮಾಧ್ಯಮವಾಗಲಿದೆ ಎಂದು ಅವರು ಹೇಳಿದರು. ಮೇರಾ ಯುವ ಭಾರತ್ ವೆಬ್ ಸೈಟ್ ಬಿಡುಗಡೆ ಕುರಿತು ಮಾಹಿತಿ ನೀಡಿದ ಅವರು, ಯುವಕರಿಗಾಗಿ ನಡೆಸುತ್ತಿರುವ ವಿವಿಧ ಕಾರ್ಯಕ್ರಮಗಳನ್ನು ವೇದಿಕೆಯಲ್ಲಿ ಸೇರಿಸಲಾಗುವುದು ಎಂದರು. ಯುವಕರು ಸಾಧ್ಯವಾದಷ್ಟು ಅದರೊಂದಿಗೆ ಸಂಪರ್ಕ ಸಾಧಿಸಬೇಕು, ಭಾರತವನ್ನು ಹೊಸ ಶಕ್ತಿಯಿಂದ ತುಂಬಿಸಬೇಕು ಮತ್ತು ದೇಶವನ್ನು ಪ್ರಗತಿಯತ್ತ ಮುನ್ನಡೆಸಬೇಕು ಎಂದು ಪ್ರಧಾನಿಯವರು ಒತ್ತಾಯಿಸಿದರು. ಭಾರತದ ಸ್ವಾತಂತ್ರ್ಯವು ಪ್ರತಿಯೊಬ್ಬ ನಾಗರಿಕನ ಸಂಕಲ್ಪಗಳ ಈಡೇರಿಕೆಯಾಗಿದೆ, ಅದನ್ನು ಒಗ್ಗಟ್ಟಿನಿಂದ ರಕ್ಷಿಸಬೇಕು ಎಂದು ಕರೆ ನೀಡಿದರು.



## ಹಿನ್ನೆಲೆ

### ನನ್ನ ಮಣ್ಣು ನನ್ನ ದೇಶ (ಮೇರಿ ಮಾಟಿ ಮೇರಾ ದೇಶ್)

ನನ್ನ ಮಣ್ಣು ನನ್ನ ದೇಶ ಅಭಿಯಾನವು ದೇಶಕ್ಕಾಗಿ ಪರಮ ತ್ಯಾಗ ಮಾಡಿದ ವೀರರು ಮತ್ತು ವೀರಾಂಗನೆಯರಿಗೆ ಸಲ್ಲಿಸುವ ಗೌರವವಾಗಿದೆ. ಜನಭಾಗೀದಾರಿಯ ಮನೋಭಾವದಲ್ಲಿ, ಅಭಿಯಾನವು ದೇಶದಾದ್ಯಂತ ಪಂಚಾಯತ್/ಗ್ರಾಮ, ಬ್ಲಾಕ್, ನಗರ ಸ್ಥಳೀಯ ಸಂಸ್ಥೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಡೆಸಲಾದ ಅನೇಕ ಚಟುವಟಿಕೆಗಳು ಮತ್ತು ಸಮಾರಂಭಗಳನ್ನು ಒಳಗೊಂಡಿತು. ಅತ್ಯುನ್ನತ ತ್ಯಾಗವನ್ನು ಮಾಡಿದ ಎಲ್ಲಾ ವೀರರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಲು ಶಿಲಾಫಲಕಮ್ (ಸ್ಮಾರಕ) ನಿರ್ಮಾಣ; ಶಿಲಾಫಲಕದಲ್ಲಿ ಜನರು ಮಾಡಿದ ಪಂಚ ಪ್ರಾಣ'ಪ್ರತಿಜ್ಞೆ; ಸ್ಥಳೀಯ ಜಾತಿಯ ಸಸಿಗಳನ್ನು ನೆಡುವುದು, 'ಅಮೃತ ವಾಟಿಕಾ' (ವಸುಧಾ ವಂದನ್) ಅಭಿವೃದ್ಧಿಪಡಿಸುವುದು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳಿಗೆ (ವೀರೋಂ ಕಾ ವಂದನ್) ಸನ್ಮಾನ ಸಮಾರಂಭಗಳು ಇದರ ಭಾಗವಾಗಿದ್ದವು.

36 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ 2.3 ಲಕ್ಷಕ್ಕೂ ಹೆಚ್ಚು ಶಿಲಾಫಲಕಗಳನ್ನು ನಿರ್ಮಿಸುವುದರೊಂದಿಗೆ ಅಭಿಯಾನವು ಭಾರೀ ಯಶಸ್ಸನ್ನು ಕಂಡಿತು; ಸುಮಾರು 4 ಕೋಟಿ ಪಂಚ ಪ್ರಾಣ ಪ್ರತಿಜ್ಞೆ ಸೆಲ್ಫಿ ಅಪ್ಲೋಡ್ ಮಾಡಲಾಗಿದೆ; 2 ಲಕ್ಷಕ್ಕೂ ಹೆಚ್ಚು ರಾಷ್ಟ್ರವ್ಯಾಪಿ ವೀರೋಂ ಕಾ ವಂದನ್' ಕಾರ್ಯಕ್ರಮಗಳನ್ನು ನಡೆಸಲಾಗಿದೆ; 2.36 ಕೋಟಿಗೂ ಹೆಚ್ಚು ಸ್ಥಳೀಯ ಸಸಿಗಳನ್ನು ನೆಡಲಾಗಿದೆ; ಮತ್ತು ದೇಶಾದ್ಯಂತ ವಸುಧಾ ವಂದನ್ ಅಡಿಯಲ್ಲಿ 2.63 ಲಕ್ಷ ಅಮೃತ ವಾಟಿಕಾಗಳನ್ನು ನಿರ್ಮಿಸಲಾಗಿದೆ.

'ನನ್ನ ಮಣ್ಣು ನನ್ನ ದೇಶ' ಅಭಿಯಾನವು ಅಮೃತ ಕಲಶ ಯಾತ್ರೆಯನ್ನು ಒಳಗೊಂಡಿದೆ, ಇದು ಗ್ರಾಮೀಣ ಪ್ರದೇಶಗಳಲ್ಲಿನ 6 ಲಕ್ಷಕ್ಕೂ ಹೆಚ್ಚು ಹಳ್ಳಿಗಳಿಂದ ಮತ್ತು ನಗರ ಪ್ರದೇಶಗಳಲ್ಲಿನ ವಾರ್ಡ್‌ಗಳಿಂದ ಮಿಟ್ಟಿ (ಮಣ್ಣು) ಮತ್ತು ಅಕ್ಕಿ ಧಾನ್ಯಗಳನ್ನು ಕಲಶಗಳಲ್ಲಿ ಸಂಗ್ರಹಿಸಲಾಯಿತು. ಇದನ್ನು ಬ್ಲಾಕ್ ಮಟ್ಟಕ್ಕೆ ಕಳುಹಿಸಿ, ನಂತರ ರಾಜ್ಯ ರಾಜಧಾನಿಗೆ, ಆ ಮೇಲೆ ಕಲಶಗಳನ್ನು ರಾಷ್ಟ್ರ ರಾಜಧಾನಿಗೆ ರವಾನಿಸಲಾಯಿತು.

ದೇಶದ ಪ್ರತಿಯೊಂದು ಭಾಗದಿಂದ ಸಂಗ್ರಹಿಸಿದ ಮಣ್ಣಿನಿಂದ ಅಮೃತ ವಾಟಿಕಾ ಮತ್ತು ಅಮೃತ ಮಹೋತ್ಸವ ಸ್ಮಾರಕವನ್ನು ನಿರ್ಮಿಸಲಾಗುವುದು.

'ನನ್ನ ಮಣ್ಣು ನನ್ನ ದೇಶ' ಅಭಿಯಾನವನ್ನು 'ಸ್ವಾತಂತ್ರ್ಯದ ಅಮೃತ ಮಹೋತ್ಸವ'ದ ಅಂತಿಮ ಕಾರ್ಯಕ್ರಮವಾಗಿ ರೂಪಿಸಲಾಗಿತ್ತು. ಭಾರತದ ಸ್ವಾತಂತ್ರ್ಯದ 75 ನೇ ವರ್ಷವನ್ನು ಆಚರಿಸಲು ಸ್ವಾತಂತ್ರ್ಯದ ಅಮೃತ ಮಹೋತ್ಸವವು 12ನೇ ಮಾರ್ಚ್ 2021 ರಂದು ಪ್ರಾರಂಭವಾಯಿತು. ಅಂದಿನಿಂದ ಸಾರ್ವಜನಿಕ ಭಾಗವಹಿಸುವಿಕೆಯೊಂದಿಗೆ ದೇಶಾದ್ಯಂತ ಆಯೋಜಿಸಲಾದ ಎರಡು ಲಕ್ಷಕ್ಕೂ ಹೆಚ್ಚು ಕಾರ್ಯಕ್ರಮಗಳಿಗೆ ಇದು ಸಾಕ್ಷಿಯಾಯಿತು.

### 'ಮೇರಾ ಯುವ ಭಾರತ್'

ದೇಶದ ಯುವಜನರಿಗೆ 'ಒಂದು-ತಾಣ'ವಾಗಿ, ಸಂಪೂರ್ಣ ಸರ್ಕಾರದ ವೇದಿಕೆಯಾಗಿ ಸೇವೆ ಸಲ್ಲಿಸಲು ಸ್ವಾಯತ್ತ ಸಂಸ್ಥೆಯಾಗಿ MY Bharat ಅನ್ನು ಸ್ಥಾಪಿಸಲಾಗುತ್ತಿದೆ. ದೇಶದ ಪ್ರತಿಯೊಬ್ಬ ಯುವಕರಿಗೆ ಸಮಾನ ಅವಕಾಶಗಳನ್ನು ಒದಗಿಸುವ ಪ್ರಧಾನಮಂತ್ರಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿ, MY Bharat ಸರ್ಕಾರದ ಸಂಪೂರ್ಣ ವ್ಯಾಪ್ತಿಯಾದ್ಯಂತ ಕಾರ್ಯವಿಧಾನವನ್ನು ಒದಗಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತದೆ, ಇದರಿಂದಾಗಿ ಯುವಜನರು ತಮ್ಮ ಆಕಾಂಕ್ಷೆಗಳನ್ನು ಸಾಕಾರಗೊಳಿಸಿಕೊಳ್ಳಬಹುದಾಗಿದೆ ಮತ್ತು 'ವಿಕಸಿತ ಭಾರತ' ನಿರ್ಮಾಣಕ್ಕೆ ಕೊಡುಗೆ ನೀಡಬಹುದು.

MY Bharat ಉದ್ದೇಶವು ಯುವಕರನ್ನು ಸಮುದಾಯ ಬದಲಾವಣೆಯ ಮಧ್ಯಸ್ಥರಾಗಲು ಮತ್ತು ರಾಷ್ಟ್ರ ನಿರ್ಮಾತೃಗಳಾಗಲು ಪ್ರೇರೇಪಿಸುವುದಾಗಿದೆ. ಸರ್ಕಾರ ಮತ್ತು ನಾಗರಿಕರ ನಡುವೆ 'ಯುವ ಸೇತು' ಆಗಿ ಕಾರ್ಯನಿರ್ವಹಿಸಲು ಅವರಿಗೆ ಅನುವು ಮಾಡಿಕೊಡುತ್ತದೆ. ಈ ಅರ್ಥದಲ್ಲಿ, MY Bharat ದೇಶದಲ್ಲಿ 'ಯುವ ನೇತೃತ್ವದ ಅಭಿವೃದ್ಧಿ'ಗೆ ಪ್ರಮುಖ ಪ್ರೋತ್ಸಾಹವನ್ನು ನೀಡುತ್ತದೆ.

2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಸಂಕಲ್ಪವನ್ನು ಉಲ್ಲೇಖಿಸಿದ ಅವರು, ಸ್ವಾತಂತ್ರ್ಯದ 100



ವರ್ಷಗಳನ್ನು ಪೂರೈಸುವ ಸಂದರ್ಭದಲ್ಲಿ ಈ ವಿಶೇಷ ದಿನವನ್ನು ರಾಷ್ಟ್ರವು ನೆನಪಿಸಿಕೊಳ್ಳುತ್ತದೆ ಎಂದು ಹೇಳಿದರು.

ನಾವು ತೆಗೆದುಕೊಂಡ ಸಂಕಲ್ಪದಂತೆ, ಮುಂಬರುವ ಪೀಳಿಗೆಗೆ ನೀಡಿದ ಭರವಸೆಗಳನ್ನು ನಾವು ಈಡೇರಿಸಬೇಕಾಗಿದೆ ಎಂದು ಅವರು ಹೇಳಿದರು. ಇದಕ್ಕಾಗಿ ಪ್ರಯತ್ನಗಳನ್ನು ತೀವ್ರಗೊಳಿಸುವಂತೆ ಪ್ರಧಾನಿಯವರು ಒತ್ತಾಯಿಸಿದರು. 'ಅಭಿವೃದ್ಧಿ ಹೊಂದಿದ ದೇಶ ಎಂಬ ಗುರಿಯನ್ನು ಸಾಧಿಸಲು ಪ್ರತಿಯೊಬ್ಬ ಭಾರತೀಯನ ಕೊಡುಗೆ ಮುಖ್ಯವಾಗಿದೆ. ಬನ್ನಿ, ಅಮೃತ ಮಹೋತ್ಸವದ ಮೂಲಕ ವಿಕಸಿತ ಭಾರತದ ಅಮೃತ ಕಾಲದ ಹೊಸ ಪ್ರಯಾಣವನ್ನು ಪ್ರಾರಂಭಿಸೋಣ' ಎಂದು ಪ್ರಧಾನಿಯವರು ಕರೆ ನೀಡಿದರು.

ಕೇಂದ್ರ ಗೃಹ ಖಾತೆ ಸಚಿವ ಶ್ರೀ ಅಮಿತ್ ಶಾ, ಕೇಂದ್ರ ಸಮಾಚಾರ ಮತ್ತು ಪ್ರಸಾರ ಖಾತೆ ಸಚಿವ ಶ್ರೀ ಅನುರಾಗ್ ಸಿಂಗ್ ಠಾಕೂರ್ ಮತ್ತು ಕೇಂದ್ರ ಸಂಸ್ಕೃತಿ ಖಾತೆ ಸಚಿವ ಶ್ರೀ ಜಿ ಕಿಶನ್ ರೆಡ್ಡಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

– ಮೂಲ : ಪಿಐಬಿ

# ‘1857ರ ಜನಕ್ರಾಂತಿ–ನೆನಪಿಗೆ ಸೇರಿದ ಹುತಾತ್ಮರು’ ಪುಸ್ತಕ ಬಿಡುಗಡೆ



ಈ ಸಂದರ್ಭದಲ್ಲಿ ಪಿಐಬಿ ಹೆಚ್ಚುವರಿ ಮಹಾ ನಿರ್ದೇಶಕ ಶ್ರೀ ಎಸ್.ಜಿ. ರವೀಂದ್ರ, ದೂರದರ್ಶನ ಕೇಂದ್ರದ ಉಪಮಹಾನಿರ್ದೇಶಕ ಶ್ರೀ ಅನಿಲ್ ಮಂಗಳಗಿ ಹಾಗೂ ಪ್ರಕಾಶನ ವಿಭಾಗದ ಉಪನಿರ್ದೇಶಕ ಶ್ರೀ ಯಶವಂತ್ ಶಹನಾಯಿ ಉಪಸ್ಥಿತರಿದ್ದರು.

ಸ್ವಾತಂತ್ರ್ಯದ ಅಮೃತಮಹೋತ್ಸವ ವರ್ಷಾಚರಣೆ ಅಂಗವಾಗಿ ಪ್ರಕಾಶನ ವಿಭಾಗ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ತ್ಯಾಗ ಬಲಿದಾನಗಳನ್ನು ಯುವಜನರಿಗೆ ಪರಿಚಯಿಸುವ ಉದ್ದೇಶದಿಂದ ಇಂತಹ ಪುಸ್ತಕಗಳನ್ನು ವಿವಿಧ ಭಾರತೀಯ ಭಾಷೆಗಳಲ್ಲಿ ಪ್ರಕಟಿಸುತ್ತಿದೆ.

ಕೇಂದ್ರ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಪುಸ್ತಕ ಸರಣಿಯಡಿ ಹೊರ ತಂದ – "1857ರ ಜನಕ್ರಾಂತಿ – ನೆನಪಿಗೆ ಸೇರಿದ ಹುತಾತ್ಮರು" –ಕನ್ನಡ ಪುಸ್ತಕವನ್ನು ಸಚಿವಾಲಯದ ಜಂಟಿ ಕಾರ್ಯದರ್ಶಿ ಶ್ರೀ ವಿಕ್ರಮ್ ಸಹಾಯ್ ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ (19.10.2023) ಬಿಡುಗಡೆ ಮಾಡಿದರು.

"1857ರ ಜನಕ್ರಾಂತಿ – ನೆನಪಿಗೆ ಸೇರಿದ ಹುತಾತ್ಮರು" ಪುಸ್ತಕ, ದೇಶದ ಮಹಾನ್ ಹೋರಾಟಗಾರರ ಕೊಡುಗೆಯನ್ನು ದಾಖಲಿಸುವ ಪ್ರಯತ್ನವಾಗಿದೆ. ಪುಸ್ತಕದಲ್ಲಿ ನರಗುಂದದ ಭಾಸ್ಕರ ರಾವ್ ಬಾಬಾ ಸಾಹೇಬರ ಸೇವೆಯನ್ನು ಸ್ಮರಿಸುವ ಮೂಲಕ ಅಕ್ಷರ ನಮನ ಸಲ್ಲಿಸಲಾಗಿದೆ.

## ನಮ್ಮ ಪುಸ್ತಕಗಳು

**ಭಾಷೆ : ಕನ್ನಡ    ಬೆಲೆ : ರೂ. 210/–**

### ‘1857ರ ಜನಕ್ರಾಂತಿ – ನೆನಪಿಗೆ ಸೇರಿದ ಹುತಾತ್ಮರು’




ಈ ಪುಸ್ತಕವು ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಬಲಿದಾನಗಳನ್ನು ಮಾಡಿದ ಹೋರಾಟಗಾರರ ಜೀವನಗಾಥೆಯನ್ನು ಅನಾವರಣಗೊಳಿಸುತ್ತದೆ. ಜನಕ್ರಾಂತಿಯಲ್ಲಿ ಭಾಗವಹಿಸಿ, ಹುತಾತ್ಮರಾದವರ ಬಗ್ಗೆ ಅಪರಿಚಿತವಾಗಿ ಉಳಿದಿರುವ ಮಾಹಿತಿಗಳನ್ನು ಪುಸ್ತಕಗಳು ಮತ್ತು ಪ್ರಾಚೀನ ಪತ್ರಾಗಾರಗಳಿಂದ ಹುಡುಕಿ ತೆಗೆದು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ದೇಶದ 24 ಮಹನೀಯರ ಹೋರಾಟದ ಬದುಕನ್ನು ತ್ಯಾಗ, ಬಲಿದಾನಗಳನ್ನು ಈ ಅನುವಾದಿತ ಕೃತಿಯಲ್ಲಿ ಸಾದರಪಡಿಸಲಾಗಿದೆ.

**ಪುಸ್ತಕ ಖರೀದಿಗೆ ಸಂಪರ್ಕಿಸ ಬೇಕಾದ ವಿಳಾಸ :**

ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ,
ಮೊದಲನೆಯ ಅಂತಸ್ತು, ‘ಎಫ್’ವಿಂಗ್, ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034. ದೂರವಾಣಿ : 080 – 25537244.
E-mail : kannada-yojana@gov.in

# ಡಿಜಿಟಲ್ ಆರ್ಥಿಕತೆಯಲ್ಲಿ ಭದ್ರತೆ, ವಿಶ್ವಾಸ ನಿರೂಪಣೆ

* ಅಭಿಷೇಕ್ ಸಿಂಗ್



**ಭಾರತದ ಜಿ20 ಅಧ್ಯಕ್ಷತೆಯಲ್ಲಿ ಡಿಜಿಟಲ್ ಪರಿವರ್ತನೆಗೆ ಡಿಪಿಐಗಳು, ಸೈಬರ್ ಸುರಕ್ಷತೆ ಮತ್ತು ಡಿಜಿಟಲ್ ಕುಶಲತೆ ಕಾರ್ಯಸೂಚಿಯನ್ನು ರೂಪಿಸಲಾಯಿತು. ಡಿಜಿಟಲ್ ಪರಿವರ್ತನೆಯ ಈ ಕ್ರಮ 'ವಸುಧೈವ ಕುಟುಂಬಕಂ' ನ – ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯದ ಗುರಿ ಸಾಧನೆಗೆ ನಿಜವಾಗಿ ಸಹಾಯವಾಗುತ್ತದೆ.**

ಜಿ 20, ವಿಶ್ವದ ಅತಿದೊಡ್ಡ ಆರ್ಥಿಕ ಗುಂಪಾಗಿ ಬಹಳ ಪರಿಣಾಮಕಾರಿಯಾಗಿದ್ದು, ಇದು 1999 ರಲ್ಲಿ ಅಸ್ತಿತ್ವಕ್ಕೆ ಬಂದಿತು. 1997–98 ರಲ್ಲಿ ಏಶಿಯಾದಲ್ಲಿ ಉಂಟಾದ ಆರ್ಥಿಕ ಸಂಕಷ್ಟಕ್ಕೆ ಜಾಗತಿಕ ಆರ್ಥಿಕ ಸ್ಥಿರತೆಯ ಮೂಲಕ ಪರಿಹಾರ ಕಂಡುಕೊಳ್ಳಲು ಇದರ ಸ್ಥಾಪನೆಯಾಯಿತು. ಕಾಲಕ್ರಮೇಣ ಇದರ ಕಾರ್ಯಸೂಚಿಯನ್ನು ವಿಸ್ತರಿಸಿಕೊಳ್ಳುತ್ತಾ ಬರಲಾಗಿದ್ದು, ಡಿಜಿಟಲ್ ಆರ್ಥಿಕತೆ, ವಾಣಿಜ್ಯ, ಸುಸ್ಥಿರ ಅಭಿವೃದ್ಧಿ, ಆರೋಗ್ಯ, ಕೃಷಿ, ಇಂಧನ, ಪರಿಸರ, ಹವಾಮಾನ ಬದಲಾವಣೆ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟ ಮೊದಲಾದ ಅಂಶಗಳನ್ನು ಸೇರಿಸಿಕೊಳ್ಳಲಾಗಿದೆ. ಡಿಜಿಟಲ್ ಆರ್ಥಿಕತೆ, ಜಿ20 ಯ ಬಹಳ ಮುಖ್ಯವಾದ ಕಾರ್ಯ ಸೂಚಿಯಾಗಿದ್ದು, ವಿಶ್ವ ಬ್ಯಾಂಕ್‌ನ ಪ್ರಕಾರ ಡಿಜಿಟಲ್ ಆರ್ಥಿಕತೆಯು ವಿಶ್ವದ ಜಿಡಿಪಿಗೆ ಶೇಕಡಾ 15 ರಷ್ಟು ಕೊಡುಗೆ ನೀಡುತ್ತಿದೆ. ಕಳೆದ 10 ವರ್ಷಗಳಲ್ಲಿ ಇದು ವಿಶ್ವದ ಭೌತಿಕ ಜಿಡಿಪಿಯ ಬೆಳವಣಿಗೆಗಿಂತ ಎರಡೂವರೆ ಪಟ್ಟುಹೆಚ್ಚು ಬೆಳವಣಿಗೆ ಸಾಧಿಸಿದೆ.

ಕಳೆದ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಜಿ20 ಯ ಡಿಜಿಟಲ್ ಆರ್ಥಿಕತೆಯ ಸಚಿವರ ಸಭೆಯಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹೇಳಿದ ಮಾತಿನಲ್ಲಿ ಹೇಳಬೇಕಾದರೆ, 'ಡಿಜಿಟಲ್ ಆರ್ಥಿಕತೆ ವಿಶ್ವದಾದ್ಯಂತ ಪಸರಿಸಿದಂತೆ ಅದು ಸುರಕ್ಷತೆ ಮತ್ತು ಸವಾಲುಗಳ ಅಪಾಯಗಳನ್ನು ಎದುರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಜಿ20 ಯ ಉನ್ನತ ಮಟ್ಟದಲ್ಲಿ ಸುರಕ್ಷತೆಯ, ನಂಬಿಕಾರ್ಹವಾದ ಮತ್ತು ಚೇತರಿಸಿಕೊಳ್ಳುವ ಡಿಜಿಟಲ್ ಆರ್ಥಿಕತೆಯನ್ನು ರೂಪಿಸಲು ಒಮ್ಮತದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಈಗ ಒದಗಿ ಬಂದಿರುವ ವಿಶಿಷ್ಟವಾದ ಅವಕಾಶವನ್ನು ಬಳಸಿಕೊಂಡು ಎಲ್ಲರನ್ನೂ ಒಳಗೊಂಡ, ಸಮೃದ್ಧ ಮತ್ತು ಸುರಕ್ಷತೆಯ ಭವಿಷ್ಯತ್ತಿನ ಜಾಗತಿಕ ಡಿಜಿಟಲ್ ಆರ್ಥಿಕತೆಗೆ ಭದ್ರವಾದ ಬುನಾದಿ ಹಾಕಬೇಕಾಗಿದೆ'.

### ಡಿಜಿಟಲ್ ಆರ್ಥಿಕತೆಯ ಕಾರ್ಯಪಡೆ

ಡಿಜಿಟಲ್ ಆರ್ಥಿಕತೆಯ ಕಾರ್ಯಪಡೆ ಮೂರು ಮುಖ್ಯ ವಿಷಯಗಳ ಬಗ್ಗೆ ವ್ಯಾಪಕವಾಗಿ ಚರ್ಚಿಸಿದೆ: ಡಿಜಿಟಲ್ ಸಾರ್ವಜನಿಕ ಮೂಲ ಸೌಲಭ್ಯ, ಡಿಜಿಟಲ್ ಆರ್ಥಿಕತೆಯ ಸುರಕ್ಷತೆ ಮತ್ತು ಡಿಜಿಟಲ್ ಕುಶಲತೆ. ಲಖನೌ, ಹೈದ್ರಾಬಾದ್, ಪುಣೆ ಮತ್ತು ಬೆಂಗಳೂರುಗಳಲ್ಲಿ ವ್ಯಾಪಕವಾಗಿ ನಡೆಸಿದ ಚರ್ಚೆಯ ನಂತರ ಸಚಿವರ ಮಟ್ಟದ ಸಭೆಯಲ್ಲಿ 'ಫಲಶ್ರುತಿ' ದಾಖಲೆಯನ್ನು ಡಿಜಿಟಲ್ ಆರ್ಥಿಕತೆಗೆ ಸಂಬಂಧಪಡದ ಭೌಗೋಳಿಕ – ರಾಜಕೀಯ ವಿಚಾರ ಹೊರತುಪಡಿಸಿ ಒಮ್ಮತದಿಂದ ಒಪ್ಪಿಕೊಳ್ಳಲಾಯಿತು. ನಂತರ ದೆಹಲಿಯಲ್ಲಿ ನಡೆದ ಭಾರತದ ಜಿ20 ಸಮಿತಿಯ 2023ರ ಸೆಪ್ಟೆಂಬರ್ ಸಭೆಯಲ್ಲಿ ವಿಷಯ ಇತ್ಯರ್ಥಗೊಂಡಿತು. ಈ ಸಭೆಯಲ್ಲಿ ಪ್ರಮುಖ ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸಿ ಒಮ್ಮತದ ನಿರ್ಧಾರಕ್ಕೆ ಬರಲಾಯಿತು.

* ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಷ್ಟ್ರೀಯ ಇ–ಆಡಳಿತ ವಿಭಾಗ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ.
ಇಮೇಲ್: ceo@digitalindia.gov.in

## ಡಿಜಿಟಲ್ ಆರ್ಥಿಕತೆ ಕಾರ್ಯತಂಡದ ಮೊದಲ ಸಭೆ

G20

ಫೆಬ್ರವರಿ 13-15, 2023 ಲಖನೌ

# ಭಾರತದ ಜಿ20 ಅಧ್ಯಕ್ಷತೆಯ ಆದ್ಯತೆಗಳು

ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ

ಡಿಜಿಟಲ್ ಆರ್ಥಿಕತೆಯಲ್ಲಿ ಸೈಬರ್ ಭದ್ರತೆ

ಡಿಜಿಟಲ್ ಕೌಶಲ್ಯ



### ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯ

ಡಿಜಿಟಲ್ ಸಾರ್ವಜನಿಕ ಮೂಲ-ಸೌಲಭ್ಯಗಳಿಗೆ ಸ್ಪಷ್ಟವಾದ ನಿರೂಪಣೆ ರೂಪಿಸಿದುದು ಜಿ20 ಯ ಪ್ರಮುಖವಾದ ಸಾಧನೆ. ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯವನ್ನು ಹಂಚಿಕೊಳ್ಳುವ ಡಿಜಿಟಲ್ ವ್ಯವಸ್ಥೆಯು ಸುರಕ್ಷಿತವಾಗಿದ್ದು ಆಂತರಿಕವಾಗಿ ಬಳಸಬಹುದಾಗಿದ್ದು ಅದನ್ನು ತೆರೆದ ಮಾನದಂಡಗಳು ಮತ್ತು ನಿರ್ದಿಷ್ಟ ವಿವರಗಳೊಂದಿಗೆ ರೂಪಿಸಿ ಸಾರ್ವಜನಿಕರಿಗೆ ಅಥವಾ ಖಾಸಗಿ ಸೇವೆಗಳಿಗೆ ಸಮಾಜದ ವ್ಯಾಪಕತೆಗೆ ಅನುಗುಣವಾಗಿ ಉಪಯೋಗಿಸಬಹುದಾಗಿದೆ. ಅವು ಕಾನೂನಿನ ಚೌಕಟ್ಟಿನೊಳಗೆ ನಿಯಮಗಳನ್ನು ರೂಪಿಸಿ ಅಭಿವೃದ್ಧಿ, ಒಳಗೊಳ್ಳುವಿಕೆ, ಹೊಸದಾಗಿ ಕಂಡುಹಿಡಿಯುವಿಕೆ, ನಂಬಿಕೆ ಮತ್ತು ಸ್ಪರ್ಧಾತ್ಮಕತೆಗೆ ತೆರೆದುಕೊಂಡು ಮಾನವ ಹಕ್ಕುಗಳನ್ನು ಗೌರವಿಸುವಂತಿರಬೇಕು. ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯವು ಹಂಚಿಕೊಳ್ಳಬಹುದಾದ ತಾಂತ್ರಿಕ ಮೂಲಸೌಲಭ್ಯ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಡಿಜಿಟಲ್ ಬದಲಾವಣೆ ತರುವ ಆಶ್ವಾಸನಾದಾಯಕ ಮಾರ್ಗವಾಗಿದೆ. ಇದರ ನಿರೂಪಣೆ ಆಡಳಿತಾತ್ಮಕ ಚೌಕಟ್ಟುಗಳೊಳಗೆ ಮತ್ತು ಸಂಸ್ಥೆಗಳ ಸಾಮರ್ಥ್ಯಗಳೊಂದಿಗೆ ಸುರಕ್ಷಿತವಾದ, ನಂಬಿಕಾರ್ಹವಾದ, ಉತ್ತರದಾಯಿತ್ವವಾಗಿ, ಒಳಗೊಳ್ಳುವಿಕೆಯಿಂದ ಮತ್ತು ಸುಸ್ಥಿರವಾದ ಅಭಿವೃದ್ಧಿಗೆ ಮಹತ್ತರವಾದ ಕೊಡುಗೆ ನೀಡುವಂತಿರಬೇಕು. ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳನ್ನು ಜಿ20 ನೀತಿ ನಿಯಮಗಳ ಚೌಕಟ್ಟಿನೊಳಗೆ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಅಭಿವೃದ್ಧಿ ಪಡಿಸಿ ಕಾರ್ಯರೂಪಕ್ಕೆ ತರುವ ನಿರ್ದಿಷ್ಟ ಗುರಿಯನ್ನು ಹಾಕಿಕೊಳ್ಳಲಾಗಿದೆ. ಡಿಜಿಟಲ್ ಬದಲಾವಣೆಗೆ ಭಾರತ ರೂಪಿಸಿರುವ ಆಧಾರ್, ಯುಪಿಐ ಮತ್ತು ಡಿಜಿಲಾಕರ್‌ಗಳ ಕೊಡುಗೆಯನ್ನು ಜಿ20 ದಾಖಲೆಯಲ್ಲಿ ಗುರುತಿಸಿ ಮೆಚ್ಚುಗೆ ಸೂಚಿಸಲಾಗಿದೆ. ಖಾಸಗಿತನ ಮತ್ತು ಮಾಹಿತಿ ಸಂರಕ್ಷಣೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಕಲ್ಪಿಸಿ ವಿವಿಧ ಕ್ಷೇತ್ರಗಳಲ್ಲಿ ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆಯಡಿಯಲ್ಲಿ ನಿಸ್ಸಂಶಯವಾಗಿ ಗುರುತಿಸುವಿಕೆ, ನಂಬಿಕಾರ್ಹ ಪಾವತಿಗಳು, ಅಡೆತಡೆ ರಹಿತ ಮಾಹಿತಿ ವಿನಿಮಯಗಳನ್ನು ರೂಪಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಜಾಗತಿಕ ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳ ಕೋಠಿಯನ್ನು ನಿರ್ಮಿಸಿ ನಿರ್ವಹಿಸುವ ಭಾರತದ ಯೋಜನೆಯು ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳ ವಾಸ್ತವ ಕೋಠಿಯಾಗಿದ್ದು, ಜಿ20 ಸದಸ್ಯರು ಮತ್ತು ಇತರೆ ದೇಶಗಳು ಸ್ವಇಚ್ಛೆಯಿಂದ ಇದರಲ್ಲಿ ಭಾಗವಹಿಸಬಹುದಾಗಿದೆ. ಇದರಿಂದ ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳಲ್ಲಿ ಜಿ20 ಸಭೆಯ ನಂತರವೂ ದೊಡ್ಡ ಕಾರ್ಯಾಚರಣೆಯನ್ನು ನಿರೀಕ್ಷಿಸಬಹುದಾಗಿದೆ. ಇದರ ಜೊತೆಗೆ ಒಂದು ಭವಿಷ್ಯದ ಒಕ್ಕೂಟ (ಓಎಫ್‌ಎ) ರೂಪಿಸುವುದರಿಂದ ತಾಂತ್ರಿಕ ನೆರವು ನೀಡಲು ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳಿಗೆ ಹಣಕಾಸಿನ ನೆರವನ್ನು ಕಡಿಮೆ ಮತ್ತು ಮಧ್ಯಮ ಆದಾಯ ದೇಶಗಳಿಗೆ ಒದಗಿಸಲು ಸಹಾಯಕವಾಗುತ್ತದೆ.

### ಡಿಜಿಟಲ್ ಆರ್ಥಿಕತೆಯಲ್ಲಿ ಸುರಕ್ಷತೆ

ಡಿಜಿಟಲ್ ಆರ್ಥಿಕತೆಯು ಸುರಕ್ಷತೆ, ರಕ್ಷಣೆ, ಚೇತರಿಸಿಕೊಳ್ಳುವಿಕೆ ಮತ್ತು ನಂಬಿಕೆಗಳ ಆಧಾರಗಳ ಮೇಲೆ ರೂಪಿತಗೊಂಡಿದ್ದು, ಅದು ಜಿ20 ಸದಸ್ಯರಲ್ಲಿ ಆದ್ಯತೆಯ ವಿಷಯವಾಗಿದ್ದು ಒಳಗೊಳ್ಳುವಿಕೆ, ಪಾರದರ್ಶಕತೆ, ಪಕ್ಷಪಾತರಹಿತವಾಗಿ ಇರುವುದನ್ನು ಖಾತರಿಗೊಳಿಸುತ್ತದೆ. ಡಿಜಿಟಲ್ ಆರ್ಥಿಕತೆಯ ಸತತ ಬೆಳವಣಿಗೆಗೆ ಇವು ಬಹಳ ಮುಖ್ಯವಾಗಿದ್ದು ಸುರಕ್ಷತೆ, ನಂಬಿಕೆ, ಚೇತರಿಸಿಕೊಳ್ಳುವಿಕೆ ಮತ್ತು ಖಾಸಗಿ ಮಾಹಿತಿಗಳನ್ನು ರಕ್ಷಿಸುವುದು ಪ್ರಮುಖ ವಿಷಯಗಳಾಗಿದ್ದು ಅದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಡಿಜಿಟಲ್ ಆರ್ಥಿಕತೆಯ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ನಂಬಿಕೆ ಮತ್ತು ಸುರಕ್ಷತೆ ಬಹಳ ಮುಖ್ಯ ಎಂಬುದು 2017 ರಲ್ಲಿ ಜರ್ಮನಿಯ ಅಧ್ಯಕ್ಷತೆಯಲ್ಲಿ ನಡೆದ ಜಿ20 ಸಭೆಯಿಂದಲೂ ಕಂಡುಕೊಳ್ಳಲಾದ ಅಂಶ, ಅವುಗಳನ್ನು 2018, 2019 ಮತ್ತು 2020 ರಲ್ಲಿ ಅರ್ಜೆಂಟೈನಾ, ಜಪಾನ್ ಮತ್ತು ಸೌದಿ ಅರೇಬಿಯಾ ದೇಶಗಳಲ್ಲಿ ನಡೆದ ಜಿ20 ಅಧ್ಯಕ್ಷತೆಗಳಲ್ಲಿ ಪುನರುಚ್ಚರಿಸಲಾಯಿತು. ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಗಳಿಗೆ ಡಿಜಿಟಲ್ ಆರ್ಥಿಕತೆಗೆ ಸುರಕ್ಷತೆ ಬಹಳ ಮುಖ್ಯ ಎಂದು ಸೌದಿ ಅರೇಬಿಯಾ ಮತ್ತು ಇಟಲಿ ದೇಶಗಳ ಅಧ್ಯಕ್ಷತೆಯಲ್ಲಿ ನಡೆದ ಜಿ20 ಸಭೆಗಳಲ್ಲಿ ಪ್ರತಿಪಾದಿಸಲಾಯಿತು. ಭಾರತದ ಜಿ20 ಅಧ್ಯಕ್ಷತೆಯ ಸಭೆಯ ನಡಾವಳಿಯಲ್ಲಿ ಡಿಜಿಟಲ್ ಬದಲಾವಣೆಗೆ ಡಿಜಿಟಲ್ ಆರ್ಥಿಕತೆಯಲ್ಲಿ ಇ-ಸುರಕ್ಷತೆ,

ರಕ್ಷಣೆ, ಚೇತರಿಸಿಕೊಳ್ಳುವಿಕೆ ಮತ್ತು ನಂಬಿಕೆಗಳು ಬಹಳ ಮುಖ್ಯ ಎಂದು ಹೇಳಲಾಯಿತು. ಒಂದಕ್ಕೊಂದು ಸಂಪರ್ಕ ಇರುವ ಇಂದಿನ ಪ್ರಪಂಚದಲ್ಲಿ ಎಲ್ಲ ಕ್ಷೇತ್ರಗಳು ಮತ್ತು ಎಲ್ಲ ಗಡಿಗಳಲ್ಲಿ ಡಿಜಿಟಲ್ ಅವಲಂಬನೆ ಇರುವುದರಿಂದ ಡಿಜಿಟಲ್ ಆರ್ಥಿಕತೆಯೂ ಸೇರಿದಂತೆ ಎಲ್ಲ ವಲಯಗಳಲ್ಲಿ ಸುರಕ್ಷತೆಯ ಸವಾಲು ಇದ್ದು, ಅದನ್ನು ಪ್ರತ್ಯೇಕವಾಗಿ ಏಕಾಂಗಿಯಾಗಿ ಯಾವ ವಲಯವೂ ಸರಿಯಾದ ರೀತಿಯಲ್ಲಿ ಎದುರಿಸಲು ಸಾಧ್ಯವಾಗುವುದಿಲ್ಲ. ಡಿಜಿಟಲ್ ಆರ್ಥಿಕತೆಯು ವಿವಿಧ ಹಂತಗಳನ್ನು ಒಳಗೊಂಡಿರುವುದರಿಂದ ಅಪಾಯ ತಲೆದೋರಿದರೆ ಇಡೀ ವ್ಯವಸ್ಥೆ ಕುಸಿದು ಬೀಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಡಿಜಿಟಲ್ ಪರಿಸರಕ್ಕೆ ಗಡಿಗಳ ಹಂಗು ಇಲ್ಲದಿರುವುದರಿಂದ ಸುರಕ್ಷಿತವಾದ ರಕ್ಷಣೆಯ ಮತ್ತು ಚೇತರಿಸಿಕೊಳ್ಳುವ ಸಾಮರ್ಥ್ಯವನ್ನು ಜಾಗತಿಕ ಸಮುದಾಯ ರೂಪಿಸಿಕೊಳ್ಳಬೇಕಿದೆ. ಸಂಭವಿಸಬಹುದಾದ ಸುರಕ್ಷತೆಯ ಗಂಡಾಂತರಗಳನ್ನು ಮೊದಲೇ ಊಹಿಸಿ ಅದನ್ನು ಸರಿಯಾದ ರೀತಿಯಲ್ಲಿ ಎದುರಿಸಲು ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಡಿಜಿಟಲ್ ಆರ್ಥಿಕತೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಲು ಜಿ20 ನೀತಿಗನುಗುಣವಾಗಿ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ನೀತಿ ನಿಯಮಗಳು ಸುರಕ್ಷತೆ, ಸಾಮರ್ಥ್ಯ ರೂಪಿಸುವಂತಹ ಸಂಸ್ಕೃತಿ ಡಿಜಿಟಲ್ ಆರ್ಥಿಕತೆಯನ್ನು ಪ್ರೋತ್ಸಾಹಿಸುವಂತಿರಬೇಕು ಮತ್ತು ಇದಕ್ಕೆ ಹಲವು ವಿಧದ ಪಾತ್ರಧಾರಿಗಳ ಜೊತೆಗೆ ಸಂಶೋಧನೆ ಮತ್ತು ಅಭಿವೃದ್ಧಿಯ ಸಹಕಾರ ಬೇಕಾಗುತ್ತದೆ.

ಜಿ20 ಯ ಉನ್ನತ ಮಟ್ಟದ ನೀತಿ ನಿಯಮಗಳು ಡಿಜಿಟಲ್ ಆರ್ಥಿಕತೆಗೆ ಸುರಕ್ಷತೆ, ರಕ್ಷಣೆ, ಚೇತರಿಸಿಕೊಳ್ಳುವಿಕೆ ಮತ್ತು ನಂಬಿಕೆಗಳಿಗೆ ಅನುಗುಣವಾಗಿ ಮುಂದಿನಂತಿರುವುದು ಸೂಕ್ತವಾಗಿದೆ.

**1. ಸುರಕ್ಷತೆ ಮತ್ತು ನಂಬಿಕೆ**

ಡಿಜಿಟಲ್ ಆರ್ಥಿಕತೆಯಲ್ಲಿ ಮಾನವ ಕೇಂದ್ರಿತ ಸುರಕ್ಷತೆ ಮತ್ತು ನಂಬಿಕೆಗಳ ಸಂಸ್ಕೃತಿಯೊಂದಿಗೆ ನಾಗರಿಕರು ಮತ್ತು ವ್ಯವಹಾರ ಕುರಿತಾದ ಅಪಾಯಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಆಧರಿಸಿ ಪರಿಹಾರ ಅಭಿವೃದ್ಧಿ ಪಡಿಸಬಹುದಾಗಿದೆ.




**2. ಸಾಮರ್ಥ್ಯ ನಿರ್ಮಾಣ**

ವಿವಿಧ ಹಂತಗಳ ಡಿಜಿಟಲ್ ಆರ್ಥಿಕತೆಯ ವ್ಯವಸ್ಥೆಯಲ್ಲಿ ಮುಂದುವರೆದ ರಕ್ಷಣಾ ವ್ಯವಸ್ಥೆಯ ಸಾಮರ್ಥ್ಯವನ್ನು ರೂಪಿಸಲು ಹೆಚ್ಚಿನ ಮಹತ್ವ ಕೊಡಬೇಕು.

ಅಂತಾರಾಷ್ಟ್ರೀಯ ಸಂಸ್ಥೆಗಳು ಸೇರಿದಂತೆ ಸಂಬಂಧಪಟ್ಟ ಭಾಗಿದಾರರು ತಮ್ಮಲ್ಲಿರುವ ನೈಪುಣ್ಯತೆಯನ್ನು ಬಳಸಿಕೊಂಡು ಸಾಮರ್ಥ್ಯವನ್ನು ರೂಪಿಸಲು ಮುಂದಿನ ಕ್ರಮ ತೆಗೆದುಕೊಳ್ಳಬೇಕು.

- ನಿರ್ವಹಣಾ ಚಾತುರ್ಯ, ಆಡಳಿತ, ತಂತ್ರಜ್ಞಾನ, ನಿಯಂತ್ರಿತ ಮತ್ತು ಅನಿಯಂತ್ರಿತ ವ್ಯವಸ್ಥೆಗಳು, ಸಂಸ್ಕೃತಿ, ಅರ್ಥಶಾಸ್ತ್ರ, ತಕ್ಷಣದ ಪ್ರತಿಕ್ರಿಯೆ ಮತ್ತು ಸಮಸ್ಯೆಗಳ ನಿರ್ವಹಣೆ ಸೇರಿದಂತೆ ಎಲ್ಲ ವಿಷಯಗಳ ಬಗ್ಗೆ ಅಂತರ್‌ಶಿಸ್ತೀಯ ಮಾರ್ಗಗಳನ್ನು ಕಂಡುಕೊಳ್ಳಬೇಕು.
- ವ್ಯಾಪಕವಾದ ಆರ್ಥಿಕತೆಯಲ್ಲಿ ಎಲ್ಲವನ್ನೂ ಒಳಗೊಂಡಂತೆ ಮತ್ತು ಆನ್‌ಲೈನ್‌ನಲ್ಲಿ ಸುಲಭವಾಗಿ ಪ್ರವೇಶಿಸಿದ ನಂತರ ಅಲ್ಲಿ ಯಾವ ರೀತಿ ಸುರಕ್ಷಿತವಾಗಿ ಇರಬೇಕು ಎಂಬುದರ ಬಗ್ಗೆ ನಾಗರಿಕರಿಗೆ, ಎಂಎಸ್‌ಎಂಇಗಳು ಸೇರಿದಂತೆ ಉದ್ಯಮಗಳಿಗೆ ಸಲಹೆ ಮತ್ತು ತಿಳುವಳಿಕೆಗಳನ್ನು ಕೊಡಬೇಕು.
- ಡಿಜಿಟಲ್ ತಾಂತ್ರಿಕತೆಯನ್ನು ಬಳಸುವ ಎಲ್ಲರನ್ನೂ ಜೀವನ ಪರ್ಯಂತ ಕಲಿಯುವಂತೆ ಪ್ರೋತ್ಸಾಹಿಸಬೇಕು.

ಡಿಜಿಟಲ್ ಪರಿಹಾರಗಳು ಮತ್ತು ಸೇವೆಗಳಲ್ಲಿ ಸುರಕ್ಷತೆ ಬಗ್ಗೆ ಪಠ್ಯಕ್ರಮ ಮತ್ತು ಪಠ್ಯೇತರ ಕ್ರಮಗಳ ಮುಖಾಂತರ ಕಲಿತು ಅದನ್ನು ವೃತ್ತಿಯಾಗಿ ಸ್ವೀಕರಿಸಲು ಯುವ ಜನಾಂಗಕ್ಕೆ, ಪ್ರಮುಖವಾಗಿ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಪ್ರೋತ್ಸಾಹ ನೀಡಬೇಕು.

### 3. ಸಂಶೋಧನೆ ಮತ್ತು ಅಭಿವೃದ್ಧಿ

- ಸಂಶೋಧನೆ ಮತ್ತು ಅಭಿವೃದ್ಧಿ ಮುಂದುವರೆಯುತ್ತಾ ಹೋದಂತೆ ಚೇತರಿಸಿಕೊಳ್ಳುವ ಚೈತನ್ಯವೂ ಬೆಳೆಯುತ್ತಾ ಹೋಗುತ್ತದೆ.
- ಮುಂದುವರಿದ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಸಂಶೋಧನೆಗಳನ್ನು ಪ್ರೋತ್ಸಾಹಿಸಿದರೆ ಅದು ಅಪಾಯಗಳ ವಿರುದ್ಧದ ರಕ್ಷಣೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ.
- ಅಂತಾರಾಷ್ಟ್ರೀಯ ಸಂಸ್ಥೆಗಳ ಸಲಹೆಗಳು ಸೇರಿದಂತೆ ವಿವಿಧ ರೀತಿಯ ಸುರಕ್ಷತೆಯ ಅಪಾಯಗಳನ್ನು ಹೇಗೆ ಎದುರಿಸಬೇಕು ಎಂಬ ಉತ್ತಮವಾದ ನಡವಳಿಕೆಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.
- ಸುರಕ್ಷತೆಗೆ ಸಂಬಂಧಿಸಿದಂತೆ ಡಿಜಿಟಲ್ ಪ್ರತ್ಯೇಕತೆಗಳು ಮತ್ತು ಆರ್ಥಿಕತೆಯ ಮೇಲೆ ಬೀರುವ ಅದರ ಪರಿಣಾಮಗಳನ್ನು ಪ್ರಮಾಣಿಸುವ ಅಧ್ಯಯನಗಳನ್ನು ಪ್ರೋತ್ಸಾಹಿಸಬೇಕು.

### 4. ಹಲವು ಭಾಗಿದಾರರ ಸಹಕಾರ

ಡಿಜಿಟಲ್ ಆರ್ಥಿಕತೆ, ಸುರಕ್ಷತೆಯನ್ನು ಉತ್ತೇಜಿಸಲು ಉದ್ಯಮಗಳು, ನಾಗರಿಕ ಸಮಾಜದ ಸಂಘಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಅಂತಾರಾಷ್ಟ್ರೀಯ ಸಂಸ್ಥೆಗಳು ಹಾಗೂ ತಾಂತ್ರಿಕತೆ ಸಮೂಹಗಳ ಸಹಕಾರ ತೆಗೆದುಕೊಂಡರೆ ಮುಂದಿನಂತೆ ಕ್ರಿಯಾಶೀಲ ಪರಿಸರ ರೂಪುಗೊಳ್ಳುತ್ತದೆ.

- ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವ ಮತ್ತು ಸಹಕಾರಗಳ ಬೆಳವಣಿಗೆಗಳಿಗೆ ಅವಕಾಶ ಸೃಷ್ಟಿ.
- ಡಿಜಿಟಲ್ ಪರಿಸರದಲ್ಲಿ ಸರ್ಕಾರೇತರ ಭಾಗಿದಾರರು ಎದುರಿಸುತ್ತಿರುವ, ಗೊತ್ತಿರುವ ಮತ್ತು ಈಗಾಗಲೇ ಅನುಭವಿಸುತ್ತಿರುವ ಸವಾಲುಗಳ ಮಾದರಿಗಳನ್ನು ಹಂಚಿಕೊಳ್ಳುವ ಮೂಲಕ ಬೆಂಬಲ.
- ಉದ್ಯಮಗಳು ಮತ್ತು ವಿವಿಧ ಕೈಗಾರಿಕಾ ವಲಯಗಳಲ್ಲಿ ನಡೆಯುವ ಘಟನೆಗಳಿಗೆ ಪ್ರತಿಕ್ರಿಯಿಸುವ ತಂಡಗಳೊಂದಿಗೆ ಸಂಪರ್ಕ ಹೊಂದಲು ಅನುಕೂಲ.

### 5. ಅಗತ್ಯ ಸೇವೆಗಳ ಚೇತರಿಕೆ

ಡಿಜಿಟಲ್ ಆರ್ಥಿಕತೆಯಲ್ಲಿ ಕೆಲವು ಅಗತ್ಯವಾದ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಲ್ಲಾಗುವ ಹಾನಿ ಅಥವಾ ತೊಂದರೆಗಳನ್ನು ತಡೆಯುವುದು ಬಹಳ ಮುಖ್ಯವಾದುದು. ಭಾಗಿದಾರರು ಮುಂದಿನ ಉಪಕ್ರಮಗಳಲ್ಲಿ ಭಾಗಿಯಾಗುವುದನ್ನು ಪ್ರೋತ್ಸಾಹಿಸುವುದು ಬಹಳ ಅವಶ್ಯಕ.

- ಡಿಜಿಟಲ್ ಆರ್ಥಿಕತೆಯಲ್ಲಿನ ಸುರಕ್ಷತೆಗೆ ಬರುವ ಬೆದರಿಕೆಯಿಂದ ಸೇವೆಗಳಿಗೆ ರಕ್ಷಣೆ ಒದಗಿಸಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವುದು.
- ಉದ್ಯಮಗಳಲ್ಲಿನ ಅಗತ್ಯ ಸೇವೆಗಳ ಪೂರೈಕೆ ಜಾಲಗಳ ಸುರಕ್ಷತೆಯ ಪ್ರಮಾಣವನ್ನು ಅಂದಾಜು ಮಾಡಲು ಸಾಕ್ಷ್ಯಾಧಾರಗಳನ್ನು ಅವಲಂಬಿಸಿದ ವ್ಯವಸ್ಥೆಯ ನಿರೂಪಣೆ.

### 6. ಎಂಎಸ್ಎಂಇ ಗಳಿಗೆ ಬೆಂಬಲ

ಡಿಜಿಟಲ್ ಆರ್ಥಿಕತೆಯಲ್ಲಿ ಎಂಎಸ್ಎಂಇಗಳ ಪಾತ್ರ ಬಹಳ ಮುಖ್ಯವಾಗಿದೆ ಮತ್ತು ಎಂಎಸ್ಎಂಇಗಳ ಸುರಕ್ಷತೆಯ ಪರಿಸರ ವ್ಯವಸ್ಥೆಯನ್ನು ಬಲಪಡಿಸಬೇಕಿದೆ.

- ಎಂಎಸ್ಎಂಇಗಳಿಗೆ ಹೊಸತನ್ನು ಕಂಡುಹಿಡಿಯುವುದಕ್ಕೆ ಪ್ರೋತ್ಸಾಹಿಸು-ವುದರ ಮೂಲಕ ಸುರಕ್ಷತೆಯ ಪರಿಹಾರಗಳು ಮತ್ತು ಸೇವೆಗಳನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗಿ ಇನ್ನೂ ಎತ್ತರಕ್ಕೆ ಬೆಳೆಯಲು ಅವಕಾಶ ಕಲ್ಪಿಸಬೇಕು.
- ಡಿಜಿಟಲ್ ಪರಿಸರದಲ್ಲಿ ಸುರಕ್ಷತೆಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಎಂಎಸ್ಎಂಇಗಳಿಗೆ ಮಾರ್ಗದರ್ಶನ ಮತ್ತು ಬೆಂಬಲ ಕೊಡಬೇಕು.

ಡಿಜಿಟಲ್ ಆರ್ಥಿಕತೆಯಲ್ಲಿ ತಲೆದೋರುವ ಪ್ರಮುಖವಾದ ಅಪಾಯಗಳು ಸಮಾಜದಲ್ಲಿ ತೊಂದರೆಗಳಿಗೆ ಸಿಲುಕಿಕೊಳ್ಳಬಹುದಾದ ವರ್ಗಗಳಾದ ಅದರಲ್ಲೂ ಮುಖ್ಯವಾಗಿ ಮಕ್ಕಳು ಮತ್ತು ಯುವ ಜನರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಒಂದೆಡೆ ಈ ಸೂಕ್ಷ್ಮ ವರ್ಗಗಳು ಡಿಜಿಟಲ್ ಉಪಕರಣಗಳು ಮತ್ತು ಸೇವೆಗಳಿಗೆ ತೆರೆದುಕೊಳ್ಳುವುದು ಒಂದೆಡೆ ಕಲಿಕೆಯ ಅನುಭವಗಳನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾದರೆ ಮತ್ತೊಂದೆಡೆ ಸಹಯೋಗದಿಂದ ಕೆಲಸ ಮಾಡಲು ಸೈಬರ್ ದಬ್ಬಾಳಿಕೆ ಮತ್ತು ಪಳಗುವಿಕೆ, ಲೈಂಗಿಕ ಶೋಷಣೆ ಹಾಗೂ ಮಾಹಿತಿ ಖಾಸಗಿತನದ ದುರ್ಬಳಕೆಗಳಂತಹ ಅಪಾಯಗಳಿಗೆ ತೆರೆದುಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ತಾಂತ್ರಿಕತೆ ಬಳಸಿಕೊಂಡು ನಡೆಸಬಹುದಾದ ಲಿಂಗ ಆಧರಿತ ಹಿಂಸಾಚಾರಗಳಿಗೆ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತೊಂದರೆಗೆ ಸಿಲುಕಿಕೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳು ಮತ್ತು ಯುವ ಜನರನ್ನು ಸಬಲಗೊಳಿಸುವ ನಿಟ್ಟಿನಲ್ಲಿ ಅವರಿಗೆ ಸೈಬರ್ ಶಿಕ್ಷಣ ಮತ್ತು ಸೈಬರ್ ತಿಳಿವಳಿಕೆ ನೀಡುವುದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕಾದ ತುರ್ತು ಅವಶ್ಯಕ ಜವಾಬ್ದಾರಿ ಎಲ್ಲ ಭಾಗಿದಾರರ ಮೇಲಿದೆ. ಮಕ್ಕಳು ಮತ್ತು ಯುವಕರಿಗೆ ಸೈಬರ್ ಶಿಕ್ಷಣ ಮತ್ತು ತಿಳಿವಳಿಕೆ ನೀಡಲು ಜಿ20 ಯ ಭಾರತದ ಅಧ್ಯಕ್ಷತೆಯಲ್ಲಿ ರೂಪಿಸಿರುವ ಟೂಲ್‌ಕಿಟ್ ಎಲ್ಲ ದೇಶಗಳಿಗೆ ಮಾದರಿಯಾಗಿ ಸೇವೆ ಒದಗಿಸಲಿದೆ. ಮಕ್ಕಳ ಹಕ್ಕುಗಳ ವಿಶ್ವಸಂಸ್ಥೆಯ ಸಮಾವೇಶ ಇದನ್ನು ಗುರುತಿಸಿದ್ದು ಡಿಜಿಟಲ್ ಲೋಕದಲ್ಲಿ ಆನ್‌ಲೈನ್ ಸುರಕ್ಷತೆ ಬಗ್ಗೆ ಮಾನವ ಆಧರಿತ ನಿಲುವುಗಳನ್ನು ತೆಗೆದುಕೊಂಡು ಮಕ್ಕಳ ಖಾಸಗಿತನ ಮತ್ತು ವೈಯಕ್ತಿಕ ಮಾಹಿತಿಗಳಲ್ಲಿ ಮಕ್ಕಳ ಗೌರವ ಕಾಪಾಡಲು ಎಲ್ಲ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ಮಹಿಳೆಯರು, ಮಕ್ಕಳು, ಯುವಕರ ಸುರಕ್ಷತೆಯ ಬಗ್ಗೆ ಸಮನ್ವಯದಿಂದ ಕೂಡಿದ ಪ್ರಯತ್ನಗಳು, ಡಿಜಿಟಲ್ ಆರ್ಥಿಕತೆ–ಸುರಕ್ಷತೆ, ನಂಬಿಕೆ ಮತ್ತು ಚೇತರಿಸಿಕೊಳ್ಳುವ ಪ್ರಯತ್ನಗಳಲ್ಲಿ ಬಹು ದೂರ ಸಾಗಿದಂತಾಗುತ್ತದೆ. ಜಿ20 ಸದಸ್ಯ ರಾಷ್ಟ್ರಗಳು ಭಾರತದ ಅಧ್ಯಕ್ಷತೆಯಲ್ಲಿ ಈ ಮಾರ್ಗವನ್ನು ಅನುಸರಿಸಿ ಡಿಜಿಟಲ್ ಸಾರ್ವಜನಿಕ ಮೂಲಸೌಲಭ್ಯಗಳು ಎಲ್ಲರಿಗೆ ದೊರೆಯುವಂತಾಗಿ ಜನರ ಸಬಲೀಕರಣದೊಂದಿಗೆ ಸದೃಢವಾದ ಡಿಜಿಟಲ್ ಆರ್ಥಿಕತೆ ಸುರಕ್ಷತೆ, ಭದ್ರತೆ ಮತ್ತು ನಂಬಿಕೆಗಳ ಸವಾಲುಗಳನ್ನು ಎದುರಿಸುವಂತಾಗಬೇಕು. ಈ ರೀತಿಯ ಡಿಜಿಟಲ್ ಬದಲಾವಣೆ ನಿಜವಾದ ಅರ್ಥದಲ್ಲಿ 'ವಸುಧೈವ ಕುಟುಂಬಕಂ' – ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯ – ಗುರಿ ಸಾಧಿಸಲು ನೆರವಾಗುತ್ತದೆ.

# ಡಿಜಿಟಲ್ ಮೂಲ ಸೌಕರ್ಯ ಮತ್ತು ಸಾರ್ವಜನಿಕ ಸಹಭಾಗಿತ್ವ

* ಆಕಾಶ್ ತ್ರಿಪಾಠಿ

**ಸಾರ್ವಜನಿಕರಿಗೆ ಡಿಜಿಟಲ್ ಮೂಲ ಸೌಕರ್ಯವನ್ನು ಕಲ್ಪಿಸುವ ಪ್ರಯತ್ನವನ್ನು ಭಾರತ ಸರ್ಕಾರವು ಆಧಾರ್ ಮತ್ತು ಜೆಎಎಂ-ಜಾಮ್ ತ್ರಿವಳಿ ಉಪಕ್ರಮಗಳ ಮೂಲಕ ಮಾಡಿದೆ. ಇದು ಕೇವಲ ಆರ್ಥಿಕ ಬೆಳವಣಿಗೆ ಮಾತ್ರವಲ್ಲದೆ ಪಾರದರ್ಶಕ ಡಿಜಿಟಲ್ ಬದಲಾವಣೆಗೆ ಮಾದರಿಯಾಗಿದೆ. ಕೇಂದ್ರೀಕೃತ ಪಾವತಿ ವ್ಯವಸ್ಥೆ (ಯು.ಪಿ.ಐ) ಮತ್ತಿತರ ಡಿಜಿಟಲ್ ಪಾವತಿ ಕ್ರಮಗಳು ತಾಂತ್ರಿಕತೆಯನ್ನು ಸಮರ್ಥವಾಗಿ ಬಳಸಿಕೊಂಡು ದೇಶದಲ್ಲಿರುವ ಡಿಜಿಟಲ್ ಅಂತರವನ್ನು ಗಮನಾರ್ಹವಾಗಿ ನಿವಾರಿಸಿ ಪ್ರಯೋಗಶೀಲತೆಗೆ ಮಹತ್ವ ನೀಡುವ ದೇಶದ ನಾಯಕತ್ವದ ಬದ್ಧತೆಗೆ ನಿದರ್ಶನವಾಗಿದೆ.**



ಜಗತ್ತಿನಲ್ಲಿ ಡಿಜಿಟಲೀಕರಣಕ್ಕೆ ಸಿಗುತ್ತಿರುವ ಮನ್ನಣೆಯಿಂದ ಬಲಶಾಲಿಯಾದ ಸಾರ್ವಜನಿಕ ಸೇವಾ ಡಿಜಿಟಲ್ ಮೂಲ ಸೌಕರ್ಯಕ್ಕೆ ಮಹತ್ವ ಬಂದಿದೆ. ಇದು ಸದೃಢತೆ, ಸಾರ್ವಜನಿಕ ಸೇವೆಯಲ್ಲಿನ ಸ್ಪಷ್ಟತೆ ಮತ್ತು ಹೊಸ ಪ್ರಯೋಗಗಳಿಗೆ ಅವಕಾಶ ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಇದರ ಮೂಲ ಉದ್ದೇಶ ವಿವಿಧ ರಂಗಗಳಲ್ಲಿ ಪ್ರಾಥಮಿಕ ಘಟ್ಟದಲ್ಲಿಯೇ ಮೂಲ ಸೌಕರ್ಯಗಳನ್ನು ಒದಗಿಸುವುದು, ನಗರದ ಮಾನವ ಸಂಪನ್ಮೂಲ ಕೇಂದ್ರಿತ ವ್ಯವಸ್ಥೆಯಿಂದ ಹಳ್ಳಿಯ ಕೃಷಿ ಅವಲಂಬಿತ ವ್ಯವಸ್ಥೆಯವರೆಗೆ ಎಲ್ಲಾ ಘಟಕಗಳೂ ಬದ್ಧತೆ ಮತ್ತು ವಿಶ್ವಾಸಾರ್ಹತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವುದು, ಆ ಮೂಲಕ ಡಿಜಿಟಲ್ ವ್ಯವಸ್ಥೆ ಇಡೀ ಆರ್ಥಿಕ ರಂಗವನ್ನು ಸದೃಢವಾಗಿ ಇರುವಂತೆ ಮಾಡುವುದಾಗಿದೆ.

ತಾಂತ್ರಿಕತೆಯ ವಿಸ್ತಾರ ಮತ್ತು ಸಾರ್ವಜನಿಕ ರಂಗದಲ್ಲಿನ ಡಿಜಿಟಲ್ ಮೂಲ ಸೌಕರ್ಯ ಕುರಿತಂತೆ ಭಾರತದ ನಾಯಕತ್ವದಲ್ಲಿ ಜಿ20 ದೇಶಗಳ ನಾಯಕರು ತೆಗೆದು ಕೊಂಡಿರುವ ನಿರ್ಣಯವು ಡಿಜಿಟಲ್ ಅಂತರವನ್ನು ಪರಿಣಾಮಕಾರಿಯಾಗಿ ಸರಿ ಪಡಿಸಿ ಒಳಗೊಳ್ಳುವಂತಹ ಮತ್ತು ಸದೃಢ ಅಭಿವೃದ್ಧಿಯನ್ನು ಸಾಧಿಸುವಲ್ಲಿ ತಂತ್ರಜ್ಞಾನವು ವಹಿಸ ಬಹುದಾದ ಮುಖ್ಯ ಪಾತ್ರವನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಲೇಖನವು ಸಾರ್ವಜನಿಕರ ಭಾಗವಹಿಸುವಿಕೆ, ಎಲ್ಲರನ್ನೂ ಒಳಗೊಳ್ಳಲು ನೀಡಿರುವ ಒತ್ತು, ಸುರಕ್ಷತೆ ಮತ್ತು ಡಿಜಿಟಲ್ ಪರಿಸರಸ್ನೇಹಿ ವ್ಯವಸ್ಥೆಯ ಉತ್ತರದಾಯಿತ್ವದ ಕುರಿತಾದ ಜಿ.20 ರಾಷ್ಟ್ರಗಳ ನಾಯಕರ ನಿರ್ಣಯದ ಮುಖ್ಯ ಅಂಶಗಳನ್ನು ಪರಿಶೀಲಿಸುತ್ತದೆ.

### ಭಾರತದಲ್ಲಿ ಸಾರ್ವಜನಿಕ ರಂಗದಲ್ಲಿನ ಡಿಜಿಟಲ್ ಮೂಲ ಸೌಕರ್ಯ

ಜಿ20 ದೇಶಗಳ ಅಧ್ಯಕ್ಷತೆಯಿಂದ ಭಾರತವು 'ವಸುಧೈವ ಕುಟುಂಬಕಂ' ಉಕ್ತಿಯನ್ನು ಘೋಷಣಾ ವಾಕ್ಯವನ್ನಾಗಿಸಿತು. 'ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯ' ಎನ್ನುವ ಅರ್ಥವನ್ನು ಹೊಂದಿದ ಈ ವಾಕ್ಯವು ಆರ್ಥಿಕವಾಗಿ ಎಲ್ಲರನ್ನೂ ಒಳಗೊಳ್ಳುವ ಎಲ್ಲರಿಗೂ ಭವಿಷ್ಯದ ಕುರಿತು ಒಂದೇ ಕನಸನ್ನು ನೀಡುವ ಸಮಾನತೆಯ ಭಾವವನ್ನು ಬಿಂಬಿಸಿತ್ತು. ಇದು ಗ್ಲೋಬಲ್ ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್ಸ್ (ಜಿ.ಡಿ.ಪಿ.ಐ.ಆರ್) ಮೂಲಕ ಡಿಜಿಟಲ್ ಒಕ್ಕೂಟದ ವ್ಯವಸ್ಥೆಯನ್ನು ರೂಪಿಸುವ ಭಾರತದ ಆಶಯಕ್ಕೆ ಅನುಗುಣವಾಗಿಯೇ ಇದೆ. ಭಾರತದಲ್ಲಿ ಆಧಾರ್, ಮೊಬೈಲ್ ಫೋನ್ ಮೂಲಕ ಹೊಂದುವ ಜನಧನ್ ಖಾತೆಗಳು ಜನ ಸಾಮಾನ್ಯರಲ್ಲಿ ಡಿಜಿಟಲ್ ಸುರಕ್ಷತೆಯನ್ನು ಮೂಡಿಸುವ ಬಹಳ ಮುಖ್ಯವಾದ ಪ್ರಯತ್ನಗಳಾಗಿವೆ. ಜಾಮ್ ತ್ರಿವಳಿಯು ಹಣಕಾಸು ವ್ಯವಹಾರದಲ್ಲಿ ಎಲ್ಲರನ್ನೂ ಒಳಗೊಳ್ಳುವ ಮಹತ್ವದ ಪ್ರಯತ್ನವಾಗಿದ್ದು 2008ರಲ್ಲಿ ಶೇ 25ರಷ್ಟು ಇದ್ದ ಡಿಜಿಟಲ್ ಸಾಕ್ಷರತೆಯು ಕಳೆದ ಆರು ವರ್ಷಗಳಲ್ಲಿ ಶೇ 80ರಷ್ಟನ್ನು ತಲುಪಿದೆ. ಡಿಜಿಟಲ್ ಸಾರ್ವಜನಿಕ ಸಹಭಾಗಿತ್ವದ ಯೋಜನೆಗಳು ಇಲ್ಲದೆ ಹೋಗಿದ್ದರೆ ಈ ಪ್ರಯಾಣದ ಬೆಳವಣಿಗೆಗೆ 47 ವರ್ಷಗಳು ಬೇಕಾಗುತ್ತಿತ್ತು ಎನ್ನುವುದು ಒಂದು ಅಂದಾಜು. ನವ ದೆಹಲಿಯ ಜಿ20ರ ನಾಯಕರ ನಿರ್ಣಯವು ಸುರಕ್ಷತೆ, ಸದೃಢತೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಡಿಜಟಲೀಕರಣಕ್ಕೆ ಒತ್ತು ನೀಡಿದೆ. ಆಧಾರ್ ಮತ್ತು ಜಾಮ್ ತ್ರಿವಳಿ (ಜನ್ ಧನ್, ಆಧಾರ್ ಮತ್ತು ಮೊಬೈಲ್ ಫೋನ್‌ಗಳು) ಆರ್ಥಿಕವಾಗಿ ಎಲ್ಲರನ್ನೂ ಒಳಗೊಳ್ಳುವ ಮಹತ್ವದ ಪ್ರಯತ್ನ ಎನ್ನುವುದು ಈಗಾಗಲೇ ಸಾಬೀತಾಗಿದೆ.

### ಏಕೀಕೃತ ಹಣಕಾಸು ವ್ಯವಸ್ಥೆ

ಭಾರತವು ವಿಶ್ವದಲ್ಲಿಯೇ ಅತಿ ದೊಡ್ಡದಾದ ಸರ್ಕಾರದಿಂದ ವ್ಯಕ್ತಿಗೆ ಡಿಜಿಟಲ್ ಪಾವತೀಕರಣ ಮಾಡುವ ವ್ಯವಸ್ಥೆಯನ್ನು ಡಿ.ಪಿ.ಐಗಳ ಮೂಲಕ ಹೊಂದಿದೆ. ಈ

* ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಮೈಗೌ ಭಾರತ ಸರ್ಕಾರ. ಇಮೇಲ್: ceo@my.gov.in




ವ್ಯವಸ್ಥೆಯಿಂದ ಈವರೆಗೂ ಸರಿ ಸುಮಾರು 32.29 ಟ್ರಿಲಿಯನ್ ಹಣವನ್ನು 53 ವಿವಿಧ ಕೇಂದ್ರ ಸರ್ಕಾರದ ಸಚಿವಾಲಯಗಳ ಮುಖಾಂತರ 313 ಯೋಜನೆಗಳ ಮೂಲಕ ಜನ ಸಾಮಾನ್ಯರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಅದರಂತೆ ಏಕೀಕೃತ ಪಾವತಿ ವ್ಯವಸ್ಥೆ (ಯು.ಪಿ.ಐ) ಭಾರತದಲ್ಲಿ ತ್ವರಿತಗತಿಯ ಪಾವತಿಗೆ ಮಹತ್ವದ ವ್ಯವಸ್ಥೆಯಾಗಿ ರೂಪುಗೊಂಡಿದೆ. ಇದರ ಅನ್ವಯ 10.586 ಬಿಲಿಯನ್ ವಹಿವಾಟು ನಡೆದಿದ್ದು ಆಗಸ್ಟ್ 2023ರ ಅಂತ್ಯದವರೆಗೂ ರೂ 15.76 ಟ್ರಿಲಿಯನ್ ವ್ಯವಹಾರವು ನಡೆದಿರುವುದು ದಾಖಲಾಗಿದೆ. ಈ ವ್ಯವಸ್ಥೆಯು ಈಗ ಭಾರತಕ್ಕೆ ಹನ್ನೊಂದು ದೇಶಗಳೊಂದಿಗೆ ಡಿಜಿಟಲ್ ಸಂಪರ್ಕವನ್ನು ಕಲ್ಪಿಸಿದೆ. (ಫ್ರಾನ್ಸ್, ಸಿಂಗಾಪುರ, ಆಸ್ಟ್ರೇಲಿಯಾ, ಕೆನಡಾ, ಹಾಂಗ್‌ಕಾಂಗ್, ಒಮಾನ್, ಕತಾರ್, ಅಮೆರಿಕಾ ಸಂಯುಕ್ತ ಸಂಸ್ಥಾನ, ಯನೈಟೆಡ್ ಅರಬ್ ಎಮರೇಟ್ಸ್ ಮತ್ತು ಯುನೈಟೆಡ್ ಕಿಂಗ್‌ಡಂ)ಇದು ಜಿ20 ರಾಷ್ಟ್ರಗಳ ಸಹಭಾಗಿತ್ವದ ಪ್ರಯತ್ನಕ್ಕೆ ಪೂರಕವಾಗಿಯೇ ಇದೆ. ಈ ಸಂಪರ್ಕವು ದೇಶಾಂತರ ಆರ್ಥಿಕ ವ್ಯವಹಾರದಲ್ಲಿ ವೇಗ, ಮಿತವ್ಯಯ ಮತ್ತು ದೂರದ ಪಾರದರ್ಶಕ ಪಾವತಿ ಒದಗಿಸಿ ಕೊಟ್ಟಿದೆ. ಡಿ.ಪಿ.ಐ ಉದ್ಯಮವು ನೀಡುವ ಸೇವೆ, ಮಾಪನದಲ್ಲಿನ ಗುಣಾತ್ಮಕ ಅಂಶಗಳು, ದಕ್ಷತೆ ಮತ್ತು ಅನ್ವೇಷಣೆ ಎಲ್ಲವನ್ನೂ ಕ್ರಿಯಾಶೀಲಗೊಳಿಸುವ ಶಕ್ತಿಯನ್ನು ಹೊಂದಿದೆ. ಆದರೆ ಡಿ.ಪಿ.ಐಗಳ ದಕ್ಷತೆಯನ್ನು ಗುರುತಿಸುವುದು ಉದ್ಯಮ ಮತ್ತು ನೀತಿ ನಿರೂಪಕರ ನಡುವೆ ಇರುವ ಹೊಂದಾಣಿಕೆಯನ್ನು ಅವಲಂಬಿಸಿರುತ್ತದೆ.

### ಭಾರತದ ಸ್ಟಾಕ್ ಮತ್ತು ಅಕೌಂಟ್ ಅಗ್ರಿಗೇಟರ್ ವ್ಯವಸ್ಥೆ

ಭಾರತದ ಡಿ.ಪಿ.ಐನ ಮೂಲಭೂತ ಅಂಶವಾಗಿರುವುದು ಭಾರತೀಯ ಸುಸಂಬಂಧಿತ ಜೋಡಣೆ – ಸ್ಟಾಕ್. ಇದು ಅನ್ವೇಷಣೆಗೆ ಪೂರಕವಾಗಿರುವುದು ಮಾತ್ರವಲ್ಲದೆ ಆರೋಗ್ಯಕರ ಪೈಪೋಟಿಗೆ ಇಂಬು ನೀಡುತ್ತದೆ. ಇದು ಮಾರುಕಟ್ಟೆಯ ತಲುಪುವಿಕೆಯನ್ನು ವಿಸ್ತರಿಸುವುದು ಮಾತ್ರವಲ್ಲದೆ ಆರ್ಥಿಕ ತಾರತಮ್ಯಗಳು, ತೆರಿಗೆ ಸಂಗ್ರಹಣದಲ್ಲಿನ ಹೆಚ್ಚಳ, ಸಾರ್ವಜನಿಕ ವೆಚ್ಚದ ಸಮತೋಲನ ಮೊದಲಾದ ಆರ್ಥಿಕ ಸಂಗತಿಗಳ ಕಡೆಗೆ ಗಮನವನ್ನು ನೀಡುತ್ತದೆ. ಇದು ಅತ್ಯಾಧುನಿಕಗೊಂಡ, ಸುವ್ಯವಸ್ಥಿತವಾದ ನಿಮ್ಮ ಗ್ರಾಹಕರನ್ನು ತಿಳಿಯಿರಿ (ಇ.ಕೆ.ವೈ.ಸಿ) ಪ್ರಕ್ರಿಯೆಯಾಗಿದೆ. ಇದುವರೆಗೂ 16.47 ಬಿಲಿಯನ್ ಇ.ಕೆ.ವೈ.ಸಿ ವಹಿವಾಟುಗಳು ನಡೆದಿದ್ದು 232 ಇ.ಕೆ.ವೈ.ಸಿ ದೃಢೀಕರಣ ಸಂಸ್ಥೆಗಳ ಮೂಲಕ ನಡೆದಿದೆ. ಭಾರತದ ಈ ಹಣಕಾಸು ನಿರ್ವಾಹಕ ಪದ್ಧತಿಯು ತನ್ನ ಎಲ್ಲಾ ಹಣಕಾಸು ಮಾಹಿತಿಗಳನ್ನು ಕ್ರೋಢೀಕರಿಸಿದ್ದು ಯಾವುದೇ ಮಾಹಿತಿಯನ್ನು ಗ್ರಾಹಕರ ಒಪ್ಪಿಗೆ ಇಲ್ಲದೆ ಹಂಚಿ ಕೊಳ್ಳುವುದು ಸಾಧ್ಯವಿರುವುದಿಲ್ಲ.

### ಕ್ರಿಯಾಸೂಚಿ ಸೂತ್ರಗಳು

ಭಾರತವು ತೆಗೆದು ಕೊಂಡ ಕ್ರಮಗಳು ಡಿಜಿಟಲ್ ಮೂಲ ಸೌಕರ್ಯಗಳನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದು ತಾಂತ್ರಿಕ ವರ್ಗಾವಣೆ ಮತ್ತು ಡಿಜಿಟಲ್ ಸಾರ್ವಜನಿಕ ಮೂಲ ಸೌಕರ್ಯವನ್ನು ಒದಗಿಸುವಂತಹ ಜಿ20 ರಾಷ್ಟ್ರನಾಯಕರ ಘೋಷಣೆಗೆ ಪೂರಕವಾಗಿಯೇ ಇದೆ. ಕೆಲವು ಮುಖ್ಯ ಅಂಶಗಳೆಂದರೆ

**1. ಡಿಜಿಟಲ್ ಪ್ರಾರಂಭಿಕ ಕ್ರಮ ಮತ್ತು ಭಾರತ್ ನೆಟ್ ಪ್ರಾಜೆಕ್ಟ್:** ಡಿಜಿಟಲ್ ಇಂಡಿಯಾ ಕುರಿತಾದ ಮೊದಲ ಉಪಕ್ರಮಗಳನ್ನು ಭಾರತದಲ್ಲಿ 2015ರಲ್ಲಿ ಆರಂಭಿಸಲಾಯಿತು. ಡಿಜಿಟಲ್ ಮೂಲ ಸೌಕರ್ಯ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಇದರಲ್ಲಿ ಅಳವಡಿಸಲಾಗಿತ್ತು. ಗಮನಿಸ ಬೇಕಾದ ಸಂಗತಿ ಎಂದರೆ ಇದು ಜಿ20 ಘೋಷಣೆಗೆ ಪೂರಕವಾಗಿಯೇ ಇದೆ. 11 ಸೆಪ್ಟಂಬರ್ 2023ಕ್ಕೆ ಅನ್ವಯವಾಗುವಂತೆ ಭಾರತ್ ನೆಟ್ ಯೋಜನೆಯು ಯಶಸ್ವಿಯಾಗಿ 202,028 ಗ್ರಾಮ ಪಂಚಾಯತಿಗಳನ್ನು ಜೋಡಿಸಿದ್ದು ಇದಕ್ಕಾಗಿ 658,789 ಕಿಲೋ ಮೀಟರ್‌ಗಳಷ್ಟು ಉದ್ದದ ಅಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಜೋಡಿಸಲಾಗಿದ್ದು 643,789 ಫೈಬರ್–ಟು–ದಿ–ಹೋಂ ಜೋಡಣೆಗಳನ್ನು ಸಕ್ರಿಯಗೊಳಿಸಲಾಗಿದೆ. 104,675 ವೈ–ಫೈ ಹಾಟ್ ಸ್ಪಾಟ್‌ಗಳನ್ನು ಜೋಡಿಸಲಾಗಿದ್ದು ಕೊನೆಯ ಮೈಲಿಯೂ ಕೂಡ ಡಿಜಿಟಲ್ ಸಂಪರ್ಕ ಪಡೆಯುವಂತಾಗುವ ಎಲ್ಲಾ ಕಾಳಜಿಯನ್ನೂ ವಹಿಸಲಾಗಿದೆ.

**2.ಪ್ರಧಾನ ಮಂತ್ರಿ ಜನ್‌ಧನ್ ಯೋಜನ (ಪಿ.ಎಂ.ಜೆ.ಡಿ.ವೈ):** ಪಿಎಂ. ಜೆ.ಡಿ.ಐ ಆರ್ಥಿಕ ಒಳಗೊಳ್ಳುವಿಕೆಯ ಪ್ರಕ್ರಿಯೆ

ಮತ್ತು ಡಿಜಿಟಲೀಕರಣದ ಯೋಜನೆಗಳಲ್ಲಿ ಮುಖ್ಯಪಾತ್ರವನ್ನು ವಹಿಸಿದೆ. ಇದೂ ಕೂಡ ಸಾರ್ವಜನಿಕ ಸಹಭಾಗಿತ್ವ ಕುರಿತ ಜಿ20 ಘೋಷಣೆಗೆ ಪೂರಕವಾಗಿದೆ. 13 ಸೆಪ್ಟಂಬರ್ 2023ಕ್ಕೆ ಅನ್ವಯವಾಗುವಂತೆ ಪಿ.ಎಂ.ಜೆ.ಡಿ.ವೈ ಯೋಜನೆಯಲ್ಲಿ ವಿವಿಧ ಬ್ಯಾಂಕ್‌ಗಳಾದ ಸಾರ್ವಜನಿಕ ರಂಗದ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕ್‌ಗಳು, ಖಾಸಗಿ ಬ್ಯಾಂಕ್‌ಗಳು ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳ ಮೂಲಕ 50.41 ಕೋಟಿ ಫಲಾನುಭವಿಗಳು ಈ ಯೋಜನೆ ಪ್ರಯೋಜನ ಪಡೆದಿದ್ದಾರೆ. ಅವರಲ್ಲಿ 27.98 ಕೋಟಿ ಮಹಿಳೆಯರೂ ಸೇರಿದ್ದಾರೆ. ಈ ಯೋಜನೆಯ ಒಟ್ಟು ಮೊತ್ತ ರೂ. 20,494.18 ಬಿಲಿಯನ್ ಆಗಿದೆ. ಇದರ ಜೊತೆಗೆ 34.26 ಕೋಟಿ ರುಪೇ ಡೆಬಿಟ್ ಕಾರ್ಡ್‌ಗಳನ್ನು ನೀಡಲಾಗಿದೆ.

**3. ಮೇಕ್ ಇನ್ ಇಂಡಿಯಾ:** 'ಮೇಕ್ ಇನ್ ಇಂಡಿಯಾ' ಘೋಷಣೆಯು ಭಾರತದ ಆಮದಿನ ಮೇಲಿನ ಅವಲಂಬನೆ ತಗ್ಗಿಸಿ ತಾಂತ್ರಿಕ ಬೆಳವಣಿಗೆಯ ಕುರಿತ ತನ್ನ ಮೇಲೆ ನಂಬಿಕೆಯನ್ನು ಹೆಚ್ಚಿಸಿ ಕೊಳ್ಳುವುದಕ್ಕೆ ಕಾರಣವಾಯಿತು. ಇದೂ ಕೂಡ ಅನ್ವೇಷಣೆಯ ಕುರಿತಾದ ಜಿ20 ಘೋಷಣೆಗಳಿಗೆ ಅನುಗುಣವಾಗಿಯೇ ಇದೆ. ತಾಂತ್ರಿಕ ವರ್ಗಾವಣೆ, ಡಿಜಿಟಲ್ ವಾತಾವರಣದ ಸೃಷ್ಟಿಯನ್ನು ಇದು ಸಾಧ್ಯವಾಗಿಸಿತು. 374,576 ಉದ್ಯಮ ಬೇಡಿಕೆಗಳು ಮತ್ತು ಹೂಡಿಕೆಗಳು ಬಂದಿದ್ದು ಒಟ್ಟಾಗಿ $201.12 ಬಿಲಿಯನ್ ವಹಿವಾಟು ಆಗಿದೆ. ಇದು ಎಲೆಕ್ಟ್ರಾನಿಕ್ಸ್ ಮತ್ತು ಡಿಜಿಟಲ್ ವಸ್ತುಗಳು ಸ್ಥಳೀಯವಾಗಿ ಉತ್ಪಾದನೆಯಾಗಲು ಪ್ರೋತ್ಸಾಹಕವಾಯಿತು. ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ ತಂತ್ರಜ್ಞಾನದ ಕುರಿತ ದೇಶದ ಸ್ವಾವಲಂಬನೆ ನಂಬಿಕೆಯನ್ನು ಹೆಚ್ಚಿಸಿತು. ಈ ಬೆಳವಣಿಗೆಯು 464,267 ನೈಜ ಉದ್ಯೋಗಗಳ ಸೃಷ್ಟಿಗೂ ಕಾರಣವಾಯಿತು.

**4. ಸ್ಟಾರ್ಟ್ ಅಪ್ ಇಂಡಿಯಾ:** ಸ್ಟಾರ್ಟ್ ಅಪ್ ಇಂಡಿಯಾ, ಉದ್ಯಮವನ್ನು ಕ್ರಿಯಾಶೀಲಗೊಳಿಸುವುದರೊಂದಿಗೆ ಅನ್ವೇಷಣೆಯ ಕಡೆಗೂ ಕರೆದು ಕೊಂಡು ಬಂದಿತು. ಇದೂ ಕೂಡ ಜವಾಬ್ದಾರಿಯುತ ಮತ್ತು ಎಲ್ಲರನ್ನೂ ಒಳಗೊಳ್ಳುವ ಡಿಜಿಟಲ್ ತಂತ್ರಜ್ಞಾನದ ಜಿ20 ಆಶಯಕ್ಕೆ ಅನುಗುಣವಾಗಿಯೇ ಇದೆ. 99,380 ಡಿ.ಪಿ.ಐ.ಐ.ಟಿ ಗುರುತಿಸಲ್ಪಟ್ಟ ಸ್ಟಾರ್ಟ್ ಅಪ್‌ಗಳು 664,486 ಸ್ಟಾಟ್ ಅಪ್ ಇಂಡಿಯಾ ಪೋರ್ಟಲ್‌ನಲ್ಲಿ ನೊಂದಾಯಿತ ಸದಸ್ಯರನ್ನು ಪಡೆದಿತ್ತು ಇದು ಹೂಡಿಕೆ, ಪ್ರಾಯೋಜಕತೆ, ಮತ್ತು ನಿರಂತರ ಸುಧಾರಣೆಯನ್ನು ಒಳಗೊಂಡು 31 ಮೇ 2023ಕ್ಕೆ ಅನ್ವಯವಾಗುವಂತೆ $340.80 ಬಿಲಿಯನ್ ವಹಿವಾಟನ್ನು 108 ಯೂನಿಕಾರ್ನ್‌ಗಳ ಮೂಲಕ ಪಡೆದು ಕೊಂಡಿತ್ತು. ಸ್ಟಾರ್ಟ್ ಅಪ್‌ಗಳು ಭಾರತದ ಡಿಜಿಟಲ್ ಎಕೊ ಸಿಸ್ಟಂಗೆ ಗಮನಾರ್ಹ ಕೊಡುಗೆಯನ್ನು ನೀಡಿದ್ದು ಈ ಅಂಕಿ–ಅಂಶಗಳೇ ಯೋಜನೆಯ ಯಶಸ್ಸಿಗೆ ಕೈಗನ್ನಡಿಯಾಗಿವೆ.

**5. ಸ್ಮಾರ್ಟ್ ಸಿಟಿಗಳ ಯೋಜನೆ:** ನಗರಗಳ ಬೆಳವಣಿಗೆಗಳನ್ನು ಗಮನದಲ್ಲಿರಿಸಿ ಸ್ಮಾರ್ಟ್ ಸಿಟಿ ಯೋಜನೆಯು ಡಿಜಿಟಲ್ ಮೂಲ ಸೌಕರ್ಯಗಳ ಬೆಳವಣಿಗೆಗೆ ಒತ್ತನ್ನು ನೀಡಿತು. ಇದೂ ಕೂಡ ಡಿ.ಪಿ.ಐಗಳನ್ನು ಬೆಳೆಸುವ ಜಿ20 ಸನ್ನದಿನ ವಿಸ್ತರಣೆಯೇ ಆಗಿದೆ. ಸ್ಮಾರ್ಟ್ ಸಿಟಿ ಯೋಜನೆಯು 100 ಉದ್ದೇಶಿತ ನಗರಗಳನ್ನು ಹೊಂದಿದ್ದು ಒಟ್ಟು 7,934 ಯೋಜನೆಗಳನ್ನು ಒಳಗೊಂಡಿದ್ದು ಇದರ ಒಟ್ಟು ವೆಚ್ಚ ಅಂದಾಜು ರೂ 170,392 ಕೋಟಿಗಳಾಗಿದೆ. ಈ ಯೋಜನೆ ಅನ್ವಯ ಆಯ್ದ ನಗರಗಳ ಡಿಜಿಟಲ್ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ವೈ–ಫೈ ಹಾಟ್ ಸ್ಪಾಟ್‌ಗಳನ್ನು ಸ್ಥಾಪಿಸಲಾಗುವುದು, ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣ ಮಾಡಲಾಗುವುದು. ಪ್ರತಿ ಯೋಜನೆಯೂ ನಗರವಾಸದ ಭೌತಿಕ ಮತ್ತು ಡಿಜಿಟಲ್ ನೆಲೆಗಳನ್ನು ಗಟ್ಟಿಗೊಳಿಸುವ ಪ್ರಯತ್ನವಾಗಿದೆ.

**6. ಆಧಾರ್ :** ಜಿ20 ರಾಷ್ಟ್ರಗಳ ನಿರ್ಣಯದಲ್ಲಿ ಮಾಹಿತಿಯ ಗೌಪ್ಯತೆಯನ್ನು ಕಾಪಾಡುವುದು, ಖಾಸಗಿತನವನ್ನು ಉಳಿಸಿಕೊಳ್ಳುವುದು, ಡಿಜಿಟಲ್ ಮೂಲ ಸೌಕರ್ಯಗಳನ್ನು ಜನ ಸಾಮಾನ್ಯರು ಪಡೆಯುವುದೂ ಸೇರಿದೆ. ಭಾರತದ ಆಧಾರ್ ಯೋಜನೆಯು ಗುರುತಿನ ಪರಿಶೀಲನೆಯನ್ನು ಮಾಡಿ ಖಚಿತ ಪಡಿಸುವ ಮೂಲಕ ಡಿಜಿಟಲ್ ಸೇವೆಗಳನ್ನು ಒದಗಿಸುವ ಬೃಹತ್ ಯೋಜನೆಯಾಗಿದ್ದು ಇದರ ಉದ್ದೇಶವೂ ಅದೇ ಆಗಿದೆ. ಇತ್ತೀಚಿನ ಅಂಕಿ–ಅಂಶಗಳನ್ನು ಪರಿಗಣಿಸಿದರೂ 1.38 ಬಿಲಿಯನ್ ಆಧಾರ್ ಸಂಖ್ಯೆಗಳು ರೂಪುಗೊಂಡಿದ್ದು 788.64 ಮಿಲಿಯನ್ ಆಧಾರ್ ದಾಖಲೆಗಳು ಸೃಷ್ಟಿಯಾಗಿವೆ. 100.33 ಬಿಲಿಯನ್ ಗುರುತು ಖಚಿತ ಪಡಿಸುವಿಕೆಯ ಕ್ರಮ ಮುಗಿದಿದ್ದು 16.42 ಇ.ಕೆ.ವೈ.ಸಿ ದಾಖಲಾತಿ ಕ್ರಮಗಳು ಮುಗಿದಿವೆ. ಈ ಅಂಕಿ ಅಂಶಗಳೇ ಭಾರತದಲ್ಲಿ ಡಿಜಿಟಲ್ ಮೂಲ ಸೌಕರ್ಯಗಳು ಸುಲಲಿತವಾಗಿ ಜಾರಿಗೊಳ್ಳುತ್ತಿರುವುದಕ್ಕೆ ನಿದರ್ಶನವಾಗಿದೆ.

**7. ಉಮಂಗ್ ಮತ್ತು ಡಿಜಿಲಾಕರ್:** ಉಮಂಗ್ ಆಪ್ ಜಿ20 ನಿರ್ಣಯಕ್ಕೆ ಪೂರಕವಾಗಿದ್ದು ಸುರಕ್ಷಿತ, ಏಕೀಕೃತ ಸರ್ಕಾರಿ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುತ್ತಿದೆ. 313 ಇಲಾಖೆಗಳ 1,745 ಸೇವೆಗಳನ್ನು(898 ಕೇಂದ್ರ ಸರ್ಕಾರದ 847 ರಾಜ್ಯ ಸರ್ಕಾರದ ಸೇವೆಗಳು) 56 ಮಿಲಿಯನ್ ನೊಂದಾಯಿತ ಗ್ರಾಹಕರು 3.849 ಬಿಲಿಯನ್ ವಹಿವಾಟಿನ ಮೂಲಕ ಪಡೆದು ಕೊಂಡಿದ್ದಾರೆ. ಈ ಅಂಶವೇ ಭಾರತದಲ್ಲಿ






ಸರ್ಕಾರ ಮತ್ತು ನಾಗರಿಕರ ನಡುವಿನ ಡಿಜಿಟಲ್ ಸಂವಹನ ಎಷ್ಟು ಗಟ್ಟಿಯಾಗಿದೆ ಎನ್ನುವುದಕ್ಕೆ ನಿದರ್ಶನವಾಗಿದೆ. ಅದೇ ರೀತಿಯಲ್ಲಿ ಡಿಜಿಟಲ್ ಲಾಕರ್ ಕಾಗದರಹಿತ ಸರ್ಕಾರಿ ಸೇವೆಯಾಗಿದ್ದು ನಾಗರಿಕರಿಗೆ ಅವರ ನೊಂದಾಯಿತ ಡಿಜಿಟಲ್ ಲಾಕರ್ ಅಕೌಂಟ್‌ಗಳ ಮೂಲಕ ಅಧಿಕೃತ ಡಿಜಿಟಲ್ ದಾಸ್ತಾವೇಜುಗಳನ್ನು ನೀಡಲಾಗುತ್ತದೆ.

**8. ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ (ಸಿ.ಬಿ.ಡಿ.ಸಿ) :** ಡಿಜಿಟಲ್ ಕರೆನ್ಸಿಯನ್ನು ಬಿಡುಗಡೆ ಮಾಡುವ ಮೂಲಕ ರಿಸರ್ವ್ ಬ್ಯಾಂಕ್ ಜಿ20 ನಾಯಕರ 2023ನೆಯ ಸಾಲಿನ ಘೋಷಣೆಗೆ ಭಾರತದ ಬದ್ಧತೆ ತೋರಿದೆ. ಜಿ20 ನಾಯಕರ ಘೋಷಣೆಯಲ್ಲಿ ಚಿಕ್ಕ ಹಣಕಾಸು ಘಟಕಗಳ ಸಮಸ್ಯೆಗಳ ಮೇಲೆ ಬೆಳಕನ್ನು ಚೆಲ್ಲಲಾಗಿತ್ತು. ಮುಖ್ಯವಾಗಿ ಗಡಿಯಾಚೆಗಿನ ಪಾವತಿ ಮತ್ತು ಜಾಗತಿಕ ಹಣಕಾಸು ವ್ಯವಸ್ಥೆಯ ಮೇಲೆ ಅದು ಬೀರುವ ಪರಿಣಾಮಗಳನ್ನು ಅದು ಗಮನದಲ್ಲಿರಿಸಿತ್ತು. ರಿಸರ್ವ್ ಬ್ಯಾಂಕ್ ನೀಡಿರುವ ಕಾನೂನಾತ್ಮಕ ಡಿಜಿಟಲ್ ಟೋಕನ್ ಭಾರತವು ಡಿಜಿಟಲ್ ಸಮಸ್ಯೆಗಳ ಕುರಿತು ಇಟ್ಟಿರುವ ಕಾಳಜಿಯನ್ನು ತೋರಿಸುತ್ತದೆ. ಇದು ಆಧುನಿಕ ಡಿಜಿಟಲ್ ಯುಗಕ್ಕೆ ತೆರೆದು ಕೊಳ್ಳುವುದರ ಜೊತೆಗೆ ಜಾಗತಿಕ ಬೆಳವಣಿಗೆಗಳಿಗೆ ಪೂರಕವಾಗಿದೆ.

**9. ಕೃತಕ ಬುದ್ಧಿಮತ್ತೆ (ಎ.ಐ):** ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವಾಲಯವು ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಮೂಲಕ ಕೃತಕ ಬುದ್ಧಿಮತ್ತೆಯನ್ನು ಭಾರತದಲ್ಲಿ ವ್ಯಾಪಕವಾಗಿ ತರಲು ಪ್ರಯತ್ನಿಸಿದ್ದು ಈ ಉದ್ದೇಶವು ಕೃತಕ ಬುದ್ಧಿಮತ್ತೆಯನ್ನು ಸಾರ್ವಜನಿಕರ ಉಪಯೋಗಕ್ಕೆ ಒದಗಿಸುವ ಜಿ20 ರಾಷ್ಟ್ರಗಳ ನಾಯಕರ ನಿರ್ಣಯದ ನೆಲೆಯಲ್ಲಿಯೇ ಇದೆ. ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಯತ್ನವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿರುವವರಿಗೆ ಮರು ಕೌಶಲ ಕಲಿಕೆ, ಹೆಚ್ಚಿನ ಕೌಶಲ ಕಲಿಕೆಯನ್ನು ಒಳಗೊಂಡಿದ್ದು ಆನ್‌ಲೈನ್ ಪೋರ್ಟಲ್‌ಗಳು, ಸಂಗ್ರಹ ಕೇಂದ್ರಗಳು, ಸಂಶೋಧನಾ ಕೇಂದ್ರಗಳು, ಜಾಗತಿಕ ಸಹಯೋಗಗಳು ಹೀಗೆ ಸುಸ್ಥಿರ ಬೆಳವಣಿಗೆಗೆ ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಬಳಸುವ ಮೂಲಕ ಒಳಿತನ್ನು ಮಾಡುವ ಜಾಗತಿಕ ಹಂಬಲವನ್ನು ಭಾರತವೂ ಈ ಮೂಲಕ ಈಡೇರಿಸುತ್ತಿದೆ.

**ಸಮಾರೋಪ**

ಜಿ20 ನಾಯಕರ ನಿರ್ಣಯವು ಸಾರ್ವಜನಿಕ ಮೂಲ ಸೌಕರ್ಯವನ್ನು ಹೆಚ್ಚಿಸುವ ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ಡಿಜಿಟಲ್ ಜಗತ್ತನ್ನು ಪರಿಣಾಮಕಾರಿಯಾಗಿಸುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಉದ್ದೇಶವನ್ನು ಹೊಂದಿದೆ. ಭಾರತವೂ ಕೂಡ ಇಂತಹ ಡಿಜಿಟಲ್ ಬೆಳವಣಿಗೆಗೆ ಪೂರಕವಾದ ಕ್ರಮಗಳನ್ನು ತೆಗೆದು ಕೊಳ್ಳುತ್ತಿದೆ. ಇದು ಆಧಾರ್ ಮತ್ತು ಜೆ.ಎ.ಎಂ ತ್ರಿವಳಿಗಳ ಮೂಲಕ ಹಣಕಾಸಿನ ಒಳಗೊಳ್ಳುವಿಕೆಯನ್ನು ಗಟ್ಟಿಗೊಳಿಸುವುದರ ಜೊತೆಗೆ ಪಾರದರ್ಶಕ ಡಿಜಿಟಲ್ ಪರಿವರ್ತನೆಗೆ ಬೆಂಚ್ ಮಾರ್ಕ್ ರೂಪಿಸಿದೆ. ಯುನಿಫೈಡ್ ಪೇಮೆಂಟ್ಸ್ ಇಂಟರ್ ಫೇಸ್ (ಯು.ಪಿ.ಐ) ಮತ್ತಿತರ ಡಿಜಿಟಲ್ ಪ್ರಯತ್ನಗಳು ಭಾರತದ ನಾಯಕತ್ವ ಡಿಜಿಟಲ್ ಅಂತರವನ್ನು ತಗ್ಗಿಸುವ ಆ ಮೂಲಕ ಅನ್ವೇಷಣೆಯನ್ನು ಉತ್ತೇಜಿಸುವ ಸುವರ್ಣ ಸೇತುವೆಗಾಗಿ ಮಾಡುತ್ತಿರುವ ಉಪಕ್ರಮವಾಗಿದೆ. ಭಾರತವು ಜಿ20 ದೇಶಗಳ ಆದ್ಯತೆಗಳನ್ನು ಗಮನಿಸಿ ಅದನ್ನು ಅನುಷ್ಠಾನಕ್ಕೆ ತರುವ ಮೂಲಕ ಬೇರೆ ದೇಶಗಳಿಗೆ ಮಾದರಿಯಾಗಲು ಪ್ರಯತ್ನಿಸುತ್ತಿದೆ. ದೇಶದ ಯಶಸ್ಸಿನ ಕತೆಯು ಬೇರೆ ದೇಶಗಳು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಿ ಡಿಜಿಟಲ್ ಭವಿಷ್ಯವನ್ನು ಉಜ್ವಲಗೊಳಿಸಲು ಪ್ರೇರಕವಾಗಲಿದೆ. ಜಿ20 ನಾಯಕರ ನಿರ್ಣಯವು ಪರಿಣಾಮಕಾರಿ ಡಿಪಿಐಗಳನ್ನು ಬಳಸಿಕೊಂಡು ಪರಿವರ್ತನೆಯನ್ನು ಸಾಧಿಸುವ ಉದ್ದೇಶನ್ನು ಹೊಂದಿದೆ. ಈ ಮೂಲಕ ವಿಶ್ವದಲ್ಲಿ ಸಮಾನತೆಯನ್ನು ಸಾಧಿಸಿ ವಿಶಾಲವ್ಯಾಪ್ತಿಯ ಜಾಗತಿಕ ಡಿಜಿಟಲ್ ಜಗತ್ತನ್ನು ರೂಪಿಸುವ ಉದ್ದೇಶವನ್ನು ದೇಶವು ಹೊಂದಿದ್ದು ಇದು ಆಧುನಿಕೀಕರಣಕ್ಕೆ ದೇಶ ತನ್ನನ್ನು ತೆರೆದುಕೊಳ್ಳುವ ಮಹಾನ್ ಸದವಕಾಶವಾಗಲಿದೆ.

# ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ

* ಡಾ. ಸಮೀರ್ ಪಾಟೀಲ್
** ಶಿಮೋನಾ ಮೋಹನ್




**ನವದೆಹಲಿ ನಾಯಕರ ಘೋಷಣೆಯು 'ಎಐ ಹೊಣೆಗಾರಿಕೆಯು ಒಳ್ಳೆಯದಕ್ಕಾಗಿ ಮತ್ತು ಎಲ್ಲರಿಗಾಗಿ' ಬಳಸಿಕೊಳ್ಳುವ ಮಹತ್ವವನ್ನು ಎತ್ತಿ ತೋರಿಸುತ್ತದೆ. ಜನರ ಹಕ್ಕುಗಳು ಮತ್ತು ಸುರಕ್ಷತೆಯನ್ನು ಖಾತರಿಪಡಿಸುವಾಗ, ಜವಾಬ್ದಾರಿಯುತ, ಅಂತರ್ಗತ ಮತ್ತು ಮಾನವ ಕೇಂದ್ರಿತ ರೀತಿಯಲ್ಲಿ ಸವಾಲುಗಳನ್ನು ಪರಿಹರಿಸುವ ಮೂಲಕ ಸಾರ್ವಜನಿಕ ಒಳಿತಿಗಾಗಿ ಎಐ ಅನ್ನು ಬಳಸಿಕೊಳ್ಳಲು ಜಿ20 ನಾಯಕರು ಬದ್ಧರಾಗಿದ್ದಾರೆ ಎಂದು ಅದು ಹೇಳಿದೆ.**

ಕೃತಕ ಬುದ್ಧಿಮತ್ತೆ (ಎಐ) ಮಾನವರ ಸಂವಹನದಲ್ಲಿ, ಕೈಗಾರಿಕೆಗಳ ಕಾರ್ಯನಿರ್ವಹಣೆಯನ್ನು ಮತ್ತು ಸಮಾಜಗಳ ವಿನ್ಯಾಸದಲ್ಲಿ ಬದಲಾವಣೆ ತರುತ್ತಿದೆ. ಅನೇಕ ಡೊಮೇನ್‌ಗಳು, ದೇಶಗಳು ಮತ್ತು ಮಾನವ ಕಲ್ಪನೆಗಳಲ್ಲಿ ಎಐನ ಮಿತಿ ಇಲ್ಲದ ಸಾಮರ್ಥ್ಯವು ಹಲವಾರು ಅನ್ವಯಿಕೆಗಳಿಗೆ ಕಾರಣವಾಗಿದೆ. ಪ್ರಸ್ತುತ ಅಪ್ಲಿಕೇಶನ್‌ಗಳಲ್ಲಿ ಡೇಟಾ ವಿಶ್ಲೇಷಣೆ ಉದ್ದೇಶಗಳಿಗಾಗಿ ಚಿತ್ರ ಮತ್ತು ಪಠ್ಯ ವಿಶ್ಲೇಷಣೆ, ಲಾಜಿಸ್ಟಿಕ್ಸ್, ನಿರ್ಧಾರ ತೆಗೆದುಕೊಳ್ಳುವಲ್ಲಿ ಸಹಾಯ, ಸ್ವಯಂ ಚಾಲಿತ ವಾಹನಗಳು ಮತ್ತು ವೈಮಾನಿಕ ವ್ಯವಸ್ಥೆಗಳು, ಸೈಬರ್ ಭದ್ರತೆ ಇತ್ಯಾದಿಗಳು ಸೇರಿವೆ. ಇದರ ಜತೆಗೆ ಇದನ್ನು ಭದ್ರತೆ, ಕಣ್ಗಾವಲು ಮತ್ತು ದಾಸ್ತಾನು ನಿರ್ವಹಣೆಗೆ ಬಳಸಲಾಗುತ್ತಿದೆ. ಇದನ್ನು ಕೃಷಿ, ಫಿನ್ಟೆಕ್, ಆರೋಗ್ಯ ರಕ್ಷಣೆ, ಉತ್ಪಾದನೆ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರಗಳಿಗೆ ವ್ಯಾಪಕವಾಗಿ ಅನ್ವಯಿಸಲಾಗುತ್ತಿದೆ. ಈ ಮೂಲಕ ಅವುಗಳಲ್ಲಿ ಗಣನೀಯ ಲಾಭಾಂಶವನ್ನು ನೀಡುತ್ತಿದೆ.

ಕೃತಕ ಬುದ್ಧಿಮತ್ತೆ ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಮತ್ತು ನಮ್ಮ ಕಾಲದ ಕೆಲವು ಪ್ರಮುಖ ಸವಾಲುಗಳನ್ನು ಎದುರಿಸಲು ನಮಗೆ ಸಹಾಯ ಮಾಡುತ್ತದೆ ಎಂಬುದು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಸ್ಪಷ್ಟವಾಗಿದೆ. ಎಐ ಹೆಚ್ಚು ಸುಸ್ಥಿರ, ಸಮಾನ ಮತ್ತು ಪರಸ್ಪರ ಸಂಪರ್ಕಿತ ಜಗತ್ತನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿರುವ ಶಕ್ತಿಯಾಗಿದೆ. ಆದಾಗ್ಯೂ, ಇದು ವಿಮರ್ಶಾತ್ಮಕ ನೈತಿಕ ಮತ್ತು ಸಾಮಾಜಿಕ ಕಾಳಜಿಗಳನ್ನು ಸಹ ತೋರುತ್ತದೆ. ಇದಕ್ಕೆ ಸಾಕಷ್ಟು ನೀತಿ ಪರಿಗಣನೆ ಮತ್ತು ಪ್ರತಿಕ್ರಿಯೆಗಳು ಬೇಕಾಗುತ್ತವೆ.

### ಜಿ20 ನವದೆಹಲಿ ನಾಯಕರ ಘೋಷಣೆ ಮತ್ತು ಜವಾಬ್ದಾರಿಯುತ ಎಐ

ನಾಗರಿಕ, ಭದ್ರತೆ ಮತ್ತು ರಕ್ಷಣಾ ಉದ್ದೇಶಗಳಿಗಾಗಿ ಎಐ ಜೊತೆಗಿನ ತಮ್ಮ ಕಾರ್ಯಕ್ರಮಗಳಲ್ಲಿ ಜವಾಬ್ದಾರಿಯುತ ನಡವಳಿಕೆಯನ್ನು ಅಭ್ಯಾಸ ಮಾಡಲು ಸರ್ಕಾರಗಳು ಹೆಚ್ಚಾಗಿ ಶ್ರಮಹಾಕುತ್ತಿವೆ. ಈ ನಿಟ್ಟಿನಲ್ಲಿ ನವದೆಹಲಿಯಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ಜಿ20 ಶೃಂಗಸಭೆ (ಸೆಪ್ಟೆಂಬರ್ 9–10, 2023) ಜವಾಬ್ದಾರಿಯುತ ಎಐ (ಆರ್‌ಎಐ) ಗೆ ಸಂಬಂಧಿಸಿದ ಅನೇಕ ಅಂಶಗಳನ್ನು ನಿಭಾಯಿಸಿದೆ. ಹೆಚ್ಚಿನ ಜಿ20 ಸದಸ್ಯರು ಎಐನ ಜವಾಬ್ದಾರಿಯುತ ಬಳಕೆಗಾಗಿ ನಿಯಮಗಳನ್ನು ಸ್ಥಾಪಿಸುವತ್ತ ಕೆಲಸ ಮಾಡುತ್ತಿದ್ದಾರೆ. ವಿಶೇಷವಾಗಿ ಜೆಇಎನ್‌ಎಐ ಅಪ್ಲಿಕೇಶನ್‌ಗಳ ಆಗಮನದಿಂದ ಈ

* ಉಪ ನಿರ್ದೇಶಕರು, ** ಜೂನಿಯರ್ ಫೆಲೋ, ಅಬ್ಸರ್ವರ್ ರಿಸರ್ಚ್ ಫೌಂಡೇಶನ್.
ಇಮೇಲ್: * sameer.patil@orfonline.org. ** shimona.mohan@orfonline.org.




ಕೆಲಸಗಳಾಗುತ್ತಿವೆ. ಐರೋಪ್ಯ ಒಕ್ಕೂಟದ ಪ್ರಸ್ತಾವಿತ ಎಐ ಕಾಯ್ದೆಯು ಎಐನ ಜವಾಬ್ದಾರಿಯುತ ಅಭಿವೃದ್ಧಿಗೆ ನಿಯಂತ್ರಕ ಚೌಕಟ್ಟನ್ನು ಸ್ಥಾಪಿಸುವ ಅತ್ಯಂತ ಸಮಗ್ರ ಪ್ರಯತ್ನವಾಗಿದೆ. ಇದು ಪ್ರಾಥಮಿಕವಾಗಿ ಡೇಟಾ ಗುಣಮಟ್ಟ, ಪಾರದರ್ಶಕತೆ, ಮಾನವ ಮೇಲ್ವಿಚಾರಣೆ ಮತ್ತು ಉತ್ತರದಾಯಿತ್ವದ ಸುತ್ತಲಿನ ನಿಯಮಗಳನ್ನು ಬಲಪಡಿಸುವತ್ತ ಗಮನ ಹರಿಸುತ್ತದೆ.

ನವದೆಹಲಿ ನಾಯಕರ ಘೋಷಣೆಯು 'ಎಐ ಹೊಣೆಗಾರಿಕೆಯು ಒಳ್ಳೆಯದಕ್ಕಾಗಿ ಮತ್ತು ಎಲ್ಲರಿಗಾಗಿ' ಬಳಸಿಕೊಳ್ಳುವ ಮಹತ್ವವನ್ನು ಎತ್ತಿ ತೋರಿಸುತ್ತದೆ. ಜನರ ಹಕ್ಕುಗಳು ಮತ್ತು ಸುರಕ್ಷತೆಯನ್ನು ರಕ್ಷಿಸುವಾಗ, ಜವಾಬ್ದಾರಿಯುತ, ಅಂತರ್ಗತ ಮತ್ತು ಮಾನವ ಕೇಂದ್ರಿತ ರೀತಿಯಲ್ಲಿ ಸವಾಲುಗಳನ್ನು ಪರಿಹರಿಸುವ ಮೂಲಕ ಸಾರ್ವಜನಿಕ ಒಳಿತಿಗಾಗಿ ಎಐ ಅನ್ನು ಬಳಸಿಕೊಳ್ಳಲು ಜಿ20 ನಾಯಕರು ಬದ್ಧರಾಗಿದ್ದಾರೆ ಎಂದು ಅದು ಹೇಳಿದೆ. ಜವಾಬ್ದಾರಿಯುತ ಎಐ ಅಭಿವೃದ್ಧಿ, ನಿಯೋಜನೆ ಮತ್ತು ಬಳಕೆಯನ್ನು ಖಚಿತಪಡಿಸಿಕೊಳ್ಳಲು, ಮಾನವ ಹಕ್ಕುಗಳ ರಕ್ಷಣೆ, ಪಾರದರ್ಶಕತೆ ಮತ್ತು ವಿವರಣೆ, ನ್ಯಾಯಸಮ್ಮತತೆ, ಉತ್ತರದಾಯಿತ್ವ, ನಿಯಂತ್ರಣ, ಸುರಕ್ಷತೆ, ಸೂಕ್ತ ಮಾನವ ಮೇಲ್ವಿಚಾರಣೆ, ನೈತಿಕತೆ, ಪಕ್ಷಪಾತ, ಗೌಪ್ಯತೆ ಮತ್ತು ಡೇಟಾ ರಕ್ಷಣೆಯನ್ನು ಪರಿಹರಿಸಬೇಕು ಎಂದು ಅದು ಹೇಳುತ್ತದೆ. ಇದಲ್ಲದೆ, ಜಿ20 ಸದಸ್ಯರು ಪ್ರಯೋಜನಗಳನ್ನು ಗರಿಷ್ಠಗೊಳಿಸುವ ಮತ್ತು ಎಐ ಬಳಕೆಗೆ ಸಂಬಂಧಿಸಿದ ಅಪಾಯಗಳನ್ನು ಗಣನೆಗೆ ತೆಗೆದುಕೊಳ್ಳುವ ನಾವಿನ್ಯತೆ-ಪರ ನಿಯಂತ್ರಕ / ಆಡಳಿತ ವಿಧಾನವನ್ನು ಅನುಸರಿಸುತ್ತಾರೆ ಎಂದು ಘೋಷಣೆಯಲ್ಲಿ ಉಲ್ಲೇಖಿಸಲಾಗಿದೆ.

ಈ ಘೋಷಣೆಯು 2019ರ ಜಿ20 ಎಐ ತತ್ವಗಳಿಗೆ ನಾಯಕರ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಈ ತತ್ವಗಳನ್ನು 2019ರ ಒಸಾಕಾ ಶೃಂಗಸಭೆಯಲ್ಲಿ ಅಂಗೀಕರಿಸಲಾಯಿತು. ಜತೆಗೆ ಎಐನ ಮಾನವ ಕೇಂದ್ರಿತ ವಿಧಾನವನ್ನು ಇದು ಒತ್ತಿಹೇಳಿತು. ತಂತ್ರಜ್ಞಾನವನ್ನು ನವೀನ ಮತ್ತು ವಿಶ್ವಾಸಾರ್ಹವಾಗಿಸಲು ಹಾಗೂ ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಗೌರವಿಸಲು 2019ರಲ್ಲಿ ಅಂಗೀಕರಿಸಲಾದ ಎಐ ಕುರಿತ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ತತ್ವಗಳ ಸಂಸ್ಥೆಯಿಂದ ಸಲಹೆಗಳನ್ನು ಪಡೆದಿದ್ದರು. ಇದಲ್ಲದೆ, ಮಾನವ ಬಂಡವಾಳ ಅಭಿವೃದ್ಧಿಯನ್ನು ಬೆಂಬಲಿಸುವಲ್ಲಿ ಹೂಡಿಕೆಯ ಮಹತ್ವವನ್ನು ಈ ಘೋಷಣೆ ಒತ್ತಿಹೇಳುತ್ತದೆ. ಈ ನಿಟ್ಟಿನಲ್ಲಿ, ಉದಯೋನ್ಮುಖ ಪ್ರವೃತ್ತಿಗಳು ಮತ್ತು ಎಐ ಸೇರಿದಂತೆ ತಾಂತ್ರಿಕ ಪ್ರಗತಿಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಕರಿಗೆ ಬೆಂಬಲ ನೀಡಲು ಜಿ20 ನಾಯಕರು ಒಪ್ಪಿಕೊಂಡರು. ಉದ್ಯೋಗ ಮಾರುಕಟ್ಟೆಗೆ ಪ್ರವೇಶಿಸುವ ಯುವಕರಿಗೆ ಕೌಶಲ್ಯಗಳನ್ನು ನೀಡುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಎಐನ ಪ್ರತಿಕೂಲ ಆರ್ಥಿಕ ಪರಿಣಾಮಗಳ ಸುತ್ತಲಿನ ಕಳವಳಗಳನ್ನು ಇದು ಸರಿದೂಗಿಸುತ್ತದೆ.

### ಎಐನಿಂದ ಹೇಗೆ ನೈತಿಕ ಅಪಾಯ?

ಎಐನ ನೈತಿಕ ದುರುಪಯೋಗಕ್ಕೆ ಸಂಬಂಧಿಸಿದ ಘಟನೆಗಳನ್ನು ಪತ್ತೆಹಚ್ಚುವ ಎಐಎಎಐಸಿ (ಎಐ, ಅಲ್ಗಾರಿದಮಿಕ್ ಆಂಡ್ ಆಟೋಮೇಷನ್ ಇನ್ಸಿಡೆಂಟ್ಸ್ ಆಂಡ್ ಕಾಂಟ್ರೋವರ್ಸಿಸ್) ಡೇಟಾಬೇಸ್ ಪ್ರಕಾರ, ಎಐ ಘಟನೆಗಳು ಮತ್ತು ವಿವಾದಗಳ ಸಂಖ್ಯೆ 2012ರಿಂದ 26 ಪಟ್ಟು ಹೆಚ್ಚಾಗಿದೆ.

ಯುದ್ಧಭೂಮಿಯಲ್ಲಿ ಡ್ರೋನ್‌ಗಳ ಗುರಿ ಮತ್ತು ಕಣ್ಗಾವಲು ಸಾಮರ್ಥ್ಯಗಳನ್ನು ಹೆಚ್ಚಿಸಲು ರಕ್ಷಣಾ ಕ್ಷೇತ್ರದಲ್ಲಿ ಎಐ ದುರುಪಯೋಗದ ಬಗ್ಗೆ ಕಳವಳಗಳಿವೆ. ಇದು ಡ್ರೋನ್ ಯುದ್ಧದಲ್ಲಿ ಎಐನ ಬಳಕೆಯ ಪ್ರಕರಣವಾಗಿದ್ದು, ನಂತರದ ಹಿಂಸಾಚಾರದ ಸಾಮರ್ಥ್ಯವನ್ನು ಹೊಂದಿದೆ. ಇತರ ಸಂದರ್ಭಗಳಲ್ಲಿ, ಕಾನೂನುಬಾಹಿರ ಕಣ್ಗಾವಲುಗಾಗಿ ಎಐ ದುರುಪಯೋಗವನ್ನು ವಿಮರ್ಶಕರು ಗಮನಿಸಿದ್ದಾರೆ.

ರಕ್ಷಣೆ ಮತ್ತು ಭದ್ರತೆಯ ಹೊರತಾಗಿ ಎಐ ಪ್ರತಿಕೂಲ ಆರ್ಥಿಕ ಪರಿಣಾಮದ ಭಯವನ್ನು ಹುಟ್ಟುಹಾಕಿದೆ. ಎಐ ಯಾಂತ್ರೀಕರಣವು ಕಾರ್ಮಿಕ ಮಾರುಕಟ್ಟೆಯನ್ನು ಮೂಲಭೂತ ರೀತಿಯಲ್ಲಿ ಬದಲಾಯಿಸಬಹುದು. ಇದು ತಮ್ಮ ಕಾರ್ಮಿಕ ಮತ್ತು ಮಾನವ ಸಂಪನ್ಮೂಲಗಳನ್ನು ಅವಲಂಬಿಸಿರುವ ಜಾಗತಿಕ ದಕ್ಷಿಣದ ಆರ್ಥಿಕತೆಗಳಿಗೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ ಎಂಬುದು ಹೊರಹೊಮ್ಮುತ್ತಿರುವ ಆತಂಕವಾಗಿದೆ.

### ಜವಾಬ್ದಾರಿಯುತ ಎಐ ಎಂದರೇನು?

ಈ ವಿಚಾರಗಳು 'ಜವಾಬ್ದಾರಿಯುತ ಎಐ' (ಆರ್‌ಎಐ)ಅಗತ್ಯವನ್ನು ಮತ್ತು ಅದನ್ನು ನಿಯಂತ್ರಿಸುವ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಎಐನ ಅಭಿವೃದ್ಧಿ ಮತ್ತು ನಿಯೋಜನೆಯಲ್ಲಿ ಇದು ವಿಶೇಷವಾಗಿ ಮಾನ್ಯವಾಗಿದೆ. ಇಲ್ಲಿ ಜವಾಬ್ದಾರಿಯುತ ನಾವಿನ್ಯತೆ ಮತ್ತು ಬಳಕೆಯನ್ನು ಆರಂಭದಿಂದಲೇ ಸಾಂಸ್ಥಿಕಗೊಳಿಸಲು ಅವಕಾಶವಿದೆ ಮತ್ತು ನೀತಿ ಅಥವಾ ಅನುಸರಣೆ-ಸಂಬಂಧಿತ ನಿರ್ಬಂಧಗಳನ್ನು ಮಾಹಿತಿಯುಕ್ತವಾಗಿ ಮಾತ್ರ ತೃಪ್ತಿಪಡಿಸಬಹುದು. ಈ ಸನ್ನಿವೇಶದಲ್ಲಿ ಉದ್ಯೋಗಿಗಳು ಮತ್ತು ವ್ಯವಹಾರಗಳನ್ನು ಸಬಲಗೊಳಿಸಲು ಮತ್ತು ಸಮಾಜದ ಮೇಲೆ ನ್ಯಾಯಯುತ ರೀತಿಯಲ್ಲಿ ಪರಿಣಾಮ ಬೀರಲು ಎಐ ಅನ್ನು ವಿನ್ಯಾಸಗೊಳಿಸುವ, ಅಭಿವೃದ್ಧಿಪಡಿಸುವ ಮತ್ತು ನಿಯೋಜಿಸುವ ಅಭ್ಯಾಸವನ್ನು ಆರ್‌ಎಐ ಎಂದು ವ್ಯಾಪಕವಾಗಿ ಅರ್ಥೈಸಲಾಗಿದೆ.

ಎಐನ ದ್ವಿ-ಬಳಕೆಯ ಗುಣಲಕ್ಷಣವನ್ನು ಗಮನಿಸಿದರೆ ಇದು ಸಡಿಲ ಮತ್ತು ಹೊಂದಿಕೊಳ್ಳುವ ತಿಳುವಳಿಕೆಯಾಗಿದೆ. ಇದು ಆರ್‌ಎಐ ಅನ್ನು ಸಾಮಾನ್ಯವಾಗಿ ನ್ಯಾಯಯುತ, ವಿವರಿಸಬಹುದಾದ ಮತ್ತು ವಿಶ್ವಾಸಾರ್ಹ ಎಐ ವ್ಯವಸ್ಥೆಗಳ ಸುತ್ತಲಿನ ಪರಿಗಣನೆಗಳನ್ನು ಒಳಗೊಂಡಿರುವ ಒಂದು ವಿಶಾಲ ಪದವಾಗಿ ಸೂಚಿಸುತ್ತದೆ.

ಭಾರತವು 2018ರಿಂದ ಆರ್‌ಎಐನಲ್ಲಿ ಕೆಲಸ ಮಾಡುತ್ತಿದೆ. ನಾಗರಿಕ ಎಐ ವಾಸ್ತುಶಿಲ್ಪಗಳ ನಿಯೋಜನೆ ಮತ್ತು ಬಳಕೆಗಾಗಿ ಆರ್‌ಎಐ ತತ್ವಗಳ ವಿಧಾನಗಳು ಮತ್ತು ಕಾರ್ಯಾಚರಣೆಯ ಬಗ್ಗೆ ನೀತಿ ಆಯೋಗವು 2021ರಲ್ಲಿ ಎರಡು ಭಾಗಗಳ

ವರದಿಯನ್ನು ಬಿಡುಗಡೆ ಮಾಡಿದೆ. ನೀತಿ ಆಯೋಗವು ಪ್ರತಿಪಾದಿಸುವ ಏಳು ತತ್ವಗಳೆಂದರೆ: ಸುರಕ್ಷತೆ ಮತ್ತು ವಿಶ್ವಾಸಾರ್ಹತೆ; ಸಮಾನತೆ; ಒಳಗೊಳ್ಳುವಿಕೆ ಮತ್ತು ತಾರತಮ್ಯವಿಲ್ಲದಿರುವುದು; ಗೌಪ್ಯತೆ ಮತ್ತು ಭದ್ರತೆ; ಪಾರದರ್ಶಕತೆ; ಉತ್ತರದಾಯಿತ್ವ; ಮತ್ತು ಸಕಾರಾತ್ಮಕ ಮಾನವೀಯ ಮೌಲ್ಯಗಳ ರಕ್ಷಣೆ ಮತ್ತು ಬಲವರ್ಧನೆಗಳಾಗಿವೆ. ಸರ್ಕಾರ, ಉದ್ಯಮ ಸಂಸ್ಥೆಗಳು ಮತ್ತು ನಾಗರಿಕ ಸಮಾಜವು ಅವರು ಅಭಿವೃದ್ಧಿಪಡಿಸುವ ಅಥವಾ ಕೆಲಸ ಮಾಡುವ ಎಐ ಉತ್ಪನ್ನಗಳಲ್ಲಿ ಈ ತತ್ವಗಳನ್ನು ಕಾರ್ಯಗತಗೊಳಿಸುವ ಕ್ರಮಗಳನ್ನು ಇದು ಶಿಫಾರಸು ಮಾಡುತ್ತದೆ. ಭಾರತೀಯ ಟೆಕ್ ಉದ್ಯಮ ಸಂಸ್ಥೆ ನಾಸ್ಕಾಮ್ ಈ ಚೌಕಟ್ಟಿನ ತತ್ವಗಳನ್ನು 2022ರ ಕೊನೆಯಲ್ಲಿ ಬಿಡುಗಡೆಯಾದ ಭಾರತದ ಮೊದಲ ಆರ್‌ಎಐ ಹಬ್ ಮತ್ತು ಟೂಲ್ ಕಿಟ್‌ನಲ್ಲಿ ಅಳವಡಿಸಿದೆ. ಇದು ಬಳಕೆದಾರರ ನಂಬಿಕೆ ಮತ್ತು ಸುರಕ್ಷತೆಗೆ ಆದ್ಯತೆ ನೀಡುವ ಮೂಲಕ ಎಐ ಅನ್ನು ಬಳಸಿಕೊಳ್ಳಲು ಘಟಕಗಳಿಗೆ ಅನುವು ಮಾಡಿಕೊಡುವ ವಲಯ-ಅಜ್ಞಾತ ಸಾಧನಗಳನ್ನು ಒಳಗೊಂಡಿದೆ.

ಜಿ20 ನವದೆಹಲಿ ನಾಯಕರ ಘೋಷಣೆಯಲ್ಲಿ ಆರ್‌ಎಐ ಮೇಲೆ ಗಮನ ಕೇಂದ್ರೀಕರಿಸುವುದು ಸೇರಿದ್ದು, ವಿಜ್ಞಾನ, ಉದ್ಯಮ, ನಾಗರಿಕ ಸಮಾಜ, ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಸರ್ಕಾರಗಳ ತಜ್ಞರನ್ನು ಒಟ್ಟುಗೂಡಿಸುವ ಬಹುಸ್ತರದ ಉಪಕ್ರಮವಾದ ಕೃತಕ ಬುದ್ಧಿಮತ್ತೆಯ ಜಾಗತಿಕ ಸಹಭಾಗಿತ್ವದ (ಜಿಪಿಎಐ) ಅಧ್ಯಕ್ಷತೆಯನ್ನು ಭಾರತ ಹೊಂದಿದೆ. ಇದು ತನ್ನ ಜವಾಬ್ದಾರಿಯುತ ಎಐ ಕಾರ್ಯ ಗುಂಪಿನ ಮೂಲಕ ಎಐನ ಜವಾಬ್ದಾರಿಯುತ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ. ಗ್ಲೋಬಲ್ ಸೌತ್ ವೇದಿಕೆಯಲ್ಲಿ ಕಡಿಮೆ ಪ್ರಾತಿನಿಧ್ಯವನ್ನು ಹೊಂದಿರುವುದರಿಂದ ಜಿಪಿಎಐ ಅಧ್ಯಕ್ಷತೆ ವಹಿಸುವುದು ಮುಖ್ಯವಾಗಿದೆ: ಇದರ 29 ಸದಸ್ಯರಲ್ಲಿ, ಜಾಗತಿಕ ದಕ್ಷಿಣದಿಂದ ಕೇವಲ ನಾಲ್ಕು ಮಂದಿ ಮಾತ್ರ ಪಾಲುದಾರರಾಗಿದ್ದಾರೆ. ಅಂದರೆ – ಅರ್ಜೆಂಟೀನಾ, ಬ್ರೆಜಿಲ್, ಭಾರತ ಮತ್ತು ಸೆನೆಗಲ್ ಇದರಲ್ಲಿ ಸೇರಿವೆ. ಆದ್ದರಿಂದ, ಈ ವಿಭಜನೆಯನ್ನು ನಿವಾರಿಸುವಲ್ಲಿ ಸಕ್ರಿಯ ಪಾತ್ರ ವಹಿಸಲು ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು ಸಹ ಎಐ ಕಡೆಗೆ ಈ ತಾಂತ್ರಿಕ ಬದಲಾವಣೆಯ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ವಿಚಾರದಲ್ಲಿ ಭಾರತವು ಉತ್ತಮ ಸ್ಥಾನದಲ್ಲಿದೆ. ನವದೆಹಲಿಯು 2023ರ ಡಿಸೆಂಬರ್ 12-14 ರಂದು ವಾರ್ಷಿಕ ಜಿಪಿಎಐ ಶೃಂಗಸಭೆಯನ್ನು ಆಯೋಜಿಸಲಿದೆ. ಟೋಕಿಯೊದಲ್ಲಿ ಕಳೆದ ವರ್ಷ ನಡೆದ ಶೃಂಗಸಭೆಯಲ್ಲಿ, ಬಳಕೆದಾರರ ಹಾನಿಯನ್ನು ತಡೆಗಟ್ಟಲು ಮತ್ತು ಇಂಟರ್ನೆಟ್ ಮತ್ತು ಎಐ ಎರಡರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಡೇಟಾ ಆಡಳಿತದ ನಿಯಮಗಳು ಮತ್ತು ಮಾರ್ಗಸೂಚಿಗಳ ಸಾಮಾನ್ಯ ಚೌಕಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುವಂತೆ ಭಾರತವು ಸದಸ್ಯರನ್ನು ಒತ್ತಾಯಿಸಿತು.

### ಸಾರಾಂಶ

ಕಳೆದ ಕೆಲವು ವರ್ಷಗಳಲ್ಲಿ ಎಐ ಮತ್ತು ಅದರ ಅನ್ವಯಗಳ ಏರಿಕೆಯು ಪ್ರಪಂಚದಾದ್ಯಂತದ ರಾಷ್ಟ್ರಗಳು ಅದರ ಸಂಭಾವ್ಯ ದುರುಪಯೋಗದ ಅಪಾಯಗಳ ಬಗ್ಗೆ ಎಚ್ಚರಗೊಳ್ಳುತ್ತಿವೆ. ಈ ಸಮಸ್ಯೆಯನ್ನು ಪರಿಹರಿಸಲು ಹಲವಾರು ಉಪಕ್ರಮಗಳು ಪ್ರಯತ್ನಿಸುತ್ತಿದ್ದರೂ, ಎಐನ ನೈತಿಕ ಮತ್ತು ಜವಾಬ್ದಾರಿಯುತ ಬಳಕೆಯ ಬಗ್ಗೆ ಪ್ರಸ್ತುತ ಯಾವುದೇ ಜಾಗತಿಕ ಒಮ್ಮತ ಅಥವಾ



ನಿಯಂತ್ರಕ ಚೌಕಟ್ಟು ಇಲ್ಲ. ಆದ್ದರಿಂದ, ಜಿ20 ಮತ್ತು ಜಿಪಿಎಐನಂತಹ ಗುಂಪುಗಳು ಈ ನಿಟ್ಟಿನಲ್ಲಿ ಮುಂದಾಳತ್ವ ವಹಿಸಲು ಸೂಕ್ತ ಸ್ಥಾನದಲ್ಲಿವೆ. ಈ ಮೂಲಕ ನಾವಿನ್ಯತೆ ಮತ್ತು ಎಐ ಬಳಕೆಯ ನೈತಿಕತೆಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ವಿಶ್ವದ ಅತಿದೊಡ್ಡ ಆರ್ಥಿಕತೆಗಳ ನಾಯಕರು ಎಐನ ಸಂಭಾವ್ಯ ಪ್ರಯೋಜನಗಳು ಮತ್ತು ಅಪಾಯಗಳ ಬಗ್ಗೆ ತಿಳಿದಿದ್ದಾರೆ, ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಜವಾಬ್ದಾರಿಯುತ ಮತ್ತು ಅಂತರ್ಗತ ರೀತಿಯಲ್ಲಿ ಬಳಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಒಟ್ಟಾಗಿ ಕೆಲಸ ಮಾಡಲು ಬದ್ಧರಾಗಿದ್ದಾರೆ ಎಂದು ಜಿ20 ನವದೆಹಲಿ ನಾಯಕರ ಘೋಷಣೆ ತೋರಿಸುತ್ತದೆ. ಜಿ20 ಸದಸ್ಯ ರಾಷ್ಟ್ರಗಳು ನಿರೀಕ್ಷಿತ ನಿಯಂತ್ರಣ ವಿಧಾನವನ್ನು ಅಳವಡಿಸಿಕೊಂಡು, ಗಡಿಯಾಚೆಗಿನ ಚಿಂತನೆಯನ್ನು ಮಾಡುವ ಮೂಲಕ ಮತ್ತು ವೈವಿಧ್ಯಮಯ ಮಧ್ಯಸ್ಥಗಾರರ ಒಕ್ಕೂಟವನ್ನು ನಿರ್ಮಿಸುವ ಮೂಲಕ ಈ ಘೋಷಣೆಯನ್ನು ಅನುಸರಿಸಬೇಕು.


# ಯೋಜನಾ ಡಿಸೆಂಬರ್ 2023
## ಸಂಚಿಕೆ ವಿಷಯ
# ಯೋಜನಾ ವರ್ಷಾಂತ್ಯ ವಿಶೇಷ

ಉರುವಲು

# ಭಾರತದಲ್ಲಿ ಇಂಧನ ಪರಿವರ್ತನೆ

* ಭೂಪಿಂದರ್ ಸಿಂಗ್ ಭಲ್ಲಾ

**ಸಾಂಪ್ರದಾಯಿಕ ಮೂಲದಿಂದ ಹಿಡಿದು ನವೀಕರಿಸಬಹುದಾದ ಇಂಧನ ಮೂಲಗಳವರೆಗೆ ವಿದ್ಯುಚ್ಛಕ್ತಿ ಉತ್ಪಾದನೆಯ ಭಾರತದ ಪಯಣವು, ಸುಸ್ಥಿರ ಇಂಧನ ಭವಿಷ್ಯದತ್ತ ಒಂದು ಸ್ಮರಣೀಯ ಮತ್ತು ಮಹತ್ವದ ಹೆಜ್ಜೆಯನ್ನು ಸೂಚಿಸುತ್ತದೆ. ಮಹತ್ವಾಕಾಂಕ್ಷೆಯ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಗುರಿಗಳಿಗೆ ಸರ್ಕಾರ ಹೊಂದಿರುವ ಅಚಲವಾದ ಬದ್ಧತೆ, ನವೀನ ನೀತಿಗಳು ಮತ್ತು ಪ್ರೋತ್ಸಾಹಗಳು ಒಟ್ಟಿಗೆ ಸೇರಿಕೊಂಡು ಹಸಿರು ಇಂಧನ ವಲಯಕ್ಕೆ ಸದೃಢ ವೇದಿಕೆ ಸಿದ್ಧಪಡಿಸಿವೆ.**

ಭಾರತವು ಪರಿಸರ ಅವನತಿಗೆ ಸಂಬಂಧಿಸಿದ ಕಳವಳಗಳನ್ನು ಪರಿಹರಿಸುವ ಸಮಕಾಲೀನ ಸಂದರ್ಭದಲ್ಲೇ ದಿನೇದಿನೇ ಹೆಚ್ಚುತ್ತಿರುವ ಇಂಧನ ಬೇಡಿಕೆಗಳನ್ನು ಪೂರೈಸುವ ಪ್ರಮುಖ ಸವಾಲುಗಳನ್ನು ಎದುರಿಸುತ್ತಿದೆ. 1.4 ಶತಕೋಟಿ ಜನಸಂಖ್ಯೆ ಹೊಂದಿರುವ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿರುವ ಭಾರತಕ್ಕೆ, ಸುಸ್ಥಿರ ಮತ್ತು ಸುರಕ್ಷಿತ ಇಂಧನ ಪೂರೈಕೆಯ ಅಗತ್ಯವು ಈ ಮುನ್ನ ಹೆಚ್ಚು ನಿರ್ಣಾಯಕವಾಗಿರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ, ಭಾರತವು ಪರಿವರ್ತನೀಯ ಪಯಣ ಪ್ರಾರಂಭಿಸಿದೆ, ಸಾಂಪ್ರದಾಯಿಕ ಉರುವಲು (ಪಳೆಯುಳಿಕೆ) ಇಂಧನ ಬಳಸಿ ವಿದ್ಯುತ್ ಉತ್ಪಾದಿಸುವ ಬೆಳವಣಿಗೆಯಿಂದ ತನ್ನ ಸಂಪೂರ್ಣ ಗಮನವನ್ನು ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ವಿದ್ಯುತ್ ಉತ್ಪಾದನೆಯ ಸುಸ್ಥಿರ ಬೆಳವಣಿಗೆಯತ್ತ ಪರಿವರ್ತನೆಯಾಗುತ್ತಿದೆ. ಈ ಗಮನಾರ್ಹ ಪರಿವರ್ತನೆಯು ಶುದ್ಧ ಮತ್ತು ಹಸಿರು ಇಂಧನ ವಲಯಕ್ಕೆ ಭರವಸೆ ನೀಡುವುದಲ್ಲದೆ, ದೇಶದ ಇಂಧನ ಭವಿಷ್ಯವನ್ನು ಮರುರೂಪಿಸುವ ಸಾಮರ್ಥ್ಯ ಹೊಂದಿದೆ. ಈ ಲೇಖನವು ಭಾರತದ ಇಂಧನ ಪರಿವರ್ತನೆಯ ಹಿಂದಿನ ಪ್ರೇರಣೆಗಳನ್ನು ಪರಿಶೀಲಿಸುತ್ತಾ, ಇದುವರೆಗೆ ಮಾಡಿರುವ ಪ್ರಗತಿಯನ್ನು ಪರಿಶೋಧಿಸುತ್ತಿದೆ. ಭಾರತವು ಎದುರಿಸಿದ ನೈಜ ಸವಾಲುಗಳನ್ನು ಎತ್ತಿ ತೋರಿಸುವ ಜೊತೆಗೆ, ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ಭಾರತ ಸಾಗುವ ಮುಂದಿನ ಹಾದಿಯನ್ನು ತೋರುತ್ತದೆ.



### ಇಂಧನ ಪರಿವರ್ತನೆಯ ಅಗತ್ಯ

ಹಲವು ದಶಕಗಳಿಂದಲೂ ಭಾರತವು ವಿದ್ಯುತ್ ಉತ್ಪಾದನೆ ಮತ್ತು ಅದರ ಆರ್ಥಿಕ ಬೆಳವಣಿಗೆ ಉತ್ತೇಜಿಸಲು, ದೇಶದ ಇಂಧನ ವಲಯವು ಪ್ರಾಥಮಿಕವಾಗಿ ಕಲ್ಲಿದ್ದಲು, ತೈಲ ಮತ್ತು ನೈಸರ್ಗಿಕ ಅನಿಲದಂತಹ ಉರುವಲು ಇಂಧನಗಳನ್ನು ಅವಲಂಬಿಸಿತ್ತು. ಆದರೆ, ಈ ಅವಲಂಬನೆಯು ಪರಿಸರ ಮತ್ತು ಸಾಮಾಜಿಕವಾಗಿ ಮಹತ್ವದ ವೆಚ್ಚಗಳಿಗೆ ಕಾರಣವಾಗುತ್ತಿತ್ತು. ಉರುವಲು ಇಂಧನಗಳ ದಹನವು ಹಸಿರುಮನೆ ಅನಿಲಗಳನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತದೆ. ಇದು ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ ಹೆಚ್ಚಲು ಕೊಡುಗೆ ನೀಡುತ್ತದೆ. ಹೆಚ್ಚುವರಿಯಾಗಿ, ಸಾಂಪ್ರದಾಯಿಕ ಅಥವಾ ಉರುವಲು ಆಧರಿತ ಇಂಧನ ಮೂಲಗಳಿಂದ ಉಂಟಾಗುವ ವಾಯುಮಾಲಿನ್ಯವು ಜನಸಂಖ್ಯೆಯ ಮೇಲೆ ತೀವ್ರ ತರವಾದ ಆರೋಗ್ಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಇದು ಜೀವನದ ಗುಣಮಟ್ಟ ಮಾತ್ರವಲ್ಲದೆ, ಆರ್ಥಿಕತೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಇಂಗಾಲ ಹೊರಸೂಸುವಿಕೆಯ ಪ್ರಮಾಣವನ್ನು ತಗ್ಗಿಸುವ ಹವಾಮಾನ ಬದಲಾವಣೆಯ ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿದ ಭಾರತವು, ತನ್ನ ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡಲು ಮತ್ತು ಹವಾಮಾನ ಬದಲಾವಣೆ ನಿಯಂತ್ರಣಕ್ಕೆ ತರುವ ಪಾತ್ರ ನಿರ್ವಹಿಸಲು ಬದ್ಧವಾಗಿದೆ. ಉರುವಲು ಇಂಧನಗಳಿಂದ ಉಂಟಾದ ಪರಿಸರ ಅಪಾಯಗಳು ಮತ್ತು ಇಂಧನ ಭದ್ರತೆಯ ಅಗತ್ಯ ಗುರುತಿಸಿ, ಭಾರತವು ಸಾಂಪ್ರದಾಯಿಕ ಇಂಧನ ಮೂಲಗಳಿಂದ ಹಿಡಿದು ನವೀಕರಿಸಬಹುದಾದ ಮೂಲಗಳ ತನಕ ಇಂಧನ ಪರಿವರ್ತನೆಯ ಮಹತ್ವಾಕಾಂಕ್ಷೆಯ ಪಯಣ ಆರಂಭಿಸಿದೆ.

### ಸರ್ಕಾರದ ಉಪಕ್ರಮಗಳು ಮತ್ತು ಸಾಧನೆಗಳು

ಭಾರತ ಸರ್ಕಾರವು ಸಮಗ್ರ ನೀತಿಗಳು ಮತ್ತು ಉಪಕ್ರಮಗಳ ಮೂಲಕ ನವೀಕರಿಸಬಹುದಾದ ಇಂಧನ ಮೂಲಗಳ ಅಳವಡಿಕೆ ಮುಂದುವರಿಸಲು ಬಲವಾದ ಬದ್ಧತೆ ಪ್ರದರ್ಶಿಸಿದೆ. 2008ರಲ್ಲಿ ಪರಿಚಯಿಸಲಾದ

* ಕಾರ್ಯದರ್ಶಿ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಸಚಿವಾಲಯ. ಇಮೇಲ್: secy-mnre@nic.in

ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾಯೋಜನೆ (ಎನ್‌ಎಪಿಸಿಸಿ), ದೇಶದ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಭದ್ರ ಬುನಾದಿ ಹಾಕಿತು. ಎನ್‌ಎಪಿಸಿಸಿ ಅಡಿ, ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು, ಪ್ರತಿಯೊಂದು ಕಾರ್ಯಕ್ರಮವು ಸಹ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಗ್ಗಿಸುವುದು ಮತ್ತು ಹೊಂದಾಣಿಕೆಗೆ ಕೊಡುಗೆ ನೀಡುವ ನಿರ್ದಿಷ್ಟ ವಲಯದ ಮೇಲೆ ಗಮನ ಕೇಂದ್ರೀಕರಿಸುತ್ತಿದೆ.

ಈ ಕಾರ್ಯಕ್ರಮಗಳ ಪೈಕಿ, ರಾಷ್ಟ್ರೀಯ ಸೌರಶಕ್ತಿ ಮಿಷನ್ ಅನಾವರಣವು ದೇಶದ ನವೀಕರಿಸಬಹುದಾದ ಇಂಧನ ವಲಯದ ಯಶೋಗಾಥೆಯ ಅದ್ಭುತ ಅಥವಾ ಮಹತ್ವಪೂರ್ಣ ಕ್ಷಣವಾಗಿದೆ. 2010ರಲ್ಲಿ ಪ್ರಾರಂಭವಾದ ಈ ಮಿಷನ್ ಸೌರಶಕ್ತಿ ತಂತ್ರಜ್ಞಾನಗಳ ನಿಯೋಜನೆ ಉತ್ತೇಜಿಸಲು ಮತ್ತು ಸೌರ ವಿದ್ಯುತ್ ಉತ್ಪಾದನೆಯ ವೆಚ್ಚ ಕಡಿಮೆ ಮಾಡುವ ಗುರಿ ಹೊಂದಿದೆ. 2022ರ ವೇಳೆಗೆ 20 ಗಿಗಾವ್ಯಾಟ್ ವಿದ್ಯುತ್ ಉತ್ಪಾದನೆ ಆರಂಭಿಕ ಗುರಿಗೆ ಪ್ರತಿಯಾಗಿ 100 ಗಿಗಾ ವ್ಯಾಟ್ ಉತ್ಪಾದನೆ ಮಾಡಿ, 5 ಪಟ್ಟು ಹೆಚ್ಚಳ ಕಂಡಿದೆ. ನವೀಕರಿಸಬಹುದಾದ ಇಂಧನ ಉತ್ಪಾದನೆಯ ಒಟ್ಟು ಗುರಿಯನ್ನು 175 ಗಿಗಾವ್ಯಾಟ್‌ಗೆ ಪರಿಷ್ಕರಿಸಲಾಗಿದೆ. 2030ರ ವೇಳೆಗೆ ಉರುವಲು ರಹಿತ ಇಂಧನ ಮೂಲಗಳ ಮೂಲಕ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಗುರಿಯನ್ನು ಇತ್ತೀಚೆಗೆ 500 ಗಿಗಾ ವ್ಯಾಟ್‌ಗೆ ಪರಿಷ್ಕರಿಸಲಾಗಿದೆ. ಸಾಂಪ್ರದಾಯಿಕ ಇಂಧನ ಮೂಲಗಳಿಂದ ನವೀಕರಿಸಬಹುದಾದ ಇಂಧನ ಮೂಲಗಳಿಗೆ ಪರಿವರ್ತನೆಯಾಗುವ ಅಥವಾ ಸಾಗುವ ಸರ್ಕಾರದ ಉದ್ದೇಶಗಳ ವೇಗ ಮತ್ತು ಪ್ರಮಾಣವನ್ನು ಇದು ಪ್ರತಿಬಿಂಬಿಸುತ್ತಿದೆ.

2023 ಆರ್ಥಿಕ ವರ್ಷದ ಅಂತ್ಯದ ವೇಳೆಗೆ 175 ಗಿಗಾ ವ್ಯಾಟ್ ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆ ಗುರಿಗೆ ಪ್ರತಿಯಾಗಿ ಒಟ್ಟು 172 ಗಿಗಾ ವ್ಯಾಟ್ ಉತ್ಪಾದನೆ ಮಾಡಲಾಗಿದೆ. 2014ರ ಆರ್ಥಿಕ ವರ್ಷದ 76 ಗಿಗಾ ವ್ಯಾಟ್ ಉತ್ಪಾದನೆಗೆ ಹೋಲಿಸಿದಲ್ಲಿ 126% ಹೆಚ್ಚಳ ಕಂಡಿದೆ. ಇದಲ್ಲದೆ, ಸೌರಶಕ್ತಿ ವಿದ್ಯುತ್ ಉತ್ಪಾದನೆ ಸಾಮರ್ಥ್ಯವು ಸುಮಾರು 45 ಗಿಗಾ ವ್ಯಾಟ್ ಸೇರ್ಪಡೆಯೊಂದಿಗೆ ಅಂದಾಜು 200%

## ಭಾರತದ ವಿದ್ಯುತ್ ವಲಯದ ರೂಪಾಂತರ

**ಕಳೆದ 9 ವರ್ಷಗಳಲ್ಲಿ 175ಜಿಡಬ್ಲ್ಯೂ ಉತ್ಪಾದನಾ ಸಾಮರ್ಥ್ಯ ಸೇರಿಸುವ** ಮೂಲಕ ವಿದ್ಯುತ್ ಕೊರತೆಯಿಂದ ಮಿಗತೆಗೆ

ನವೀಕರಿಸಬಲ್ಲ ಇಂಧನದ ಒಟ್ಟು ಸ್ಥಾಪಿತ **ಸಾಮರ್ಥ್ಯದಲ್ಲಿ 43%ರೊಂದಿಗೆ ಜಾಗತಿಕವಾಗಿ 4ನೇ ಸ್ಥಾನ**

ಸೌಭಾಗ್ಯ ಯೋಜನೆಯಡಿ **2.86 ಕೋಟಿ ಮನೆಗಳಿಗೆ ವಿದ್ಯುತ್ ಸಂಪರ್ಕ**

ಡಿಡಿಯುಜಿಜೆವೈ ಅಡಿ **100% ಹಳ್ಳಿಗಳ ವಿದ್ಯುದೀಕರಣ**

ಉಜಾಲಾ ಅಡಿ ಎಲ್‌ಇಡಿ ಬಲ್ಬ್‌ಗಳ ಬೆಲೆ 2014–2019 **ರ ಅವಧಿಯಲ್ಲಿ ಸರಿಸುಮಾರು 90% ಇಳಿತ**

**ಆರ್‌ಡಿಎಸ್‌ಎಸ್ ಅಡಿ ಡಿಸ್ಕಾಮ್‌ಗಳ ವಿತರಣಾ ನಷ್ಟ** 21.5% ನಿಂದ 16.5% ಕ್ಕೆ ಇಳಿಕೆ

ಹೆಚ್ಚಾಗಿದೆ. ಪವನಶಕ್ತಿ ಮೂಲಗಳಿಂದ ವಿದ್ಯುತ್ ಉತ್ಪಾದನೆ ಸಾಮರ್ಥ್ಯವು ಇದೇ ಅವಧಿ(2014)ಯಲ್ಲಿ 9 ಗಿಗಾ ವ್ಯಾಟ್ ಹೆಚ್ಚಾಗಿದೆ. 2014 ರಲ್ಲಿ ಒಟ್ಟು ವಿದ್ಯುತ್ ಉತ್ಪಾದನೆ ಪೈಕಿ ನವೀಕರಿಸಬಹುದಾದ ಮೂಲಗಳ ಇಂಧನ ಉತ್ಪಾದನೆಯ ಪಾಲು 17.2% ಇತ್ತು. ಅದು 2023ರಲ್ಲಿ 22.5%ಗೆ ಏರಿಕೆ ಕಂಡಿದೆ. ಭಾರತದ ಇಂಧನ ವಲಯವು 78 ಶತಕೋಟಿ ಡಾಲರ್ ಹೂಡಿಕೆ ಆಕರ್ಷಿಸಿದೆ. ಅದರಲ್ಲಿ ವಿದೇಶಿ ನೇರ ಹೂಡಿಕೆ ಮೂಲಕವೇ 10 ಶತಕೋಟಿ ಡಾಲರ್ ಹರಿದುಬಂದಿದೆ. ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರವು ಇಂಧನ ವಲಯದ ಅಭಿವೃದ್ಧಿಗೆ 20,000 ಕೋಟಿ ರೂ.ಗಿಂತ ಹೆಚ್ಚಿನ ಹಣವನ್ನು ಬಜೆಟ್ ಮೂಲಕ ಒದಗಿಸಿದೆ.

ನವೀಕರಿಸಬಹುದಾದ ಇಂಧನ ಮೂಲಗಳ ಇಂಧನ ಉತ್ಪಾದನೆಯಲ್ಲಿ ಭಾರತವು ಇದೀಗ ಜಾಗತಿಕ ಮಟ್ಟದಲ್ಲಿ 4ನೇ ಅತಿದೊಡ್ಡ ಸ್ಥಾಪಿತ ಸಾಮರ್ಥ್ಯ ಹೊಂದಿರುವ ರಾಷ್ಟ್ರವೆನಿಸಿದೆ. ಜಾಗತಿಕ ಪವನಶಕ್ತಿ ಮತ್ತು ಜೈವಿಕ ಇಂಧನ ಸ್ಥಾಪಿತ ಸಾಮರ್ಥ್ಯದಲ್ಲೂ ಭಾರತ 4ನೇ ಸ್ಥಾನಕ್ಕೆ ಏರಿದೆ. ಆದರೆ ಸೌರಶಕ್ತಿ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯದಲ್ಲಿ 5 ನೇ ಸ್ಥಾನದಲ್ಲಿದ್ದು, ಜರ್ಮನಿ ನಂತರದ ಸ್ಥಾನದಲ್ಲಿ ನಿಂತಿದೆ. ಕಳೆದ 5 ವರ್ಷಗಳಲ್ಲಿ (2017–22) 63ಗಿಗಾ ವ್ಯಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಾಮರ್ಥ್ಯವನ್ನು ಸೇರಿಸಲಾಗಿದೆ. ಇದು ಆ ಅವಧಿಯಲ್ಲಿ ಜಾಗತಿಕವಾಗಿ ಆಗಿರುವ 3ನೇ ಅತ್ಯಧಿಕ ಉತ್ಪಾದನಾ ಸಾಮರ್ಥ್ಯವಾಗಿದೆ.

ಕಳೆದ 5 ವರ್ಷಗಳಲ್ಲಿ 70 ಗಿಗಾ ವ್ಯಾಟ್ ಸೌರಶಕ್ತಿ ಯೋಜನೆಗಳು ಮತ್ತು 21 ಗಿಗಾ ವ್ಯಾಟ್ ಪವನಶಕ್ತಿ ಯೋಜನೆಗಳ (ಹೈಬ್ರಿಡ್ ಯೋಜನೆಗಳು ಸೇರಿದಂತೆ) ಹರಾಜು ಮಾಡಲಾಗಿದೆ. ಹರಾಜು ಪ್ರಕ್ರಿಯೆಯನ್ನು ಸುಗಮಗೊಳಿಸಲು ಸೌರಶಕ್ತಿ ಮತ್ತು ಪವನ ಶಕ್ತಿ ಯೋಜನೆಗಳಿಗೆ ಪ್ರಮಾಣಿತ ಹರಾಜು ಮಾರ್ಗಸೂಚಿಗಳನ್ನು ಸಹ ಪ್ರಕಟಿಸಲಾಗಿದೆ. ಇದಲ್ಲದೆ, ನವೀಕರಿಸಬಹುದಾದ ಇಂಧನ ಬಳಕೆ ಹೆಚ್ಚಿಸಲು ಸರ್ಕಾರ, 2030ರ ವರೆಗೆ ನವೀಕರಿಸಬಹುದಾದ ಖರೀದಿ ಬಾಧ್ಯತೆ (ಆರ್‌ಪಿಒ) ಮತ್ತು ಇಂಧನ ಶೇಖರಣಾ ಬಾಧ್ಯತೆ (ಇಎಸ್‌ಒ)ಯ ಮಾರ್ಗಸೂಚಿಗಳನ್ನೂ ಹೊರಡಿಸಿದೆ. ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ಉತ್ಪಾದನೆ ಆಗುವ ವಿದ್ಯುತ್ ಸಾಗಿಸಲು ಸಹಾಯ ಮಾಡಲು ಮುಕ್ತವಾಗಿ ಪ್ರವೇಶಿಸಬಹುದಾದ ಹಸಿರು ಯೋಜನೆ (ಗ್ರೀನ್ ಓಪನ್ ಆಕ್ಸೆಸ್) ಮತ್ತು ಹಸಿರು ಇಂಧನ ಮಾರುಕಟ್ಟೆ (ಗ್ರೀನ್ ಪರ್ವ ಮಾರ್ಕೆಟ್)ಗಳನ್ನು ಸಹ ಪರಿಚಯಿಸಲಾಗಿದೆ.

ನವೀಕರಿಸಬಹುದಾದ ಇಂಧನ ಮೂಲಗಳಿಂದ 500 ಗಿಗಾ ವ್ಯಾಟ್ ಉತ್ಪಾದನೆ ಸಾಮರ್ಥ್ಯದ ಮಹತ್ವಾಕಾಂಕ್ಷೆಯ ಗುರಿ ಸಾಧಿಸಲು, ಸಾಕಷ್ಟು ವಿತರಣೆ ಮತ್ತು ಪ್ರಸರಣ ಮೂಲಸೌಕರ್ಯ ನಿರ್ಮಿಸುವ

ಮೂಲಕ ಉತ್ಪಾದಿತ ವಿದ್ಯುತ್‌ನ ಸಾಗಾಟ ಅಥವಾ ಪ್ರಸರಣ ಖಚಿತಪಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಸರ್ಕಾರವು ಪ್ರಾರಂಭಿಸಿರುವ ಗ್ರೀನ್ ಎನರ್ಜಿ ಕಾರಿಡಾರ್ (ಜಿಇಸಿ) ಯೋಜನೆಯ 1ನೇ ಹಂತದ ಅಡಿ, 8,857 ಸಿಕೆಎಂ (ಸರ್ಕಿಟ್ ಕಿಲೋಮೀಟರ್) ಸಾಮರ್ಥ್ಯದ ಪ್ರಸರಣ ಮಾರ್ಗಗಳು ಮತ್ತು 20,868 ಎಂವಿಎ ಸಬ್‌ಸ್ಟೇಷನ್‌ಗಳ ಸಾಮರ್ಥ್ಯ ಪೂರ್ಣಗೊಳಿಸಲಾಗಿದೆ. 2026ರ ವೇಳೆಗೆ 10,750 ಸಿಕೆಎಂ ಪ್ರಸರಣ ಮಾರ್ಗಗಳು ಮತ್ತು 27500 ಎಂವಿಎ ಸಬ್‌ಸ್ಟೇಷನ್ ಸಾಮರ್ಥ್ಯ ನಿರ್ಮಾಣ ಗುರಿಯೊಂದಿಗೆ 7 ರಾಜ್ಯಗಳಲ್ಲಿ ಯೋಜನೆಯ 2ನೇ ಹಂತ ಆರಂಭಿಸಲಾಗಿದೆ. ಎಲ್ಲಾ ನವೀಕರಿಸಬಹುದಾದ ಇಂಧನ ಉತ್ಪಾದನೆ ಯೋಜನೆಗಳನ್ನು ಉತ್ತೇಜಿಸಲು ಸರ್ಕಾರವು ಅಂತಾರಾಜ್ಯ ಪ್ರಸರಣ ವ್ಯವಸ್ಥೆಗೆ ಶುಲ್ಕ ವಿನಾಯಿತಿಯ ಪ್ರಯೋಜನವನ್ನು 2025 ಜೂನ್ ವರೆಗೆ ವಿಸ್ತರಿಸಿದೆ. ಹಸಿರು ಹೈಡ್ರೋಜನ್ ಯೋಜನೆಗಳಿಗೆ 2030 ಡಿಸೆಂಬರ್‌ವರೆಗೆ ಶುಲ್ಕ ವಿನಾಯಿತಿ (ಮನ್ನಾ ಯೋಜನೆ) ವಿಸ್ತರಿಸಲಾಗಿದೆ. ಕಡಲಾಚೆಯ ಪವನಶಕ್ತಿ ಯೋಜನೆಗಳಿಗೆ ಇದನ್ನು 2032 ಡಿಸೆಂಬರ್‌ವರೆಗೆ ವಿಸ್ತರಿಸಲಾಗಿದೆ.

ಸೌರಶಕ್ತಿ ಉತ್ತೇಜನಕ್ಕಾಗಿ ಹಲವಾರು ಪ್ರಮುಖ ಯೋಜನೆಗಳು ಮತ್ತು ಗುರಿಗಳನ್ನು ಘೋಷಿಸಲಾಗಿದೆ: 40 ಗಿಗಾ ವ್ಯಾಟ್ ಗುರಿಯೊಂದಿಗೆ ಸೌರ ಪಾರ್ಕ್‌ಗಳ ಯೋಜನೆ; 30.8 ಗಿಗಾ ವ್ಯಾಟ್ ಗುರಿಯೊಂದಿಗೆ ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಮ್ ಉತ್ಥಾನ್ ಮಹಾಭಿಯಾನ್ (ಪಿಎಂ–ಕುಸುಮ್) ಯೋಜನೆ; ರೂಫ್‌ಟಾಪ್ ಸೋಲಾರ್ (ಆರ್‌ಟಿಎಸ್) ಹಂತ–2 ಯೋಜನೆಯು 4 ಗಿಗಾ ವ್ಯಾಟ್ ಗುರಿಯೊಂದಿಗೆ ಮತ್ತು ಸಿಪಿಎಸ್ಯು ಯೋಜನೆ (ಪಿಎಚ್–1 & 2) 8.2 ಗಿಗಾ ವ್ಯಾಟ್ ಗುರಿ ನಿಗದಿಪಡಿಸಲಾಗಿದೆ. ಸರ್ಕಾರವು 2030ರ ವೇಳೆಗೆ 5 ಎಂಎಂಟಿಪಿಎ (ವಾರ್ಷಿಕ ದಶಲಕ್ಷ ಮೆಟ್ರಿಕ್ ಟನ್) ಉತ್ಪಾದನಾ ಸಾಮರ್ಥ್ಯದ ಗುರಿಯೊಂದಿಗೆ 2023 ಜನವರಿಯಲ್ಲಿ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ (ಎನ್‌ಜಿಎಚ್‌ಎಂ) ಪ್ರಾರಂಭಿಸಿದೆ. ಇಲ್ಲಿಯವರೆಗೆ 49 ಹಸಿರು ಹೈಡ್ರೋಜನ್ ಉತ್ಪಾದನೆ ಮತ್ತು 19 ಎಲೆಕ್ಟ್ರೋಲೈಸರ್ ಉತ್ಪಾದನಾ ಯೋಜನೆಗಳನ್ನು ಘೋಷಿಸಲಾಗಿದೆ. ಹಸಿರು ಹೈಡ್ರೋಜನ್ ಉತ್ಪಾದನೆ ಮತ್ತು ಎಲೆಕ್ಟ್ರೋಲೈಸರ್ ಉತ್ಪಾದನೆ ಉತ್ತೇಜಿಸಲು ಸರ್ಕಾರವು ವಿವಿಧ ಯೋಜನೆಗಳನ್ನು ಘೋಷಿಸಿದೆ.

ಆತ್ಮನಿರ್ಭರ್ ಭಾರತ್ ನಿರೂಪಣಾ ವಿಷಯದೊಂದಿಗೆ, ಸರ್ಕಾರವು ಸ್ಥಳೀಯ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವತ್ತ ಗಮನ ಹರಿಸಿದೆ. ಸೌರಶಕ್ತಿ ಪಿವಿ (ಫೋಟೊ ವೋಲ್ಟಾಯಿಕ್) ಮಾಡ್ಯೂಲ್ ಉತ್ಪಾದನಾ ಸಾಮರ್ಥ್ಯವು 2018ರಲ್ಲಿ 10 ಗಿಗಾ ವ್ಯಾಟ್ ಇತ್ತು. ಅದೀಗ 2023ರಲ್ಲಿ 25 ಗಿಗಾ ವ್ಯಾಟ್‌ಗೆ (150% ಹೆಚ್ಚಳ) ಏರಿಕೆ ಕಂಡಿದೆ. ಅದೇ ಅವಧಿಯಲ್ಲಿ ಸೌರಶಕ್ತಿ ಪಿವಿ ಕೋಶಗಳ(ಸೆಲ್) ಉತ್ಪಾದನಾ ಸಾಮರ್ಥ್ಯವು 3 ಗಿಗಾ ವ್ಯಾಟ್ ನಿಂದ 6 ಗಿಗಾ ವ್ಯಾಟ್ ಗೆ ದ್ವಿಗುಣಗೊಂಡಿದೆ. ಸ್ಥಳೀಯ ಉತ್ಪಾದನೆಯನ್ನು ಇನ್ನಷ್ಟು ಉತ್ತೇಜಿಸಲು, ಉತ್ಪಾದನೆ ಸಂಪರ್ಕಿತ ಪ್ರೋತ್ಸಾಹಕ ಯೋಜನೆಗಳಿಗೆ ಟೆಂಡರ್‌ಗಳನ್ನು (3 ಗಿಗಾ ವ್ಯಾಟ್ ಸೌರಶಕ್ತಿ ಕೋಶ ಮತ್ತು 3 ಗಿಗಾ ವ್ಯಾಟ್ ಸೌಶಕ್ತಿ ಘಟಕ) ನೀಡಲಾಗಿದೆ.

ನವೀಕರಿಸಬಹುದಾದ ಇಂಧನ ಉತ್ಪಾದನಾ ವಲಯದ ಪ್ರಮುಖ ಉಪಕ್ರಮಗಳಲ್ಲಿ ಒಂದಾದ ಉತ್ಪಾದನೆ ಸಂಪರ್ಕಿತ ಉತ್ತೇಜನಾ ಯೋಜನೆ (ಪಿಎಲ್‌ಐ)ಯು 8,737 ಮೆಗಾ ವ್ಯಾಟ್ ಸಾಮರ್ಥ್ಯದೊಂದಿಗೆ (ಸಂಪೂರ್ಣವಾಗಿ ಸಂಯೋಜಿತ) ಮೊದಲ ಹಂತದಲ್ಲಿ ನೀಡಲಾಗುತ್ತದೆ. 39,600 ಮೆಗಾ ವ್ಯಾಟ್ ಸಾಮರ್ಥ್ಯ (ಸಂಪೂರ್ಣ/ಭಾಗಶಃ ಸಂಯೋಜಿತ)ವನ್ನು 2ನೇ ಹಂತದಲ್ಲಿ ನೀಡಲಾಗುತ್ತದೆ. ಇವುಗಳ ಹೊರತಾಗಿ, ಸ್ಥಳೀಯ ಉತ್ಪಾದನೆಗೆ ಅಗತ್ಯವಾದ ಉತ್ತೇಜನ ನೀಡಲು ಸೌರಶಕ್ತಿ ಮಾಡ್ಯೂಲ್‌ಗಳು ಮತ್ತು ಕೋಶಗಳ ಮೇಲೆ ದೇಶೀಯ ವಿಷಯ ಸಂಬಂಧಿತ ಯೋಜನೆಗಳಿಗೆ (ಸಿಪಿಎಸ್ಯು ಯೋಜನೆ, ಪಿಎಂ–ಕುಸುಮ್ ಮತ್ತು ಆರ್ ಟಿಎಸ್ ಯೋಜನೆ) ಮತ್ತು ಮೂಲ ಸೀಮಾಸುಂಕ (ಬಿಸಿಡಿ) ಪರಿಚಯಿಸಲಾಗಿದೆ. 2026ರ ವೇಳೆಗೆ ವಾರ್ಷಿಕವಾಗಿ ಒಟ್ಟು 75 ಗಿಗಾ ವ್ಯಾಟ್ ಸೌರಶಕ್ತಿ ಘಟಕ ಉತ್ಪಾದನಾ ಸಾಮರ್ಥ್ಯ ಮತ್ತು 55 ಗಿಗಾ ವ್ಯಾಟ್ ಸೌರಶಕ್ತಿ ಕೋಶ ಉತ್ಪಾದನಾ ಸಾಮರ್ಥ್ಯ ಸಾಧಿಸುವ ಸಾಧ್ಯತೆಯಿದೆ. ಪ್ರತಿ ವರ್ಷ 15 ಗಿಗಾ ವ್ಯಾಟ್ ಗಿಂತ ಹೆಚ್ಚಿನ ಪವನಶಕ್ತಿ ಟರ್ಬೈನ್ ಉತ್ಪಾದನಾ ಸಾಮರ್ಥ್ಯ ಮತ್ತು ದೇಶೀಯವಾಗಿ 70–80% ಸಾಮರ್ಥ್ಯ ಅಭಿವೃದ್ಧಿಪಡಿಸಲಾಗಿದೆ.




ಇಂಧನ ವಲಯದಲ್ಲಿ ಕೌಶಲ್ಯ ಸುಧಾರಿಸಲು, ಸೂರ್ಯಮಿತ್ರ ಕಾರ್ಯಕ್ರಮದ ಅಡಿ, 32,000ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಲಾಗಿದೆ. ಪವನ ವಿದ್ಯುತ್ ಯೋಜನೆಗಳಿಗೆ ವಾಯುಮಿತ್ರ ಮತ್ತು ಸಣ್ಣ ಜಲವಿದ್ಯುತ್ ಸ್ಥಾವರಗಳಿಗೆ ಜಲ–ಊರ್ಜಾಮಿತ್ರವನ್ನು ಸಹ ಪ್ರಾರಂಭಿಸಲಾಗಿದೆ, ಇವುಗಳಿಗೆ ತರಬೇತಿ ಕಾರ್ಯಕ್ರಮಗಳು ಸಹ ನಡೆಯುತ್ತಿವೆ.

### ಸವಾಲುಗಳು ಮತ್ತು ಮುಂದಿರುವ ದಾರಿ

ಭಾರತದ ಇಂಧನ ಪರಿವರ್ತನೆಯು ಗಮನಾರ್ಹವಾಗಿದ್ದರೂ, ಇದಕ್ಕೆ ಸವಾಲುಗಳು ಸಹ ಅಷ್ಟೇ ಇವೆ. ಸೌರಶಕ್ತಿ ಮತ್ತು ಪವನಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳ ಮಧ್ಯಂತರ ಸ್ವಭಾವವು ಪ್ರಾಥಮಿಕ ಕಾಳಜಿಗಳಲ್ಲಿ ಒಂದಾಗಿದೆ. ಉತ್ಪಾದನೆಯಲ್ಲಿನ ಏರಿಳಿತಗಳಿಂದಾಗಿ ವಿದ್ಯುತ್ ಪೂರೈಕೆ ಮತ್ತು ಬೇಡಿಕೆ ಸಮತೋಲನಗೊಳಿಸುವುದು ಸಂಕೀರ್ಣವಾಗುತ್ತಿದೆ. ಬ್ಯಾಟರಿಗಳು ಮತ್ತು ಪಂಪ್ಡ್ ಹೈಡ್ರೋ ಸ್ಟೋರೇಜ್‌ಗಳಂತಹ ಸುಧಾರಿತ ಇಂಧನ ಶೇಖರಣಾ ತಂತ್ರಜ್ಞಾನಗಳ ಅಳವಡಿಕೆಯು ಗರಿಷ್ಠ ಉತ್ಪಾದನೆಯ ಅವಧಿಯಲ್ಲಿ ಹೆಚ್ಚುವರಿ ಇಂಧನ ಸಂಗ್ರಹಿಸಲು ಮತ್ತು ಕಡಿಮೆ ಉತ್ಪಾದನೆ ಸಮಯದಲ್ಲಿ ಅದನ್ನು ಬಿಡುಗಡೆ ಮಾಡಲು ಅತ್ಯಗತ್ಯ.

ಇದಲ್ಲದೆ, ಅಸ್ತಿತ್ವದಲ್ಲಿರುವ ಗ್ರಿಡ್ ಮೂಲಸೌಕರ್ಯಕ್ಕೆ ನವೀಕರಿಸಬಹುದಾದ

ಇಂಧನ ಏಕೀಕರಣ ಅಥವಾ ಸಂಯೋಜನೆಗೆ ಗಮನಾರ್ಹ ಹೂಡಿಕೆಗಳು ಮತ್ತು ನವೀಕರಣಗಳ ಅಗತ್ಯವಿದೆ. ಗ್ರಿಡ್ ಸ್ಥಿರತೆ ಮತ್ತು ವಿಶ್ವಾಸಾರ್ಹತೆ ಕಾಪಾಡಿಕೊಳ್ಳಲು ನವೀಕರಿಸಬಹುದಾದ ಮತ್ತು ವಿಕೇಂದ್ರೀಕೃತ ಇಂಧನ ಮೂಲಗಳನ್ನು ನಿರ್ವಹಿಸುವ ಸಾಮರ್ಥ್ಯವಿರುವ ಸದೃಢವಾದ ಪ್ರಸರಣ ಜಾಲದ ಅಭಿವೃದ್ಧಿ ನಿರ್ಣಾಯಕವಾಗಿದೆ.

ನವೀಕರಿಸಬಹುದಾದ ಇಂಧನ ಮೂಲ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಈ ಮುಂದಿನ ಸವಾಲುಗಳು ಎದುರಾಗಿವೆ:

1. ಭೂಮಿ: ನವೀಕರಿಸಬಹುದಾದ ಇಂಧನ ಮೂಲ ಯೋಜನೆಗಳಿಗೆ ಭೂಮಿಯ ಲಭ್ಯತೆ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಲಭ್ಯವಿರುವ ಭೂಮಿ ಪರಿಗಣಿಸಿ ರಾಜ್ಯಗಳು ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸಿದ್ಧಪಡಿಸಿ, ಈ ಸಮಸ್ಯೆಯನ್ನು ಪರಿಹರಿಸಬಹುದು.

2. ನಿಯಂತ್ರಕ ಸಮಸ್ಯೆಗಳು: ನವೀಕರಿಸಬಹುದಾದ ಇಂಧನ ಮೂಲಗಳ ಸ್ಥಾಪನೆಯ ಗುರಿಗಳನ್ನು ಸಾಧಿಸಲು, ಈ ಮುಂದಿನ ಅಂಶಗಳ ಮೇಲೆ ರಾಜ್ಯ ಸರ್ಕಾರಗಳಿಂದ ಶ್ರದ್ಧೆಯ ಕ್ರಮದ ಅಗತ್ಯವಿದೆ:

3. ನವೀಕರಿಸಬಹುದಾದ ಖರೀದಿ ಬಾಧ್ಯತೆ(ಆರ್‌ಪಿಓ) ಅನುಸರಣೆ.

4. ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳು (ಎಸ್‌ಇಆರ್‌ಸಿ) ಸುಂಕ ವ್ಯವಸ್ಥೆಯನ್ನು ಸಮಯೋಚಿತವಾಗಿ ಅಳವಡಿಸಿಕೊಳ್ಳುವುದು

5. ರಾಜ್ಯಗಳು ಹೆಚ್ಚುವರಿ ಶುಲ್ಕವಿಧಿಸುವುದನ್ನು ತಪ್ಪಿಸುವುದು

6. ಪ್ರಸರಣ ಮೂಲಸೌಕರ್ಯ: ಇಂಧನ ಉತ್ಪಾದನೆ ಗುರಿಗಳನ್ನು ಸಾಧಿಸಲು ವಾಸ್ತವಿಕ ವಿದ್ಯುತ್ ಪ್ರಸರಣ ಮತ್ತು ನವೀಕರಿಸಬಹುದಾದ ಇಂಧನ ಮೂಲ ಯೋಜನೆಗಳ ಪ್ಲಾನಿಂಗ್ ಜತೆಗೆ ನಿಯಮಿತ ಮೇಲ್ವಿಚಾರಣೆ ಮತ್ತು ಪರಿಹಾರ ಕ್ರಮಗಳ ಅಗತ್ಯವಿದೆ.

## ಆರ್ಥಿಕ ಮತ್ತು ಪರಿಸರದ ಪರಿಣಾಮಗಳು

ಸಾಂಪ್ರದಾಯಿಕ ಮೂಲಗಳಿಂದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ದೇಶದ ಪರಿವರ್ತನೆಯು ಹಲವಾರು ಆರ್ಥಿಕ ಮತ್ತು ಪರಿಸರ ಪರಿಣಾಮಗಳನ್ನು ಹೊಂದಿದೆ. ಆರ್ಥಿಕ ರಂಗವನ್ನು ಗಮನಿಸುವುದಾದರೆ, ನವೀಕರಿಸಬಹುದಾದ ಇಂಧನ ಕ್ಷೇತ್ರದ ಬೆಳವಣಿಗೆಯು ಅಪಾರ ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುತ್ತದೆ, ತಾಂತ್ರಿಕ ಆವಿಷ್ಕಾರವನ್ನು ಉತ್ತೇಜಿಸುತ್ತದೆ ಮತ್ತು ಹಿಂದೆ ವಿವರಿಸಿದಂತೆ ಅಪಾರ ವಿದೇಶಿ ಹೂಡಿಕೆ ಆಕರ್ಷಿಸುತ್ತದೆ. ಇದಲ್ಲದೆ, ಉರುವಲು ಇಂಧನ ಆಮದು ನಿಯಂತ್ರಣವು ಇಂಧನ ಭದ್ರತೆಯನ್ನು ಹೆಚ್ಚಿಸುತ್ತದೆ. ಜಾಗತಿಕ ಇಂಧನ ಮಾರುಕಟ್ಟೆಯ ಏರಿಳಿತಗಳಿಗೆ ದೇಶದ ಅರ್ಥ ವ್ಯವಸ್ಥೆಯ ಏರಿಳಿತ ಅಥವಾ ಚಂಚಲತೆಯನ್ನು ಕಡಿಮೆ ಮಾಡುತ್ತದೆ.

ಪರಿಸರ ವಿಷಯದಲ್ಲಿ, ಉರುವಲು ಇಂಧನಗಳಿಂದ ದೂರವಿರುವುದರಿಂದ ಇಂಗಾಲ ಹೊರಸೂಸುವಿಕೆಯನ್ನು ಗಣನೀಯವಾಗಿ ತಗ್ಗಿಸುತ್ತದೆ, ವಾಯುಮಾಲಿನ್ಯ ತಗ್ಗಿಸುತ್ತದೆ ಮತ್ತು ಸಾರ್ವಜನಿಕ ಆರೋಗ್ಯ ಕಾಪಾಡುತ್ತದೆ. ಗ್ಲಾಸ್ಗೋದಲ್ಲಿ ನಡೆದ ಸಿಓಪಿ ಕಾಪ್26 (ಹವಾಮಾನ ಬದಲಾವಣೆಯ ಶೃಂಗಸಭೆ) ಸಮಯದಲ್ಲಿ, ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹವಾಮಾನ ಬದಲಾವಣೆಯ ಈ ಸವಾಲು ಎದುರಿಸಲು 5 ಅಮೃತ ಅಂಶಗಳಿಂದ ಕೂಡಿದ ಪಂಚಾಮೃತ ಘೋಷಿಸಿದರು.

ಪಂಚಾಮೃತದ ಈ ಅಂಶಗಳು ಹವಾಮಾನ ಬದಲಾವಣೆಯ ತುರ್ತು ಪರಿಸ್ಥಿತಿ ಎದುರಿಸಲು ದೇಶವು ತನ್ನದೇ ಆದ ಕೊಡುಗೆ ನೀಡುತ್ತಿದೆ. ನವೀಕರಿಸಬಹುದಾದ ಇಂಧನ ಉತ್ಪಾದನೆಯ ಭಾರತದ ಬದ್ಧತೆಯು, ಅದರ ಅಂತಾರಾಷ್ಟ್ರೀಯ ಹವಾಮಾನ ಪ್ರಸಂಕಲ್ಪಗಳೊಂದಿಗೆ ಹೊಂದಿಕೆಯಾಗುತ್ತದೆ. ಈ ವಿಚಾರದಲ್ಲಿ ಭಾರತವು ಜಾಗತಿಕ ನಾಯಕನಾಗಿ ತನ್ನ ಖ್ಯಾತಿ ಹೆಚ್ಚಿಸಿಕೊಂಡಿದೆ ಎಂಬುದನ್ನು ಈ ಮೇಲಿನ ಚರ್ಚೆಗಳು ಪ್ರತಿಬಿಂಬಿಸುತ್ತಿವೆ.

## ಸಮಾಪನ

ಸಾಂಪ್ರದಾಯಿಕ ಇಂಧನ ಮೂಲಗಳಿಂದ ನವೀಕರಿಸಬಹುದಾದ ಇಂಧನ ಮೂಲಗಳಿಗೆ ಪರಿವರ್ತನೆಯಾದ ಇಂಧನ ಉತ್ಪಾದನೆಯ ಭಾರತದ ಪಯಣವು ಸುಸ್ಥಿರ ಇಂಧನ ಭವಿಷ್ಯದತ್ತ ಒಂದು ಸ್ಮರಣೀಯ ಹೆಜ್ಜೆಯನ್ನು ಸೂಚಿಸುತ್ತದೆ. ಮಹತ್ವಾಕಾಂಕ್ಷೆಯ ನವೀಕರಿಸಬಹುದಾದ ಇಂಧನ ಗುರಿಗಳಿಗೆ ಸರ್ಕಾರದ ಅಚಲವಾದ ಬದ್ಧತೆ, ನವೀನ ನೀತಿಗಳು ಮತ್ತು ಪ್ರೋತ್ಸಾಹಗಳೊಂದಿಗೆ ಸೇರಿಕೊಂಡು ಹಸಿರು ಇಂಧನ ವಲಯಕ್ಕೆ ಸೂಕ್ತ ವೇದಿಕೆ ಸಿದ್ಧಪಡಿಸಿದೆ. ಸೌರಶಕ್ತಿಯ ಹೆಚ್ಚುತ್ತಿರುವ ಜನಪ್ರಿಯತೆ, ಪವನಶಕ್ತಿಯ ಸ್ಥಿರ ಬೆಳವಣಿಗೆ ಮತ್ತು ಇತರೆ ನವೀಕರಿಸಬಹುದಾದ ಇಂಧನ ಮೂಲಗಳ ಪರಿಶೋಧನೆಯು ಆರ್ಥಿಕ ಪ್ರಗತಿ ಮತ್ತು ಪರಿಸರ ಯೋಗಕ್ಷೇಮದ ನಡುವೆ ಸಮತೋಲನ ಸಾಧಿಸುವ ಭಾರತದ ಸಂಕಲ್ಪವನ್ನು ಸೂಚಿಸುತ್ತಿದೆ. ಗ್ರಿಡ್ ಏಕೀಕರಣ, ಇಂಧನ ಸಂಗ್ರಹಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಸಂಕೀರ್ಣತೆಗಳನ್ನು ಭಾರತವು ಪರಿಹರಿಸುವಾಗ, ಸಾರ್ವಜನಿಕ ಮತ್ತು ಖಾಸಗಿ ವಲಯಗಳ ನಡುವಿನ ಸಹಭಾಗಿತ್ವ ನಿರ್ಣಾಯಕವಾಗಿದೆ. ಅಂತಾರಾಷ್ಟ್ರೀಯ ಪಾಲುದಾರಿಕೆಗಳು, ತಾಂತ್ರಿಕ ಪ್ರಗತಿಗಳು ಮತ್ತು ನುರಿತ ಕಾರ್ಯಪಡೆಯ ಅಭಿವೃದ್ಧಿಯು ಇಂಧನ ಪರಿವರ್ತನೆಯ ರಾಜಮಾರ್ಗ(ಪಥ)ವನ್ನು ರೂಪಿಸಲು ಪ್ರಮುಖ ಮತ್ತು ನಿರ್ಣಾಯಕ ಪಾತ್ರ ವಹಿಸಲಿದೆ.

ಕೊನೆಯದಾಗಿ, ನವೀಕರಿಸಬಹುದಾದ ಇಂಧನ ಮೂಲಗಳಿಗೆ ಭಾರತದ ಪರಿವರ್ತನೆಯು ಕೇವಲ ಇಂಧನ ರೂಪಾಂತರ ಮಾತ್ರವಲ್ಲದೆ, ತನ್ನ ನಾಗರಿಕರಿಗೆ ಸ್ವಚ್ಛ, ಹೆಚ್ಚು ಸಮರ್ಥನೀಯ ಮತ್ತು ಸಮೃದ್ಧ ಭವಿಷ್ಯ ಭದ್ರಪಡಿಸುವ ಅಚಲ ಬದ್ಧತೆಯಾಗಿದೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ನವೀಕರಿಸಬಹುದಾದ ಇಂಧನ ಮೂಲಗಳನ್ನು ಅಳವಡಿಸಿಕೊಳ್ಳುವ ಮೂಲಕ, ಹವಾಮಾನ ಬದಲಾವಣೆಯ ವಿರುದ್ಧ ಜಾಗತಿಕ ಹೋರಾಟಕ್ಕೆ ಕೊಡುಗೆ ನೀಡುವ ಮೂಲಕ ಮತ್ತು ವಿಶ್ವಾದ್ಯಂತ ರಾಷ್ಟ್ರಗಳನ್ನು ಅನುಸರಿಸಲು ಪ್ರೇರೇಪಿಸುವ ಮೂಲಕ ಭಾರತವು ಉದಾಹರಣೆಯಾಗಿ ಮುನ್ನಡೆಯಲು ಸಜ್ಜಾಗಿದೆ.

ಅವಶ್ಯಕ

# ನೆರೆ, ಬರ ಪರಿಹಾರ ಮತ್ತು ಸಂಸ್ಕರಿತ ನೀರಿನ ಮರುಬಳಕೆಯ ಪರಂಪರೆ

* ಡಾ. ಹರಿಹರ ಶ್ರೀನಿವಾಸರಾವ್

ನೀರು ಭೂಮಿಯ ಎಲ್ಲ ಜೀವಿಗಳ ಅತ್ಯವಶ್ಯಕ ಜೀವ ಧಾತು. ಪ್ರತ್ರಿಯೊಂದು ಜೀವಿಯ ಹುಟ್ಟು, ಬೆಳವಣಿಗೆ ಮತ್ತು ನಿರಂತರ ಚಟುವಟಿಗಳ ಮೂಲ ಚೇತನ. ಏಕೆಂದರೆ ಪ್ರತಿಯೊಂದು ಜೀವಕೋಶದಲ್ಲಿ ಇರುವ ನೀರಿನ ಅಂಶ ಶೇಕಡ 70 ಭಾಗ. ಆದರೆ ಜಗತ್ತಿನಲ್ಲಿ 75 ಭಾಗ ನೀರು ತುಂಬಿದ್ದರೂ ಉಪಯೋಗಕ್ಕೆ ಬರುವ ಉತ್ತಮ ಗುಣಮಟ್ಟದ ನೀರು ಈ ಭೂಮಿಯಲ್ಲಿರುವುದು ಕೇವಲ ಶೇಕಡ 1 ಭಾಗ. ಅದರ ಮೂಲ ಆಕರ ಮಳೆ ಒಂದೇ. ಮಳೆ ಯಾವಾಗಲೂ ಒಂದೇ ಸಮನಾಗಿ ಇಳೆಗೆ ದೊರಕುವುದಿಲ್ಲ. ಕೆಲವೆಡೆ ಅತಿ ವೃಷ್ಟಿಯಾದರೆ ಮತ್ತೆ ಕೆಲವು ಕಡೆಗಳಲ್ಲಿ ಅನಾವೃಷ್ಟಿ. ಹೀಗಾಗಿ ಅತಿವೃಷ್ಟಿಯಾದರೆ ನೆರೆ ಮತ್ತು ಕಡಿಮೆ ಮಳೆ ಬೀಳುವ ಎಡೆಗಳಲ್ಲಿ ಬರ, ಇವು ಪ್ರತಿ ವರುಷ ನಾವು ಅನುಭವಿಸುವ ಸಂಕಷ್ಟವಲ್ಲವೇ?

ಇದರ ಜೊತೆಗೆ ನವ ನವೀನ ನಾಗರಿಕತೆಯ ಅಳತೆಗೋಲಾಗಿರುವ ನೀರು ಮನುಷ್ಯನ ನಿರ್ಮಿತ ಕಾರ್ಖಾನೆ, ಕೈಗಾರಿಕೆಗಳು, ಬೇಕಾ ಬಿಟ್ಟಿಯಾಗಿ ಉಪಯೋಗಿಸಿ ಇಡೀ ಪ್ರಕೃತಿಯನ್ನೇ ಅಪವಿತ್ರಗೊಳಿಸಿ ಕಲುಷಿತಗೊಳಿಸುತ್ತಿರುವುದೂ ಇನ್ನೊಂದು ಪ್ರಮುಖ ಕಾರಣ, ನಗರ ನಿರ್ಮಾಣಕ್ಕೆ ತೊಡಗಿದಾಗ ನೈಸರ್ಗಿಕವಾಗಿ ದೊರೆಯುತ್ತಿರುವ ನದಿ, ಕೆರೆ, ಕಟ್ಟೆ ಇತ್ಯಾದಿಗಳನ್ನು ತನ್ನ ಸ್ವಾರ್ಥತೆಗೆ ಬಳಸಿಕೊಳ್ಳುವಾಗ ಉಂಟಾಗುವ ಪಾರ್ಶ್ವ ಪರಿಣಾಮವಾಗಿ ಕೃತಕ ನೆರೆಯೂ ಒಂದು.

ಬೆಳೆಗಳನ್ನು ಅತಿ ಶೀಘ್ರವಾಗಿ ಮತ್ತು ಉತ್ಕೃಷ್ಟವಾಗಿ ಬೆಳೆಯುವ




ಭರಾಟೆಯಲ್ಲಿ ಆಧುನಿಕ ಗೊಬ್ಬರಗಳ ಅತಿ ಉಪಯೋಗದಿಂದಾಗಿ ಭೂಮಿ ತನ್ನ ಮೂಲ ಗುಣವಾದ ಫಲವತ್ತತೆಯನ್ನೇ ಕಳೆದುಕೊಂಡು ಬರಡಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ಸಾಮಾನ್ಯ ವಿಷಯವೇ ಆಗಿದೆ. ಇಂತಹ ನಿರಂತರ ಸಮಸ್ಯೆಗೆ ಪರಿಹಾರವೇ ಇಲ್ಲವೇ? ಎಂದೊಮ್ಮೆ ಕ್ಷಣಕಾಲ ತಲ್ಲಣಿಸುವುದು ಮತ್ತು ಪರಿಹಾರಕ್ಕೆ ದಾರಿಗಳನ್ನು ಹುಡುಕುವತ್ತ ಮನಸ್ಸು ಧಾವಿಸುತ್ತದೆ. ಇಂತಹ ಕೆಲವು ಪರಿಹಾರಗಳನ್ನು ವ್ಯಕ್ತಿ ಮತ್ತು ಸಮಷ್ಟಿ ಪ್ರಯತ್ನಗಳಿಂದಾಗಿ ಹೇಗೆ ಸಾಧಿಸಬಹುದೆನ್ನುವ ಉತ್ತರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಾವು ಈಗ ಪರಿಗಣಿಸಬೇಕಾದ ಐತಿಹಾಸಿಕ ವೈಜ್ಞಾನಿಕ ಕೆಲವು ಪರಿಹಾರಗಳಿವು.

### ನೆರೆ ಪರಿಹಾರದ ಹರಿಹರದ ಐತಿಹಾಸಿಕ ದಾಖಲೆಗಳು

ಹರಿಹರವು ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದ್ದು ಸಾಂಸ್ಕೃತಿಕ ಮತ್ತ ಐತಿಹಾಸಿಕ ಕ್ಷೇತ್ರವಾಗಿದೆ. ಹರಿದ್ರಾ ನದಿಯು ತುಂಗಭದ್ರಾನದಿಯನ್ನು ಸಂಗಮಿಸುವ ಸ್ಥಳವಾದ ಹರಿಹರೇಶ್ವರ ದೇವಾಲಯದ ಸುತ್ತಲಿನ ಪರಿಸರದಲ್ಲಿ ಆಗಾಗ ನೆರೆಹಾವಳಿ ಉಂಟಾಗುತ್ತಿದ್ದಿತು. ಇದರಿಂದಾಗಿ, ಅಲ್ಲಿವಾಸಿಸುತ್ತಿದ್ದ ಅಗ್ರಹಾರದ ಮಹಾಜನರನ್ನೂ ಸೇರಿದಂತೆ ಜನ ಸಾಮಾನ್ಯರಿಗೂ ಬಹಳ ಕಷ್ಟ–ನಷ್ಟಗಳಾಗುತ್ತಿದ್ದವು.

ಇದರ ಪರಿಹಾರಕ್ಕೆಂದು ಅಂದಿನ ವಿಜಯನಗರದ ಅರಸನಾಗಿದ್ದ ವೀರ ಪ್ರತಾಪ ದೇವರಾಯನಲ್ಲಿ ಹರಿದ್ರಾನದಿಗೆ ದಾವಣಗೆರೆಯ ಹತ್ತಿರದ ಬನ್ನಿಕೋಡಿನಲ್ಲಿ ಅಣೆಕಟ್ಟು ಕಟ್ಟುವ ಪ್ರಸ್ತಾವದ ಬಿನ್ನಹ ಒಂದನ್ನು ನೀಡಲಾಗುತ್ತದೆ. ಪ್ರವಾಹ ತಿರುಗಿಸಿ, ಸರಪಳಿಕೆರೆಗಳನ್ನು ನಿರ್ಮಿಸಿ ಗಂಗನರಸಿಯವರೆಗೂ (ಸುಮಾರು 35,000 ಹೆಕ್ಟೇರ್ ಪ್ರದೇಶ), ಅದುವರೆಗೂ ಬರಸೀಮೆ ಎಂದೆನಿಸಿದ್ದ ಭೂಮಿಯಲ್ಲಿ ತೆಂಗು ಅಡಿಕೆ, ಬಾಳೆ, ವೀಳೆ ಎಲೆ ಇತ್ಯಾದಿ ತೋಟಗಳನ್ನು ಬೆಳೆಸಿ ಅಲ್ಲಿಯ ಜನಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಮುಖ್ಯ ಉದ್ದೇಶವಾಗಿದ್ದಿತು.

ಹರಿಹರೇಶ್ವರ ದೇವಸ್ಥಾನದ ಹೊರ ಆವರಣದಲ್ಲಿ ಇರುವ ದಾವಣಗೆರೆ 23 (ಕ್ರಿ.ಶ. 1410) ಮತ್ತು 29 (ಕ್ರಿ.ಶ. 1424) ಎರಡು ಶಾಸನಗಳಲ್ಲಿ ಈ ವಿಷಯವನ್ನು ಉಲ್ಲೇಖಿಸಲಾಗಿದೆ. ಅಣೆಕಟ್ಟು ಕಟ್ಟುವ ಮೊದಲೇ ಹರಿಹರದ ಮಹಾಜನರೂ, ದೇವಸ್ಥಾದ ಆಡಳಿತ ಮಂಡಳಿಯವರು ಮತ್ತು ಈ ಕೆಲಸಕ್ಕೆ ನಿರ್ಮಿಸಲಾಗಿರುವ "ಬುಳ್ಳಪ ಎಂಬ ಜಲತಜ್ಞ"ನನಿಗೂ ಆದ ವ್ಯವಹಾರ "ನಿರ್ಣಯ"/ಒಪ್ಪಂದವೇ ಈ ಶಾಸನಗಳಲ್ಲಿ ಕಂಡು ಬರುತ್ತದೆ. ಈ ಶಾಸನಗಳಲ್ಲಿರುವ ತೇದಿಗಳ ಪ್ರಕಾರ ವ್ಯವಹಾರ ಒಪ್ಪಂದವು ಈಗ್ಗೆ 613 ವರ್ಷಗಳಷ್ಟು ಹಿಂದಿನದು ಎಂದು

* ಜಲವಿಜ್ಞಾನಿ, ಬೆಂಗಳೂರು. ಇಮೇಲ್: hariharasreenivasarao@gmail.com.

ಖಚಿತವಾಗಿ ತಿಳಿದು ಬರುತ್ತಿದ್ದು ಕರ್ನಾಟಕದ ನೆರೆಪರಿಹಾರದ ಶಾಸನಗಳಲ್ಲಿಯೇ ಅತ್ಯಂತ ಅಪರೂಪದ ಸಂಗತಿಯಾಗಿದೆ. ಇಂದು ನೆರೆ ಬರ ಪರಿಹಾರಕ್ಕೆಂದೇ ಇರುವ ಕೇಂದ್ರಜಲ ಆಯೋಗದ ಒಂದು ನಿಯಮದ ಪ್ರಕಾರ ಯಾವುದೇ ಇಂತಹ ಪರಿಹಾರ ಐತಿಹಾಸಿಕ ದಾಖಲೆಗೆ ಕನಿಷ್ಠವೆಂದರೆ 250 ವರ್ಷಗಳಷ್ಟು ಹಿಂದಿನ ದಾಖಲೆ ಇರಬೇಕಾಗುತ್ತದೆ. ಹೀಗಾಗಿ ಈಗಾಗಲೇ ತಿಳಿಸಿರುವಂತೆ ಈ ಅವಧಿಗೂ ಹೆಚ್ಚಿನ ಇತಿಹಾಸದ ದಾಖಲೆಗಳು ಪ್ರಮುಖವಾಗುತ್ತವೆ ಎಂದರೆ ತಪ್ಪಾಗಲಾರದು. ಇನ್ನೊಂದು ಮುಖ್ಯ ವಿಷಯವೆಂದರೆ ಕೇಂದ್ರೀಯ ಜಲ ಆಯೋಗದವರು ನದಿ ನೀರು ಮತ್ತು ಅದರ ಗುಣಗಳನ್ನು ಪರೀಕ್ಷೆಗೆಂದು ಒಂದು ಜಲಮಾಪನದ ಕೇಂದ್ರವನ್ನು ಬ್ಯಾಲದ ಹಳ್ಳಿಯಲ್ಲಿ ಇದೇ ಹರಿದ್ರಾನದಿಗೆ ಸ್ಥಾಪಿಸಿರುವುದು ಕ್ರಿ.ಶ.1980ರಲ್ಲಿ ಮಾತ್ರ ಎನ್ನುವುದು ಗಮನಿಸಬೇಕಾದ ಅಂಶವಾಗಿದೆ.

ನೆರೆ ನೀರನ್ನು ಬಳಸಿ ಕೊಂಡಿರುವ ಭೂ ಭಾಗದ ವಿಸ್ತೀರ್ಣ ಶಾಸನೋಕ್ತ ಬನ್ನಿಕೋಡಿನಿಂದ ಗಂಗ ನರಸಿಯವರೆಗೆ 40 ಚದರ ಕಿಲೋ ಮೀಟರ್ ಗಳಷ್ಟು ವಿಸ್ತಾರವಾಗಿದೆ. ಒಟ್ಟು ಜಲಾನಯನ ಪ್ರದೇಶ ಸು.40,000 ಹೆಕ್ಟೇರುಗಳಾದರೆ, ಅಚ್ಚುಕಟ್ಟು ಪ್ರದೇಶ 30ಸಾವಿರ ಹೆಕ್ಟೇರುಗಳು. ಈಗ ಈ ಅಣೆಕಟ್ಟು ಪೂರ್ಣ ನಾಶಹೊಂದಿದ್ದರೂ ಶಾಸನೋಕ್ತವಾಗಿ ನೀರಾವರಿ ತಜ್ಞರಾಗಿದ್ದ, ಬುಳ್ಳಪ ಮತ್ತು ಚಾಮರಸರು ಇದ್ದಿದ್ದಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ.

ಮೇಲೆ ಹೇಳಿದ ಅಣೆಕಟ್ಟನ್ನು ನಿರ್ಮಿಸಿದ್ದಂತಹ ಬುಳ್ಳಪನ ಹೆಸರಿನಲ್ಲಿ ಹರಿಹರದಿಂದ ಸುಮಾರು ಏಳು ಕಿ.ಮೀ. ದೂರದಲ್ಲಿ ಗಂಗನರಸಿಯ ಇನ್ನೊಂದು ರಸ್ತೆಯ ಬದಿಯಲ್ಲಿ "ಬುಳ್ಳಾಪುರ"ವೆಂದು ಒಂದು ಹಳ್ಳಿ (ಹಿಂದೆ ಪುರ ಅಥವಾ ಪಟ್ಟಣ) ಯ ಹೆಸರೇ ಇದೆ. ಇದು ಆ ಜಲತಂತ್ರಜ್ಞನಿಗೆ ಅಂದಿನ ಜನರು ತೋರಿಸಿದ್ದ ಗೌರವದ ದ್ಯೋತಕವಾಗಿದೆ.

**ಶಾಸನಗಳಲ್ಲಿಯ ನೇರ ಉಲ್ಲೇಖ**

ವಿಜಯನಗರದ ಅರಸು 2ನೇ ಹರಿಹರ ಅಥವಾ ವೀರ ಪ್ರತಾಪ ಬುಕ್ಕರಾಯ ರಾಜ್ಯವಾಳುತ್ತಿದ್ದ ಕಾಲ ಕ್ರಿ.ಶ.1410




ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ನಕ್ಷೆಯಲ್ಲಿ ಹರಿಹರೇಶ್ವರ ದೇವಸ್ಥಾನದ ಬಳಿಯಲ್ಲಿರುವ ಶಾಸನೋಕ್ತ ಸ್ಥಳನಾಮಗಳ ಮೂಲಕ ಗುರುತಿಸಲಾಗಿರುವ ಪ್ರವಾಹ ನಿಯಂತ್ರಣ ವ್ಯವಸ್ಥೆಯ ಚಿತ್ರ.

ಎಂದು ಶಾಸನವು ಯಾವ ಸಂದೇಹಕ್ಕೂ ಆಸ್ಪದ ಉಂಟಾಗದಂತೆ ಉಲ್ಲೇಖಿಸುತ್ತದೆ. ಮಂಗರಾಜನ ಮಗ ಜಗನ್ನಾಥನು ರಾಜದೇವರಾಜ /ಪ್ರತಾಪ ಬುಕ್ಕರಾಯ ಮತ್ತು ಅವನ ಮಹಾ ಪ್ರಧಾನಿ ನಾಗಣ್ಣ ದಂಡನಾಯಕನಿಗೆ ಹರಿದ್ರಾನದಿಯಿಂದ ಆಗಾಗ ಮಳೆಗಾಲದಲ್ಲಿ ಉಂಟಾಗುತ್ತಿದ್ದ ಪ್ರವಾಹದಿಂದಾಗಿ ಹರಿಹರದೂರ ಮಹಾಜನರಿಗೆ ಹಾನಿಯಾಗುತ್ತಿದ್ದುದನ್ನು ನಿರೂಪಿಸುತ್ತಾನೆ. ಅದನ್ನು ನಿಯಂತ್ರಿಸಲು ಅಣೆಕಟ್ಟೊಂದನ್ನು ದಾವಣಗೆರೆಯ ಹತ್ತಿರದ ಬನ್ನಿಕೋಡದಲ್ಲಿ ನಿರ್ಮಿಸಲು ಮನವಿ ಮಾಡುತ್ತಾನೆ. ಮೇಲಿನವರ ಅಪ್ಪಣೆ ಪಡೆದನಂತರ ಅಣೆಕಟ್ಟಿನ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಮಂತ್ರಿಯಾಗಿದ್ದ ಅವರ ಪುತ್ರ ಬುಳ್ಳಪನಿಗೆ ಅಣೆಕಟ್ಟನ್ನು ನಿರ್ಮಿಸಲು ಆದೇಶಿಸುತ್ತಾರೆ.

ಅಣೆಕಟ್ಟು ಪ್ರವಾಹದಿಂದ ಉಂಟಾಗುತ್ತಿದ್ದ ಎಲ್ಲಾ ಕಷ್ಟನಷ್ಟಗಳನ್ನು ತಡೆದುಕೊಂಡಿತು. ಫಲಾನುಭವಿಗಳಾಗಿದ್ದ ಜನರು ಅವನ ಈ ಪುಣ್ಯಕಾರ್ಯವನ್ನು ಹೊಗಳುತ್ತಾ ತಮ್ಮ ಸಮಯವನ್ನು ಸಂತೋಷದಿಂದ ಕಳೆಯುತ್ತಿದ್ದರು. ಆದರೆ, 14 ವರ್ಷಗಳ ನಂತರ ಕ್ರಿ.ಶ.1424ರಲ್ಲಿ ಇದ್ದಕ್ಕಿದ್ದಂತೆ ಮಹಾಪ್ರವಾಹ ಉಂಟಾಗಿ ಅಣೆಕಟ್ಟು ಹಾಳಾಯಿತು. ಈ ದುರಂತದಿಂದಾಗಿ ಅಗ್ರಹಾರದ ಎಲ್ಲ ಜನರೂ ತಮ್ಮ ಜೀವನೋಪಾಯದ ಸಾಧನೆಗಳನ್ನು ಕಳೆದುಕೊಂಡು ಮುಂಚಿನಂತೆ ಮತ್ತೆ ಘೋರವಾದ ಸಂಕಷ್ಟ ಸ್ಥಿತಿಯನ್ನು ತಲುಪಿದರು. ನಂತರ ಮುರಿದು ಹೋದ ಅಣೆಕಟ್ಟನ್ನು ಪುನಃಸ್ಥಾಪಿಸಲು ಯಾರಿಗೆ ಅರ್ಹತೆ ಎಂದು ವಿಚಾರಿಸಿ, ಈ ಕಾರ್ಯದಲ್ಲಿ ತನಗಿಂತಲೂ ಪರಿಣಿತನಾಗಿದ್ದ ಚಾಮ ನೃಪಾಲನನ್ನು ಹುಡುಕಿತಂದ ಬುಳ್ಳಪನು ಆತನಿಗೆ ಕಾರ್ಯನಿರ್ವಹಿಸುವಂತೆ ಒಪ್ಪಿಸುತ್ತಾನೆ. ಈ ವಿಷಯವನ್ನು ದಾವಣಗೆರೆ ಶಾಸನ ಸಂಖ್ಯೆ 29 (ಕ್ರಿ.ಶ. 1424) ರಲ್ಲಿ ಉಲ್ಲೇಖಿಸಲಾಗಿದೆ.

**ಜಲ ನಿರ್ವಹಣೆಯ ಕಾನೂನಾತ್ಮಕ ಮತ್ತು "ವ್ಯವಹಾರ" ನಿರ್ಣಯಗಳು**

**ಶಾಸನ ಸಾಲು 17 ರಿಂದ 20 ಗಳ ವಿವರಣೆ:**

ಶ್ರೀ ವೀರಪ್ರತಾಪದೇವ ಮಹಾರಾಜರು, ಶ್ರೀ ಹರಿಹರೇಶ್ವರ ದೇವರು (Temple Trustees), ಮತ್ತು ಹರಿಹರ



ಚಿತ್ರ ಸಹಾಯ:
ಎ.ಎನ್ ಮಂಜುನಾಥ್, ಹರಿಹರ

ಕ್ಷೇತ್ರದ ನಿವಾಸಿಗಳಾದ ಮಹಾ ಜನಂಗಳ ನಡುವೆ ನಡೆದು ಹೋದ ವ್ಯವಹಾರ ನಿಯಮಗಳು:

ಶ್ರೀ ಹರಿಹರ ದೇವರ ಸೀಮೆಯೊಳಗೆ ಮಹಾಜನರು ತಮ್ಮ ಕೈಯಿಂದ ಹಣವನ್ನು ಖರ್ಚುಮಾಡಿ ಹರಿದ್ರೆ ಎಂಬ ನದಿಗೆ ಅಣೆಕಟ್ಟನ್ನು ನಿರ್ಮಿಸಿ ಹರಿಹರಕ್ಕೆ ಕಾಲುವೆಯ ತಂದಲ್ಲಿ ಮತ್ತು ಆ ಕಾಲುವೆಯು ದೇವರ ಭೂಮಿಯೊಳಗೆ ಹರಿದುಬಂದಲ್ಲಿ, ಆ ಕಾಲುವೆ ಎಷ್ಟು ದೂರ ದೇವರಿಗೆ ಸೇರಿದ ಭೂಮಿಯೊಳಗೆ ಹಾಯುತ್ತದೆಯೋ ಅದರ ಕೆಳಗೆ ನೀರಾವರಿಯಾಗುವ ನೆಲದಲ್ಲಿ ಬೆಳೆಯುವ ಬೆಳೆಗಳಲ್ಲಿ ದೇವರಿಗೆ (Temple Trustees) ಎರಡಷ್ಟು ಪಾಲು ಕೊಡಬೇಕು.

ಮಹಾಜನರು ಕಾಲುವೆ ತೆಗೆಯಲು ತಾವು ತಮ್ಮ ಕೈಯಿಂದ ಹಣವನ್ನು ಖರ್ಚು ಮಾಡಿದ್ದರೆ ಅವರಿಗೆ ಒಟ್ಟು ಬೆಳೆಯ ಒಂದು ಪಾಲು ಕೊಡಲಾಗುತ್ತದೆ. ಈ ನಿರ್ಣಯವು ಸರ್ವಸಮ್ಮತವಾಗಿದ್ದು ಎಲ್ಲರ ಸಮ್ಮುಖದಲ್ಲಿ ಗೌರವ ಪೂರ್ವಕವಾಗಿ ತೆಗೆದು ಕೊಂಡ ನಿರ್ಣಯವಾಗಿದೆ. ಅಷ್ಟೇ ಅಲ್ಲದೇ ಸೂರ್ಯ ಭೂಮಿಗಳು ಇರುವ ವರೆಗೆ (ಆಚಂದ್ರಾರ್ಕ ಸ್ಥಾಯಿಯಾಗಿ) ಪಾಲಿಸುತ್ತಾ ಸುಖದಿಂದ ಭೋಗಿಸ ತಕ್ಕದ್ದು ಎಂದು ತಾಮ್ರ ಶಾಸನದ ಮೇಲೆ ಬರೆದು ಕೊಡಲಾಗಿದೆ.

**64 ರಿಂದ 78ನೇ ವೃತ್ತಗಳಲ್ಲಿರುವ ವಿವರಗಳು**

ಶ್ರೀ ಹರಿಹರದೇವರಿಗೆ ಸಲ್ಲುವ ಭೂಮಿಗಳು ಇರುವ ಸ್ಥಳನಾಮಗಳು: ಬನ್ನಿಕೋಡ ಸೀಮೆ, ಬೆಳುವ(ವಾ) ಡಿ, ಹನಗವಾಡಿ, ಹರಿಹರ, ಗುತ್ತೂರು ಗಂಗನರಸಿಯ ಕೆರೆ. ಇವು ಕಾಲುವೆಯು ಹಾಯ್ದು ಹೋಗುವ ಊರು/ಹಳ್ಳಿಗಳು. ಈ ಕಾಲುವೆಯ ಕೆಳಗೆ ನೀರಾವರಿಯಾಗುವಷ್ಟು ಭೂಮಿಯ ಉತ್ಪನ್ನಗಳನ್ನು ಮೂರು ಭಾಗ ಮಾಡಿ, ಅದರಲ್ಲಿ ಎರಡುಪಾಲು ಭೂಮಿಯನ್ನು ಶ್ರೀ ಹರಿಹರ ದೇವರು ಭೋಗಿಸುವರು, ಒಂದು ಪಾಲು ಭೂ ಉತ್ಪನ್ನಗಳನ್ನು ತಮ್ಮ ಕೈಯಿಂದ ಹಣ ಖರ್ಚುಮಾಡಿ ಕಟ್ಟೆ ಕಟ್ಟಿ ಮತ್ತು ಕಾಲುವೆಯನ್ನು ಅಗೆಸಿದಂಥಾ ಮಹಾಜನರು ಭೋಗಿಸುವರು.

ಕಟ್ಟೆ ಮತ್ತು ಕಾಲುವೆಗಳ ಕೆಲಸ ಮುಗಿದ ನಂತರ ಮುಂದೆ ಪ್ರತಿ ವರುಷವೂ ಕಟ್ಟೆಯ ಕಾಲುವೆಯ ಆರೈಕೆ ವೆಚ್ಚ (ನಿರ್ವಹಣಾವೆಚ್ಚ) ಅಷ್ಟೇ ಅಲ್ಲದೇ ಕಾಲ ಸರಿದಂತೆ ಉಂಟಾಗಬಹುದಾದ ರಾಜಿಕ (ಎಂದರೆ ಬೇರೆ ರಾಜರಿಂದ ಮುತ್ತಿಗೆಯಾಗಿ ಕಾಲುವೆ ಒಡೆದು ಹೋದಾಗ), ದೈವಿಕ (ಮಳೆ, ಗಾಳಿ, ನೆರೆ, ಬಿಸಿಲಿನಿಂದ ಉಂಟಾಗುವ ಹಾನಿ) ಖರ್ಚನ್ನು ದೇವರು ಎರಡುಪಾಲು, ಅರ್ಚಕರು ಒಂದು ಪಾಲು ಭರಿಸಬೇಕು.

ಕಾಲುವೆಯ ಕೆಳಗೆ ಹುಟ್ಟುವಂಥಹ ಕಟ್ಟೆ, ಕುಂಟೆಗಳನ್ನು ಹೆಚ್ಚು ಹೆಚ್ಚಾಗಿ ಕಟ್ಟುವಂತಹ ಸಂದರ್ಭಗಳಲ್ಲಿ, (ಬಲಿತು ಕಟ್ಟಿಕೊಂಬ), ನದಿಯಲ್ಲಿ ಉಂಟಾಗುವ (ಮೆಕ್ಕಲು ಮಣ್ಣು ಹೆಚ್ಚಾಗಿ ಸೇರುವುದನ್ನು ತಡೆಗಟ್ಟುವುದು ಇತ್ಯಾದಿ) ತೊಂದರೆಗಳ ನಿರ್ವಹಣಾ ವೆಚ್ಚದಲ್ಲಿ ದೇವರು ಎರಡುಪಾಲು, ಅರ್ಚಕರು ಒಂದು ಪಾಲು ಭರಿಸಬೇಕೆಂದು ತಾಮ್ರಪಟದಲ್ಲಿ ಉಲ್ಲೇಖಿಸಲಾಗಿದೆ.ಈ ಶಾಸನದ ಇನ್ನೊಂದು ವಿಶೇಷವೆಂದರೆ ಈ ಎಲ್ಲ ವಿವರಗಳನ್ನು ಕಲ್ಲಿನ ಮೇಲೆ ಕಂಡರಿಸಲಾಗಿದ್ದು, ಈಗ ತಾಮ್ರ ಪಟವಾಗಲೀ ಅಥವಾ ಹರಿದ್ರಾನದಿಗೆ ಕಟ್ಟಿದ್ದ ಅಣೆಕಟ್ಟಾಗಲೀ ಪೂರ್ತಿಯಾಗಿ ನಾಶವಾಗಿವೆ. ಕೊಟ್ಟ ರಾಜನಾಗಲೀ, ಮಹಾಜನರಾಗಲೀ, ಫಲಾನುಭವಿಗಳಾಗಲೀ, ನೀರಾವರಿಗೆ ಒಳಪಟ್ಟ ದೇವರ ಭೂಮಿಯಾಗಲೀ ಇಂದು ಇಲ್ಲ. ಸೂರ್ಯ ಭೂಮಿಗಳಿರುವವರೆಗೆ ಎಂದು ಶಾಸನದಲ್ಲಿ ಉಲ್ಲೇಖಿತ ವಾಗಿದ್ದರೂ, ಈಗ ಅವುಗಳ ಹೆಸರಿನಲ್ಲಿ ಉಳಿದಿರುವುದು ದೇವಸ್ಥಾನ, ಕಲ್ಲಿನ ಶಾಸನ, ಒಂದಷ್ಟು ಹರಿಹರದ ಊರಿನಲ್ಲಿ ಅಪರೂಪವಾಗಿ ಹುಡುಕಿದರೆ ಕಂಡು ಬರುವ ಕಾಲುವೆಯ ಕುರುಹುಗಳು ಮಾತ್ರ.

**ಈ ಎಲ್ಲ ಇಲ್ಲಗಳ ಮಧ್ಯೆ ಇರುವುದು ಅ–ಕ್ಷರ (ನಾಶವಾಗದ್ದು) ರೂಪದಲ್ಲಿ ಅವರು ಸಂಪಾದಿಸಿದ್ದ, ಸಾಧಿಸಿದ್ದ "ಜಲ ವಿಜ್ಞಾನ ತಂತ್ರಜ್ಞಾನದ" ಇಂದಿನ ಆಧುನಿಕ ಜಲವಿಜ್ಞಾನ ಅಣೆಕಟ್ಟುಗಳ ನಿರ್ಮಾಣದ ತಂತ್ರಜ್ಞಾನ (ಹೈಡ್ರಾಲಜಿ) ಹುಟ್ಟುವುದಕ್ಕೆ 613ವರ್ಷಗಳಷ್ಟು (2023) ಹಿಂದಿನವು ಎನ್ನುವುದು ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯವಾಗಿದೆ.**

1982ರಲ್ಲಿ ಹರಿದ್ರಾ / ತುಂಗಭದ್ರಾ ನದಿಗಳಿಂದ ಉಂಟಾದ ನೆರೆಯಿಂದ ಬೆಳೆಹಾನಿ ಮುಂತಾದ ನಷ್ಟಕ್ಕೊಳಗಾಗಿದ್ದ ಬ್ಯಾಲದಹಳ್ಳಿ ಮತ್ತಿತರ ಹರಿಹರ ತಾಲ್ಲೂಕಿನ ಪ್ರದೇಶಗಳಲ್ಲಿಯ ಜನರಿಗೆ ಪರಿಹಾರವನ್ನು ಒದಗಿಸಲು ಈ ಮೇಲೆ ಹೇಳಲಾಗಿರುವ ಕೇಂದ್ರೀಯ ಜಲ ಆಯೋಗದವರಿಂದ ಸಂಗ್ರಹಿಸಲಾಗಿದ್ದ ಮಾಹಿತಿಯನ್ನೇ ಬಳಸಲಾಗಿದ್ದಿತು ಎನ್ನುವುದನ್ನು ವಿಶೇಷವಾಗಿ ಗಮನಿಸಬಹುದು.

**ಕಲುಷಿತ ನೀರಿನ ಸಂಸ್ಕರಣೆಯ ಸಾಂಪ್ರದಾಯಿಕ ಸಣ್ಣಪ್ರಮಾಣ ವಿಧಾನಗಳು:**

ಕಲುಷಿತ ನೀರಿನ ಸಂಸ್ಕರಣೆಯ ಸಾಂಪ್ರದಾಯಿಕ ವಿಧಾನಗಳನ್ನು ನೀರಿನಿಂದ ಹಾನಿಕಾರಕ ಕಲ್ಮಶಗಳನ್ನು ತೆಗೆದುಹಾಕಲು ಶತಮಾನಗಳಿಂದ ಬಳಸಲಾಗುತ್ತಿದೆ, ಇದು ಕುಡಿಯಲು ಮತ್ತು ಇತರ ಬಳಕೆಗಳಿಗೆ ಸುರಕ್ಷಿತವಾಗಿದೆ. ಈ ವಿಧಾನಗಳು ಸಾಮಾನ್ಯವಾಗಿ ಸರಳ, ಕಡಿಮೆ–ವೆಚ್ಚ ಮತ್ತು ಕಾರ್ಯಗತಗೊಳಿಸಲು ಸುಲಭವಾಗಿದೆ, ಇದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಮತ್ತು ನಗರದಿಂದ ಯಾವುದೇ ಹೆಚ್ಚಿನ ಸಂಪರ್ಕವಿಲ್ಲದ ದೂರದ ಪ್ರದೇಶಗಳಲ್ಲಿ ಬಳಸಲು ಸೂಕ್ತವಾಗಿದೆ.

**ಕುದಿಸುವ ವಿಧಾನ**

ಕುದಿಯುವ ನೀರು ಹಾನಿಕಾರಕ ಬ್ಯಾಕ್ಟೀರಿಯಾ ಮತ್ತು ಇತರ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುವ ಅತ್ಯಂತ ಪರಿಣಾಮಕಾರಿ ವಿಧಾನಗಳಲ್ಲಿ ಒಂದಾಗಿದೆ. ಇದು ತುಲನಾತ್ಮಕವಾಗಿ ಅಗ್ಗದ ಮತ್ತು ಕಾರ್ಯಗತಗೊಳಿಸಲು ಸುಲಭವಾದ ವಿಧಾನವಾಗಿದೆ. ನೀರನ್ನು ಪರಿಣಾಮಕಾರಿಯಾಗಿ ಕುದಿಸಲು, ಅದನ್ನು ಕನಿಷ್ಠ ಒಂದು ನಿಮಿಷ ಸುತ್ತ ತಿರುಗುವಿಕೆಯ (Rollingboil) ರೀತಿಯಿಂದ ಕುದಿಯುವಿಕೆಗೆ ತರುವುದು ಮುಖ್ಯವಾದ ಅಂಶವಾಗಿದೆ.



ರೋಲಿಂಗ್ ಕುದಿಯುವಿಕೆಯ ವಿಧಾನದಲ್ಲಿ ದೊಡ್ಡ ಗುಳ್ಳೆಗಳು ನೀರಿನ ಪಾತ್ರೆಯ ಸಂಪೂರ್ಣ ಮೇಲ್ಮೈಯಲ್ಲಿ ತೀವ್ರವಾಗಿ ಮತ್ತು ನಿರಂತರವಾಗಿ ಸಿಡಿಯುತ್ತವೆ, ಕೆಲವೊಮ್ಮೆ, ಕೆಲವು ದ್ರವವನ್ನು ಚೆಲ್ಲುವಷ್ಟು ಬಲವಂತವಾಗಿ. ನೀರು ಸ್ಥಿರವಾದ 212 ಡಿಗ್ರಿ ಎಫ್ (100 ಡಿಗ್ರಿ ಸಿ) ಅನ್ನು ತಲುಪಿರುತ್ತದೆ, ಇದು ಹಬೆಯ ನಿರಂತರ ಬಿಡುಗಡೆಗೆ ಕಾರಣವಾಗುತ್ತದೆ.

**ಶೋಧನೆ:**

ಕೊಳಕು, ಮರಳು ಮತ್ತು ಕೆಸರು ಮುಂತಾದ ಅಮಾನತುಗೊಂಡ ಘನವಸ್ತುಗಳನ್ನು ನೀರಿನಿಂದ ತೆಗೆದುಹಾಕಲು ಶೋಧನೆಯನ್ನು ಬಳಸಬಹುದು. ಬಟ್ಟೆ, ಮರಳು ಅಥವಾ ಸೆರಾಮಿಕ್ ಫಿಲ್ಟರ್‌ಗಳಂತಹ ವಿವಿಧ ವಸ್ತುಗಳನ್ನು ಬಳಸಿ ಇದನ್ನು ಮಾಡಬಹುದು. ವ್ಯಾಪಕ ಶ್ರೇಣಿಯ ಮಾಲಿನ್ಯಕಾರಕಗಳನ್ನು ತೆಗೆದುಹಾಕಲು ಕುದಿಯುವ ಅಥವಾ ಸೋಂಕುಗಳೆತದಂತಹ ಇತರ ಚಿಕಿತ್ಸಾ ವಿಧಾನಗಳ ಜೊತೆಯಲ್ಲಿ ಶೋಧನೆಯನ್ನು ಹೆಚ್ಚಾಗಿ ಬಳಸಲಾಗುತ್ತದೆ.

**ಶೋಧನೆ:**

ಕೊಳಕು, ಮರಳು ಮತ್ತು ಕೆಸರು ಮುಂತಾದ ಅಮಾನತುಗೊಂಡ ಘನವಸ್ತುಗಳನ್ನು ನೀರಿನಿಂದ ತೆಗೆದುಹಾಕಲು ಶೋಧನೆಯನ್ನು ಬಳಸಬಹುದು. ಬಟ್ಟೆ, ಮರಳು ಅಥವಾ ಸೆರಾಮಿಕ್ ಫಿಲ್ಟರ್‌ಗಳಂತಹ ವಿವಿಧ ವಸ್ತುಗಳನ್ನು ಬಳಸಿ ಇದನ್ನು ಮಾಡಬಹುದು. ವ್ಯಾಪಕ ಶ್ರೇಣಿಯ ಮಾಲಿನ್ಯಕಾರಕಗಳನ್ನು ತೆಗೆದುಹಾಕಲು ಕುದಿಯುವ ಅಥವಾ ಸೋಂಕುಗಳೆತದಂತಹ ಇತರ ಚಿಕಿತ್ಸಾ ವಿಧಾನಗಳ ಜೊತೆಯಲ್ಲಿ ಶೋಧನೆಯನ್ನು ಹೆಚ್ಚಾಗಿ ಬಳಸಲಾಗುತ್ತದೆ.

**ಕಲುಷಿತ ನೀರಿನ ಶುದ್ಧೀಕರಣ**

**ಅ. ತೇಲುವ ಕಶ್ಮಲಗಳ ಶುದ್ಧೀಕರಣ**

ಒಂದು ಬೌಲ್ ಅಥವಾ ಹಳೆಯ ಪಾತ್ರೆಯಲ್ಲಿ 4 ಕಪ್ ಕಲುಷಿತ ನೀರು.

ಒಂದು ಕೊಳವೆ ಅಥವಾ ಬಾಟಲಿಯಿಂದ ಪ್ರಾರಂಭಿಸಿ. ಆ ಬಾಟಲಿಯ ಪ್ರಮಾಣ 20 ಔನ್ಸ್ ಇರಲಿ. ಇದಕ್ಕಿಂತಲೂ ದೊಡ್ಡಬಾಟಲಿಯನ್ನೂ ಬಳಸಬಹುದು.

ಬಾಟಲಿಯು ಪ್ಲಾಸ್ಟಿಕ್ ಆಗಿದ್ದರೆ ಕೊಳವೆಯಾಕಾರ ಮಾಡಲು ಕೇವಲ ಅರ್ಧದಷ್ಟನ್ನು ಕತ್ತರಿಸಿದರೆ ಸಾಕು.




ಮೇಲೆ ತೋರಿಸಿರುವ ಚಿತ್ರದಲ್ಲಿರುವಂತೆ 1. ಕಲ್ಲುಗಳು 2. ಹರಳುಕಲ್ಲು ಮತ್ತು ಮರಳು 3. ನುಣುಪಾದ ಮರಳು ಇದ್ದಿಲು 5.ಹತ್ತಿ ವಸ್ತುಗಳ ಪದರಗಳನ್ನು ಸೇರಿಸಿ.

ಈ ಬಾಟಲಿ/ಕೊಳವೆಯ ಕೆಳಗೆ ಒಂದು ಶುದ್ಧೀಕರಿಸಿದ ಪಾತ್ರೆಯನ್ನು ಕೆಳಗೆ ಇರಿಸಿ ಕೊಳಚೆ ನೀರನ್ನು ಸೇರಿಸಲು ಪ್ರಾರಂಭಿಸಿ. ಈ ಪ್ರಕ್ರಿಯೆಯಿಂದ ಕೇವಲ ಕಲುಷಿತ ನೀರಿನಲ್ಲಿರುವ ಮಣ್ಣು ಇತ್ಯಾದಿ ತೇಲುವ ಕಶ್ಮಲಗಳ ನಿವಾರಣೆ ಮಾತ್ರ ಆಗುತ್ತದೆ

**ಸೋಂಕು ನಿವಾರಣೆ (Disinfection):**

ಸೋಂಕುಕಳೆತವು ನೀರಿನಲ್ಲಿ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುವ ಪ್ರಕ್ರಿಯೆಯಾಗಿದೆ. ಕ್ಲೋರಿನೇಶನ್, ಓಝೋನೇಶನ್ ಅಥವಾ ನೇರಳಾತೀತ ವಿಕಿರಣದಂತಹ ವಿವಿಧ ವಿಧಾನಗಳನ್ನು ಬಳಸಿಕೊಂಡು ಇದನ್ನು ಮಾಡಬಹುದು. ನೀರಿನಿಂದ ಹರಡುವ ರೋಗಗಳ ಹರಡುವಿಕೆಯನ್ನು ತಡೆಗಟ್ಟಲು ಸೋಂಕುಕಳೆತವು ನೀರಿನ ಸಂಸ್ಕರಣೆಯ ಅತ್ಯಗತ್ಯ ಹಂತವಾಗಿದೆ.

**ಸೌರ ನೀರಿನ ಸೋಂಕುಕಳೆತ (SODIS):**

ಎಂಬುದು ನೀರಿನ ಶುದ್ಧೀಕರಣದ ಒಂದು ವಿಧಾನವಾಗಿದ್ದು ಅದು ಸೂರ್ಯನ ಬೆಳಕಿನಲ್ಲಿರುವ ನೇರಳಾತೀತ (ಯುವಿ) ವಿಕಿರಣವನ್ನು ನೀರಿನಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾ ಮತ್ತು ಇತರ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುತ್ತದೆ. ಎಸ್‌ಓಡಿಐಎಸ್ ನೀರನ್ನು ಶುದ್ಧೀಕರಿಸಲು ಸರಳವಾದ, ಕಡಿಮೆ-ವೆಚ್ಚದ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶುದ್ಧ ನೀರಿನ ಪ್ರವೇಶವು ಸೀಮಿತವಾಗಿದೆ.

**ಕೆಲಸ ಮಾಡುವ ವಿಧಾನ:**

ಯುವಿ ವಿಕಿರಣವು ಅಯಾನೀಕರಿಸದ ವಿಕಿರಣದ ಒಂದು ವಿಧವಾಗಿದ್ದು ಅದು ಗೋಚರ ಬೆಳಕಿಗಿಂತ ಕಡಿಮೆ ತರಂಗಾಂತರವನ್ನು ಹೊಂದಿರುತ್ತದೆ. ಯುವಿ ವಿಕಿರಣವು ಸೂಕ್ಷ್ಮಾಣುಜೀವಿಗಳ ಡಿಎನ್‌ಎಗೆ ಹಾನಿ ಮಾಡುವ ಮೂಲಕ ನಾಶಪಡಿಸುವ ಪರಿಣಾಮವನ್ನು ಹೊಂದಿದೆ.

ಎಸ್‌ಓಡಿಐಎಸ್ ನಲ್ಲಿ ಬಳಸಲಾಗುವ ಸೂರ್ಯನ ಬೆಳಕಿನಲ್ಲಿರುವ ಯುವಿ ವಿಕಿರಣವನ್ನು ಯುವಿಎ ವಿಕಿರಣ ಎಂದು ಕರೆಯಲಾಗುತ್ತದೆ. ಯುವಿಎ ವಿಕಿರಣವು ಯುವಿಬಿ ವಿಕಿರಣಕ್ಕಿಂತ ಉದ್ದವಾದ ತರಂಗಾಂತರವನ್ನು ಹೊಂದಿದೆ, ಇದು ಯುವಿ ವಿಕಿರಣದ ವಿಧವಾಗಿದ್ದು ಅದು ಬಿಸಿಲಿಗೆ ಕಾರಣವಾಗುತ್ತದೆ.

ಯುವಿಬಿ ವಿಕಿರಣಕ್ಕಿಂತ ಯುವಿಎ ವಿಕಿರಣವು ಮಾನವನ ಚರ್ಮಕ್ಕೆ ಕಡಿಮೆ ಹಾನಿಕಾರಕವಾಗಿದೆ, ಆದರೆ ಸೂಕ್ಷ್ಮಜೀವಿಗಳನ್ನು ಕೊಲ್ಲುವಲ್ಲಿ ಇದು ಇನ್ನೂ ಪರಿಣಾಮಕಾರಿಯಾಗಿದೆ.

ಸೋಡಿಸ್ ಬಳಸಿ ನೀರನ್ನು ಸೋಂಕುರಹಿತಗೊಳಿಸಲು, ಮೇಲೆ ಹೇಳಿದ ರೀತಿಯಲ್ಲಿ ತೇಲುವ ಕಶ್ಮಲಗಳನ್ನು ಶುದ್ಧೀಕರಿಸಿದ ನೀರನ್ನು ಒಂದು ಸ್ವಚ್ಛವಾದ ಬಾಟಲಿಯಲ್ಲಿ ತುಂಬಿಸಿ ಬಿಸಿಲಿನ ದಿನದಲ್ಲಿ

ಕನಿಷ್ಠ 6 ಗಂಟೆಗಳ ಕಾಲ ನೇರ ಸೂರ್ಯನ ಬೆಳಕಿನಲ್ಲಿ ಇರಿಸಿ. ಸೂರ್ಯನ ಬೆಳಕಿನಲ್ಲಿರುವ ಯುವಿ ವಿಕಿರಣವು ನೀರಿನಲ್ಲಿನ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುತ್ತದೆ ಮತ್ತು ಅದನ್ನು ಕುಡಿಯಲು ಸುರಕ್ಷಿತವಾಗಿಸುತ್ತದೆ.

**ದೊಡ್ಡ ಪ್ರಮಾಣದ ಕಲುಷಿತ ನೀರಿನ ಶುದ್ಧೀಕರಣ**

ಸಂಪ್ರದಾಯಿಕ ನೀರಿನ ಸಂಸ್ಕರಣಾ ವಿಧಾನಗಳನ್ನು ದೊಡ್ಡ-ಪ್ರಮಾಣದ ಅನ್ವಯಗಳಲ್ಲಿ ಬಳಸಲಾಗುತ್ತದೆ, ಉದಾಹರಣೆಗೆ ಪುರಸಭೆಯ ನೀರಿನ ಸಂಸ್ಕರಣಾ ಘಟಕಗಳು. ಘನೀಕರಣ ಮತ್ತು ಫ್ಲೋಕ್ಯುಲೇಷನ್ ಅನ್ನು ನೀರಿನಿಂದ ಅಮಾನತುಗೊಳಿಸಿದ ಘನವಸ್ತುಗಳನ್ನು ತೆಗೆದುಹಾಕಲು ಬಳಸಲಾಗುತ್ತದೆ. ಘನವಸ್ತುಗಳು ನೀರಿನಿಂದ ಹೊರಬರಲು ಸೆಡಿಮೆಂಟೇಶನ್ ಅನ್ನು ಬಳಸಲಾಗುತ್ತದೆ. ಯಾವುದೇ ಉಳಿದ ಘನವಸ್ತುಗಳನ್ನು ತೆಗೆದುಹಾಕಲು ಶೋಧನೆಯನ್ನು ಬಳಸಲಾಗುತ್ತದೆ. ನೀರಿನಲ್ಲಿ ಯಾವುದೇ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲಲು ಸೋಂಕುಕಳೆತ (SODIS) ವನ್ನು ಬಳಸಲಾಗುತ್ತದೆ.

**ಮಜ್ಜಿಗೆ/ ಲಿಂಬೆ ಹುಲ್ಲಿನಿಂದ ನೀರಿನ ಶುದ್ಧೀಕರಣ**

ಮಜ್ಜಿಗೆ ಹುಲ್ಲು – ಇದು ಸಾಮಾನ್ಯವಾಗಿ ಲೆಮೆನ್ ಗ್ರಾಸ್ ಎಂದು ಕರೆಯಲ್ಪಡುತ್ತದೆ. ಇದರ ಸಸ್ಯಶಾಸ್ತ್ರೀಯ ಹೆಸರು, ಸಿಂಬೊಪೊಗನ್ ಸಿಟ್ರಾಟಸ್. ಇದನ್ನು ನೀರಿನ ಗುಣಮಟ್ಟವನ್ನು ಶುದ್ಧೀಕರಿಸಲು ಬಹು ಹಿಂದಿನಿಂದಲೂ ಬಳಸಲಾಗುತ್ತಿದೆ. ಇದು ಸಿಟ್ರಲ್, ಸಿಟ್ರೊನೆಲ್ಲಲ್ ಮತ್ತು ಜೆರಾನಿಯೋಲ್ ಸೇರಿದಂತೆ ಆಂಟಿಮೈಕ್ರೊಬಿಯಲ್ ಗುಣಲಕ್ಷಣಗಳೊಂದಿಗೆ ಹಲವಾರು ಸಂಯುಕ್ತಗಳನ್ನು ಒಳಗೊಂಡಿದೆ. ಈ ಸಂಯುಕ್ತಗಳು ಬ್ಯಾಕ್ಟೀರಿಯಾ, ವೈರಸ್‌ಗಳು ಮತ್ತು ನೀರನ್ನು ಕಲುಷಿತಗೊಳಿಸುವ ಇತರ ಸೂಕ್ಷ್ಮಾಣುಜೀವಿಗಳ ಬೆಳವಣಿಗೆಯನ್ನು ಕೊಲ್ಲಬಹುದು ಅಥವಾ ಪ್ರತಿಬಂಧಿಸಬಹುದು ಸಿಟ್ರಲ್‌ನ ರಾಸಾಯನಿಕ ಸೂತ್ರವು (C10H18O), ಸಿಟ್ರೊನೆಲ್ಲಾಲ್ (C10H17OH) ಮತ್ತು ಜೆರಾನಿಯೋಲ್ (C10H18O) ಆಗಿದೆ. ಈ ಸಂಯುಕ್ತಗಳು ಎಲ್ಲಾ ಮೊನೊಟರ್ಪೀನ್‌ಗಳಾಗಿವೆ, ಇದು ಒಂದು ರೀತಿಯ ಬಾಷ್ಪಶೀಲ ಸಾವಯವ ಸಂಯುಕ್ತವಾಗಿದೆ (ವಿಓಸಿ). ವಿಓಸಿ ಗಳು ಸುಲಭವಾಗಿ ಆವಿಯಾಗುತ್ತವೆ ಮತ್ತು ಗಾಳಿಯಲ್ಲಿ ಹರಡಬಹುದು. ಇದು ನೀರಿನ ಮೇಲ್ಮೈಯಲ್ಲಿ ಕಂಡುಬರುವ ಸೂಕ್ಷ್ಮಜೀವಿಗಳನ್ನು ಕೊಲ್ಲುವಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ಸಕ್ರಿಯಗೊಳಿಸುತ್ತದೆ.



ಇದು ಆಂಟಿಮೈಕ್ರೊಬಿಯಲ್ ಗುಣಲಕ್ಷಣಗಳ ಜೊತೆಗೆ, ಲಿಂಬೆರಸವು ಉತ್ಕರ್ಷಣ ನಿರೋಧಕ ಗುಣಗಳನ್ನು ಸಹ ಹೊಂದಿದೆ. ಉತ್ಕರ್ಷಣ ನಿರೋಧಕಗಳು ಆಕ್ಸಿಡೀಕರಣದ ಹಾನಿಕಾರಕ ಪರಿಣಾಮಗಳಿಂದ ನೀರನ್ನು ರಕ್ಷಿಸಲು ಸಹಾಯ ಮಾಡುತ್ತದೆ, ಇದು ಹಾನಿಕಾರಕ ಸಂಯುಕ್ತಗಳ ರಚನೆಗೆ ಕಾರಣವಾಗಬಹುದು.

ನೀರಿನ ಗುಣಮಟ್ಟವನ್ನು ಶುದ್ಧೀಕರಿಸಲು ಮಜ್ಜಿಗೆ ಹುಲ್ಲನ್ನು ಬಳಸಲು, ತಾಜಾ ಅಥವಾ ಒಣಗಿದ ಎಲೆಗಳನ್ನು ನೀರಿಗೆ ಸೇರಿಸಬಹುದು. ಅಲ್ಲದೇ ಇದರ ಸಾರಭೂತ ತೈಲವನ್ನೂ ಕೂಡ ಸೇರಿಸಬಹುದು. ನೀವು ಬಳಸಬೇಕಾದ ಲೆಮೊನ್ ಗ್ರಾಸ್, ಪ್ರಮಾಣವು ನೀರಿನಲ್ಲಿನ ಮಾಲಿನ್ಯದ ಮಟ್ಟವನ್ನು ಅವಲಂಬಿಸಿರುತ್ತದೆ.

ನೀರಿನ ಗುಣಮಟ್ಟವನ್ನು ಸ್ವಚ್ಛಗೊಳಿಸಲು ಇದೊಂದು ಸುರಕ್ಷಿತ ಮತ್ತು ಪರಿಣಾಮಕಾರಿ ಮಾರ್ಗವಾಗಿದ್ದು ಯಾವುದೇ ಹಾನಿಕಾರಕ ಅಡ್ಡ ಪರಿಣಾಮಗಳನ್ನು ಹೊಂದಿರದ ನೈಸರ್ಗಿಕ ಉತ್ಪನ್ನವಾಗಿದೆ. ಇದು ಉಷ್ಣವಲಯದ ದೇಶಗಳಲ್ಲಿ, ವಿಶೇಷವಾಗಿ ಆಗ್ನೇಯ ಏಷಿಯಾದಲ್ಲಿ ವ್ಯಾಪಕವಾಗಿ ಬಳಸಲಾಗುವ ಮೂಲಿಕೆಯಾಗಿದೆ. ಸಸ್ಯದ ಸಾರಭೂತ ತೈಲವನ್ನು ಆರೊಮ್ಯಾಟಿಕ್ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.

**ಮಜ್ಜಿಗೆ /ಲಿಂಬೆ ಹುಲ್ಲಿನಿಂದ ಜಲ ಶುದ್ಧೀಕರಿಸುವ ವಿಧಾನ**

- ನಿಂಬೆ ಹುಲ್ಲಿನ ಕಾಂಡಗಳನ್ನು ಚೆನ್ನಾಗಿ ತೊಳೆಯಿರಿ.
- ಹುಲ್ಲಿನ ಕಾಂಡಗಳನ್ನು ತೆಳುವಾದ ಹೋಳುಗಳಾಗಿ ಕತ್ತರಿಸಿ.
- ನಿಂಬೆ ಹುಲ್ಲಿನ ಚೂರುಗಳನ್ನು ನೀರಿನ ಪಾತ್ರೆಯಲ್ಲಿ ಇರಿಸಿ.

**ನೀರಿನ ಶುದ್ಧೀಕರಣವಾಗಲು ಯಾವ ಯಾವ ವಸ್ತುಗಳು ಎಷ್ಟೆಷ್ಟು ಸಮಯವನ್ನು ತೆಗೆದುಕೊಳ್ಳುತ್ತವೆ ಎನ್ನುವುದನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.**

| ಕಣದ ವ್ಯಾಸ | ಕಣದ ವಿಧ | 1 ಮೀ ನೀರಿನ ಮೂಲಕ ಶುದ್ಧೀಕರಿಸುವ ಸಮಯ |
|---|---|---|
| 10ಮಿ.ಮೀ | ಬೆಣಚು ಕಲ್ಲುಗಳು(ಗ್ರಾವೆಲ್) | 1 ಸೆಕೆಂಡ್ |
| 1 ಮಿ.ಮೀ. | ಮರಳು | 10 ಸೆಕೆಂಡ್ |
| 0. 10ಮಿ.ಮೀ | ಸಣ್ಣ(ನುಸಿ)ಗಾತ್ರದ ಮರಳು | 2 ನಿಮಿಷ |
| 10 ಮೈಕ್ರಾನ್ | ಪ್ರೋಟೋಜೋಆ, ಪಾಚಿ, ಜೇಡಿಮಣ್ಣು | 2 ಗಂಟೆ |
| 1 ಮೈಕ್ರಾನ್ | ಸೂಕ್ಷ್ಮಾಣು ಜೀವಿ, ಪಾಚಿ | 8 ದಿನ |
| 0.1 ಮೈಕ್ರಾನ್ | ವೈರಸ್ ಮತ್ತು ಕೊಲಾಯ್ಡಲ್ | 2 ವರ್ಷ |
| 10ನ್ಯಾನೋ ಮೈಕ್ರಾನ್ | ವೈರಸ್ ಮತ್ತು ಕೊಲಾಯಲ್ | 20 ವರ್ಷ |
| 1 ನ್ಯಾನೋ ಮೈಕ್ರಾನ್ | ವೈರಸ್ ಮತ್ತು ಕೊಲಾಯ್ಡಲ್ | 200 ವರ್ಷ |

- ನೀರನ್ನು ಕುದಿಸಿ, ನಂತರ ಶಾಖವನ್ನು ಕಡಿಮೆ ಮಾಡಿ ಮತ್ತು 15 ನಿಮಿಷಗಳ ಕಾಲ ತಳಮಳಿಸುತ್ತಿರಿ.
- ಶಾಖದಿಂದ ಮಡಕೆ ತೆಗೆದುಹಾಕಿ ಮತ್ತು ಕೆಲವು ನಿಮಿಷಗಳ ಕಾಲ ಅದನ್ನು ತಣ್ಣಗಾಗಲು ಬಿಡಿ.
- ಮಜ್ಜಿಗೆ ಹುಲ್ಲಿನ ನೀರನ್ನು ಒಂದು ಬಾಟಲಿಗೆ ತಗ್ಗಿಸಿ.
- ಲೆಮೆನ್‌ಗ್ರಾಸನ್ನು ಶೋಧಿಸಿ ತೆಗೆದು ಚೂರುಗಳನ್ನು ತಿರಸ್ಕರಿಸಿ.
- ಈಗ ನೀರು ಈಗ ಕುಡಿಯಲು ಸಿದ್ಧವಾಗಿರುತ್ತದೆ.

**ಹೊಳೆ ಮತ್ತಿ ಮರದಿಂದ ಜಲ ಶುದ್ಧೀಕರಣ**

ಇತಿಹಾಸದ ಪುಟಗಳಲ್ಲಿ......

ನೀರಿನ ಶುದ್ಧೀಕರಣಕ್ಕಾಗಿ ಮತ್ತೀ ಮರ (ಟರ್ಮಿನಾಲಿಯಾ ಅಲಾಟಾ ಹೇಯ್ನೆ ಎಕ್ಸ್. ರಾತ್) ಬಳಕೆಯನ್ನು ಸಾಂಪ್ರದಾಯಿಕ ಭಾರತೀಯ ವೈದ್ಯಕೀಯದಲ್ಲಿ ಶತಮಾನಗಳಿಂದ ದಾಖಲಿಸಲಾಗಿದೆ. ಕ್ರಿಸ್ತಪೂರ್ವ 6ನೇ ಶತಮಾನದಷ್ಟು ಹಿಂದಿನ ಪ್ರಾಚೀನ ಭಾರತೀಯ ಪಠ್ಯ ಸುಶ್ರುತ ಸಂಹಿತಾ, ಅತಿಸಾರ ಮತ್ತು ಭೇದಿ ಚಿಕಿತ್ಸೆಗಾಗಿ ಅರ್ಜುನ್ ಮರದ ತೊಗಟೆಯ ಬಳಕೆಯನ್ನು ಉಲ್ಲೇಖಿಸುತ್ತದೆ. ನೀರನ್ನು ಶುದ್ಧೀಕರಿಸಲು ಅರ್ಜುನ್ ಮರದ ಎಲೆಗಳ ಬಳಕೆಯನ್ನು ಪಠ್ಯವು ಉಲ್ಲೇಖಿಸುತ್ತದೆ.

ಮತ್ತೀ ಮರವು 30 ಮೀ. ನಷ್ಟು ಎತ್ತರ ಮತ್ತು 1 ಮೀ. ಅಗಲ ಇರುತ್ತದೆ. ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಈ ಮರದ ಬೇರುಗಳು ತುಂಬಾ ಗುಚ್ಛದೋಪಾದಿಯಲ್ಲಿ ನೆಲದಲ್ಲಿ ಕೆಲವು ಮೀಟರ್ ಗಳಷ್ಟು ದೂರ ಹಬ್ಬುತ್ತವೆ. ಈ ಗುಣದಿಂದಾಗಿ ಭೂ ಸವೆತವನ್ನು ತಡೆಯುವ ಗುಣ ಉಳ್ಳದಾಗಿದೆ. ಅಷ್ಟೇ ಅಲ್ಲದೆ ನೀರಿಗೆ ರುಚಿಯಾದ ಗುಣವನ್ನೂ ಉಂಟು ಮಾಡುತ್ತದೆ. ಹೆಚ್ಚಾಗಿ ನದಿ ಅಥವಾ ಕಾಲುವೆ ದಡಗಳಲ್ಲಿ ಬೆಳೆಯುತ್ತಾರೆ. ಈ ಕುರಿತಾದ ಒಂಭತ್ತನೇ ಶತಮಾನದ, ಮಂಡ್ಯ ಜಿಲ್ಲೆಯ ಆತಕೂರು ಶಾಸನ (ಕ್ರಿ.ಶ. 9ನೇ ಶತಮಾನ) ಒಂದರಲ್ಲಿ "ಮಳ್ತಿ ಕಾಲಂಕ್ಷದೋಳ್" ಎನ್ನುವ ಒಂದು ಶಬ್ದ ಗುಚ್ಛವಿದ್ದು ಒಂದು ಸಾವಿರದ ಒಂದು ನೂರು ವರ್ಷಗಳಷ್ಟು ಹಿಂದಿನ ದಾಖಲೆಯನ್ನು ಒಳಗೊಂಡಿದೆ.

16 ನೇ ಶತಮಾನದಲ್ಲಿ, ಮೊಘಲ್ ಚಕ್ರವರ್ತಿ ಬಾಬರ್ ತನ್ನ ಆತ್ಮಚರಿತ್ರೆಯಲ್ಲಿ ಯಮುನಾ ನದಿಯ ನೀರನ್ನು ಕುಡಿಯುವ ಮೊದಲು ಅದನ್ನು ಶುದ್ಧೀಕರಿಸಲು ಅರ್ಜುನ್ ಮರದ ಎಲೆಗಳನ್ನು ಬಳಸಿದ್ದಾನೆ ಎಂದು ಬರೆದಿದ್ದಾರೆ.

19 ನೇ ಶತಮಾನದಲ್ಲಿ, ಭಾರತದಲ್ಲಿನ ಬ್ರಿಟಿಷ್ ವಸಾಹತುಶಾಹಿ ಅಧಿಕಾರಿಗಳು ನೀರಿನ ಶುದ್ಧೀಕರಣಕ್ಕಾಗಿ ಅರ್ಜುನ್ ಮರದ ಎಲೆಗಳ ಬಳಕೆಯನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ನೀರಿನಿಂದ ಬ್ಯಾಕ್ಟೀರಿಯಾ ಮತ್ತು ಇತರ ಮಾಲಿನ್ಯಕಾರಕಗಳನ್ನು ತೆಗೆದುಹಾಕುವಲ್ಲಿ ಎಲೆಗಳು ಪರಿಣಾಮಕಾರಿ ಎಂದು ಅವರು ಕಂಡುಕೊಂಡರು.

**ಜಲ ಶುದ್ಧೀಕರಣ ಪ್ರಕ್ರಿಯೆಯ ವೈಜ್ಞಾನಿಕ ವಿವರಣೆ**

ಮತ್ತೀಮರದ ತೊಗಟೆ ಮತ್ತು ಎಲೆಗಳಲ್ಲಿನ ಟ್ಯಾನಿನ್‌ಗಳು ನೀರಿನಲ್ಲಿರುವ ಕಣಗಳ ಮೇಲ್ಮೈಯಲ್ಲಿರುವ ಪ್ರೋಟೀನ್‌ಗಳು ಮತ್ತು ಇತರ ಅಣುಗಳನ್ನು ಬಂಧಿಸುತ್ತವೆ. ಇದು ಕಣಗಳು ಹೆಪ್ಪುಗಟ್ಟಲು ಅಥವಾ ಒಟ್ಟಿಗೆ ಸೇರಿಕೊಳ್ಳುವಂತೆ ಮಾಡುತ್ತದೆ. ಅವು ನೀರಿನ ಮೇಲ್ಮೈ ಒತ್ತಡವನ್ನು ಸಹ ಕಡಿಮೆ ಮಾಡುತ್ತಾರೆ. ಇದು ಕಣಗಳನ್ನು ಎಮಲ್ಸಿಫೈಡ್ ಮಾಡಲು ಅಥವಾ ಸಣ್ಣ ಹನಿಗಳಾಗಿ ವಿಭಜಿಸಲು ಕಾರಣವಾಗುತ್ತದೆ. ಹೆಪ್ಪುಗಟ್ಟಿದ ಮತ್ತು ಎಮಲ್ಸಿಫೈಡ್ ಕಣಗಳು ನೀರಿನಿಂದ ಹೊರಬರಲು ಅಥವಾ ಫಿಲ್ಟರ್ ಮಾಡಲು ಸುಲಭವಾಗುತ್ತದೆ.

**ಮತ್ತೀ ಮರದದಿಂದ ಜಲ ಶುದ್ಧೀಕರಿಸುವ ವಿಧಾನ**

30 ಗ್ರಾಂ ಒಣಗಿದ ಮತ್ತಿ ಮರದ ತೊಗಟೆಯ ಪುಡಿಯನ್ನು 200 ಮಿಲಿ ಡಿಸ್ಟಿಲ್ಡ್ ವಾಟರ್‌ನೊಂದಿಗೆ 15 ನಿಮಿಷಗಳ ಕಾಲ ಕುದಿಸಿ.ವ್ಯಾಟ್ ಮ್ಯಾನ್–1 ಫಿಲ್ಟರ್ ಪೇಪರ್ ಮೂಲಕ ಸಾರವನ್ನು ಫಿಲ್ಟರ್ ಮಾಡಿ. ಶುದ್ಧೀಕರಿಸಿದ ನೀರನ್ನು ನಿರ್ವಾತದಲ್ಲಿ ಅಂದರೆ ಅಂದರೆ ಗಾಳಿ ಇಲ್ಲದ ಹಾಗೆ ಆವಿಗೊಳಿಸಿ(ಕುದಿಸಿ) ಉಪಯೋಗಿಸಬಹುದು.

ನೈಟ್ರೇಟ್‌ನಿಂದ ಕಲುಷಿತಗೊಂಡ ಗಡಸು ನೀರನ್ನು (Hard Water) ಸಂಸ್ಕರಿಸಲು ಬಲಿತ ಎಲೆಗಳ ಪುಡಿ ಮತ್ತು (Phyllanthus emblica) ತೊಗಟೆ ಪುಡಿಯನ್ನು ಬಳಸಬಹುದು. ನೈಟ್ರೇಟ್ ಮತ್ತು ಗಡಸುತನವನ್ನು ಮತ್ತಷ್ಟು ಕಡಿಮೆ ಮಾಡಲು ಸಸ್ಯ ಆಧರಿತ ಸಂಸ್ಕರಣೆಯ ಮೊದಲು ಅಥವಾ ನಂತರ ನೀವು ನೀರನ್ನು ಕುದಿಸಿ ನಂತರ ತಣ್ಣಗಾಗಿಸಿ ಬಳಸಬಹುದು.

ಮೇಲೆ ಈಗಾಗಲೇ ತಿಳಿಸಿರುವಂತೆ ಮತ್ತಿ ಮರವು ಭಾರತ ಮತ್ತು ಆಗ್ನೇಯ ಏಶಿಯಾದಲ್ಲಿಯೇ ಸ್ಥಳೀಯವಾಗಿ ದೊಡ್ಡ ಮರವಾಗಿದೆ. ಹೃದ್ರೋಗ, ಮಧುಮೇಹ ಮತ್ತು ಅತಿಸಾರ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಔಷಧವಾಗಿ ಶತಮಾನಗಳಿಂದಲೂ ಸಾಂಪ್ರದಾಯಿಕ ಭಾರತೀಯ ಔಷಧದಲ್ಲಿ ಪದ್ಧತಿಯಲ್ಲಿ ಬಳಸಲಾಗುತ್ತಿದೆ. ಕ್ರಿ.ಪೂ.6 ರಷ್ಟು ಪ್ರಾಚೀನ ವೈದ್ಯಕೀಯ ಶಾಸ್ತ್ರ ಗ್ರಂಥಗಳಾದ ಸುಶೃತ ಸಂಹಿತೆ ಇತ್ಯಾದಿಗಳಿಂದ ಈ ವಿಷಯವು ತಿಳಿದು ಬರುತ್ತದೆ. ಅಷ್ಟೇ ಅಲ್ಲದೇ ಇದುವರೆಗೂ ಸಂಪ್ರದಾಯಕ ಎಂದು ಬಹುವಾಗಿ ರೂಢಿಯಲ್ಲಿರುವ ಮಜ್ಜಿಗೆ ಹುಲ್ಲು ಕೂಡಾ ಅನೇಕ ರೋಗ ಪರಿಹಾರಕ ಮತ್ತು ಶುದ್ದ ನೀರನ್ನು ಸುಲಭವಾಗಿ ತಯಾರಿಸುವ ರೀತಿಯನ್ನು ಇಂದಿನ ವಿಜ್ಞಾನವೂ ಹೇಗೆ ಪುಷ್ಟೀಕರಿಸುತ್ತದೆನ್ನುವುದನ್ನು ಪ್ರಸ್ತುತಪಡಿಸಲಾಗಿದೆ.



'ಮಟ್ಟಿ ಕಾಲಂಕದೊಳ್' (ಆತಕೂರು ಶಾಸನ)

# ಕನ್ನಡ ಕಾವ್ಯಗಳಲ್ಲಿ ವಿಶ್ವಕುಟುಂಬದ ಚಿಂತನೆಗಳು

* ಡಾ. ರಾಜಶೇಖರ ಜಮದಂಡಿ

ಪ್ರಪಂಚದಾದ್ಯಂತ ಪ್ರತಿವರ್ಷ ಜನವರಿ ಒಂದನೇ ತಾರೀಖನ್ನು ಜಾಗತಿಕ ಕುಟುಂಬದ ದಿನವಾಗಿ ಆಚರಿಸಲಾಗುತ್ತದೆ. ಕುಟುಂಬಗಳ ಪರಿಕಲ್ಪನೆಯ ಮೂಲಕ ರಾಷ್ಟ್ರಗಳ ಮತ್ತು ಸಂಸ್ಕೃತಿಗಳ ಏಕತೆ, ವೈವಿಧ್ಯತೆಯನ್ನು ಗೌರವಿಸುವ ಉದ್ದೇಶ ಇದರ ಹಿಂದಿದೆ. ಹೀಗೆ ಜಗತ್ತಿನ ಮಾನವರೆಲ್ಲಾ ವಿವಿಧತೆಯಲ್ಲಿ ಏಕತೆ ಮತ್ತು 'ವಸುಧೈವ ಕುಟುಂಬಕಂ' ಎಂಬ ಭಾವನೆ ತಾಳುತ್ತಿದ್ದಾರೆ.

### ಕನ್ನಡ ಕವಿಗಳ ಕಣ್ಣಲ್ಲಿ ವಿಶ್ವಕುಟುಂಬ

ಜಗತ್ತಿನಲ್ಲಿ ಕುಟುಂಬದ ಪರಿಕಲ್ಪನೆಯನ್ನು ಪರಿಚಯಿಸಿದ ದೇಶಗಳಲ್ಲಿ ಭಾರತದ ಪಾತ್ರ ಅದ್ವಿತೀಯವಾದುದು. ಅದರಲ್ಲೂ 10ನೇ ಶತಮಾನದಲ್ಲಿಯೇ ನಮ್ಮ ಮಹಾಕವಿ ಪಂಪ 'ಮಾನವಕುಲಂ ತಾನೊಂದೇ ವಲಂ' ಎಂದು ಹೇಳುತ್ತಾ ವಿಶ್ವಕುಟುಂಬ-ವಿಶ್ವಶಾಂತಿಯ ವಿಚಾರವನ್ನು ಘಂಟಾಘೋಷವಾಗಿ ಕಾವ್ಯಗಳ ಮೂಲಕ ಸಾರಿದ್ದಾನೆ. ಅದೇರೀತಿ ರಾಷ್ಟ್ರಕವಿ ಕುವೆಂಪು ಅವರು 'ಏನಾದರೂ ಆಗು ಮೊದಲು ಮಾನವನಾಗು' ಎಂದು ವಿಶ್ವಮಾನವ ಸಂದೇಶವನ್ನು 'ವಸುಧೈವಕುಟುಂಬಕಂ' (ಎಲ್ಲ ಜೀವಿಗಳು ವಾಸಿಸುವ ಭೂಮಿಯೊಂದೇ ಕುಟುಂಬ) ಎಂಬುದಕ್ಕೆ ಸಮ ಸಮವಾಗಿ ಸಾರಿದ್ದಾರೆ. ಅಂದರೆ ಈ ಆಚರಣೆಗೆ ಮುನ್ನವೇ ಭಾರತವು ಕುಟುಂಬದ ಪರಿಕಲ್ಪನೆಯ ಮಹತ್ವವನ್ನು ಜಗತ್ತಿಗೆ ತಿಳಿಸಿ, ತನ್ನ ನೆರೆಹೊರೆಯ ಮತ್ತು ಇತರೇ ದೇಶಗಳಿಗೆ ಸಹಾಯ ನೀಡುವುದನ್ನು ಮುಂದುವರೆಸಿದೆ. ಹೀಗಾಗಿ ಭಾರತವು ವಸುಧೈವ ಕುಟುಂಬಕಂ ಎನ್ನುವ ಪದಕ್ಕೆ ಅನ್ವರ್ಥ ನಾಮವಾಗಿದೆ.



ಯಾರನ್ನೂ ಅನ್ಯರೆಂದು ಭಾವಿಸದೇ ತನ್ನವರೆಂದು ಬಗೆಯುವುದೇ ದೊಡ್ಡ ಸಂಬಂಧಕ್ಕೆ ಹೆದ್ದಾರಿ. ಇದರಿಂದ ಇಡೀ ಲೋಕ ಒಂದು ಕುಟುಂಬವಾಗುತ್ತದೆ. 12ನೇ ಶತಮಾನದಲ್ಲಿಯೇ ಬಸವಾದಿ ಶರಣರು 'ಇವನಾರವ ಇವನಾರವ ಎನ್ನದಿರಯ್ಯಾ ಇವನಮ್ಮವ ಇವನಮ್ಮವ ಎಂದೆನಿಸಯ್ಯ' ಎಂದು ಹೇಳಿದ್ದಾರೆ. 'ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಾಣವಕ್ಕು" ಎಂದು ಸರ್ವಜ್ಞನೂ ಸಹ ತಿಳಿಸಿದ್ದಾನೆ.

ಸಹಜ ಮಾತಿನಂತೆ ಮನುಷ್ಯ ಮೀನಿನಂತೆ ಈಜಲು ಕಲಿತು, ಪಕ್ಷಿಯಂತೆ ಹಾರಲು ಕಲಿತು, ಪ್ರಾಣಿಗಳಂತೆ ವೇಗವಾಗಿ ಓಡುವುದು ಕಲಿತು ಎಲ್ಲವನ್ನೂ ಮೀರಿಸಿದ್ದಾನೆ. ಆದರೆ ನೆಲದ ಮೇಲೆ ಒಬ್ಬರಿಂದ ಒಬ್ಬರು ಹೊಂದಿಕೊಂಡು ಕಲಿಯಬೇಕಾಗಿದೆ. ಹಾಗೆಯೇ ಏನೆಲ್ಲಾ ಸಾಧನೆ ಸಿದ್ಧಿಯಲ್ಲಿ ತನ್ನತನ ಕಂಡುಕೊಂಡಂತೆಯೇ ಮನುಷ್ಯನಾಗಿ ಮನುಷ್ಯತ್ವ ಅರಿಯದಿದ್ದರೆ ಹೇಗೆ? ಹಾಗಾಗಿ ಕವಿ ಸಿದ್ಧಯ್ಯ ಪುರಾಣಿಕರು ಹೇಳಿದಂತೆ:

....ಏನಾದರೂ ಆಗು ಹಾರೈಸಿದಂತಾಗು,
ನಿನ್ನೊಲವಿಂತನಾಗು
ಏನಾದರೂ ಸರಿಯೇ ಮೊದಲು
ಮಾನವನಾಗು

ಮನುಷ್ಯನಾಗಿ ಹುಟ್ಟಿಬಂದ ಮೇಲೆ ಸ್ವ ಸಾಮರ್ಥ್ಯ ಸಾಧನೆಗಳ ನಿಲುವಿನಿಂದ ಬದುಕಿನಲ್ಲಿ ಏನಾದರೂ ಆಗಬಹುದು. ಆದರೆ ಮುಖ್ಯವಾಗಿ ನಾವು ಮನುಷ್ಯರಾಗಬೇಕಾಗಿದೆ. ಇದಕ್ಕಿಂತ ದೊಡ್ಡದಾದುದು ಜಗತ್ತಿನಲ್ಲಿ ಬೇರೇ ಯಾವುದೂ ಇಲ್ಲ. ಇದಕ್ಕಾಗಿ ನಮ್ಮ ಜೀವನ ಹೇಗಿರಬೇಕೆಂದು ಡಿವಿಜಿಯವರು "ವನಸುಮದೊಳೆನ್ನ ಜೀ...ವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ ಹೇ ದೇವಾ" ಹೂವೊಂದು ಕಾಡಿನಲ್ಲಿ ಮೌನವಾಗಿ ಅರಳಿ ತನ್ನ ಪರಿಮಳದಿಂದ ಮನಸ್ಸುಗಳನ್ನಾಕರ್ಷಿಸುವಂತೆ, ವಿಶ್ವ-ಕುಟುಂಬದ ಚಿಂತನೆಯಿಂದ ಎಲ್ಲರ ಮನವನ್ನು ಕಟ್ಟುವ, ಒಗ್ಗೂಡಿಸುವ ಕಡೆಗೆ ನಾವು ಹೊರಳಬೇಕಾಗಿದೆ, ಮನವರಳಿಸಬೇಕಾಗಿದೆ ಮತ್ತು ಹೃದಯ ತೆರೆಯಬೇಕಾಗಿದೆ.

ಶರಣ ಸಿದ್ಧರಾಮರು "ಮನವ ನೋಯಿಸದವನೇ ಪರಮ ಪಾವನ ನೋಡಾ" ಎಂದಿದ್ದಾರೆ.

ಶರಣ ಸಾಹಿತ್ಯದ "ಅಯ್ಯಾ ಎಂದಡೆ ಸ್ವರ್ಗ ಎಲವೋ ಎಂದಡೆ ನರಕ" ಎಂಬ ಮಾತುಗಳೆಲ್ಲಾ ವಿಶ್ವಕುಂಟುಂಬಕ್ಕೆ ಮಾದರಿ. 'ಎಲ್ಲಾ ಧರ್ಮಗಳು ಮನುಷ್ಯ ಧರ್ಮವೇ ಶ್ರೇಷ್ಠವೆಂದಿವೆ. ಅರ್ಥೈಸಿಕೊಳ್ಳುವಲ್ಲಿ ಸೋತ ನಾವು ನಮ್ಮದೇ ಶ್ರೇಷ್ಠವೆನ್ನುತ್ತೇವೆ' ಎಂಬ ಕುವೆಂಪುರವರ ಮಾತು ನಮ್ಮನ್ನು ಅನಂತತೆಡೆಗೆ ಕೊಂಡೊಯ್ಯುತ್ತದೆ. ಹಾಗಾಗಿ ವಿಶ್ವಸಂಚಾರಿಯಾಗಬೇಕೆಂದು ಅವರೇ

* ಸಂದರ್ಶಕ ಪ್ರಾಧ್ಯಾಪಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

'ಅನಿಕೇತನ' ಕವನವೊಂದರಲ್ಲಿ ಬಹಳ ಸೊಗಸಾದ ಸಂದೇಶವನ್ನು ಹಂಚುತ್ತಾ:

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ,
ಅನಂತ ತಾನ್ ಅನಂತವಾಗಿ,
ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗು,
ಆಗು ಆಗು ಆಗು
ಓ ನನ್ನ ಚೇತನ, ಆಗು ನೀ ಅನಿಕೇತನ...

ಎಲ್ಲಾ ಬಣ್ಣ, ಹೆಸರು, ಅಂತಸ್ತು, ಮತ-ಧರ್ಮ, ತತ್ತ್ವ ಇತ್ಯಾದಿಗಳ ಗಡಿಗಳ ಮೀರಿ ನಾವು ವಿಶ್ವಕುಟುಂಬಿಗಳಾಗಬೇಕೆಂಬ ಭಾವನೆ ಇಲ್ಲಿ ವ್ಯಕ್ತವಾಗಿದೆ. ಅದಕ್ಕಾಗಿ ಆಕಾಶದಷ್ಟು ವಿಶಾಲವಾಗಿ ಸಮುದ್ರದಷ್ಟು ಆಳವಾಗಿ, ಪ್ರಕೃತಿ ಮತ್ತು ಪ್ರಾಣಿಪಕ್ಷಿಗಳಂತೆ ಮನಸ್ಸನ್ನು ಸ್ವಚ್ಛಂದವಾಗಿರಿಸಿಕೊಳ್ಳಬೇಕು. ಆದ್ದರಿಂದ ಮನುಷ್ಯರಾದ ನಾವು 'ಮನೆ'ಯನ್ನು ಕಟ್ಟುವುದಕ್ಕಿಂತ 'ಮನ'ಗಳನ್ನು ಕಟ್ಟುವ ಅವಶ್ಯಕತೆ ಬಹಳ ಇದೆ.

ಕುಟುಂಬವೆನ್ನುವುದು ವಿಭಿನ್ನ ದೃಷ್ಟಿಕೋನಗಳ ಮತ್ತು ಆದ್ಯತೆಗಳ ಜನರನ್ನು ಒಗ್ಗೂಡಿಸುವ ಶಕ್ತಿ ಪಡೆದಿದೆ. ತಮ್ಮ ತಮ್ಮ ಭಿನ್ನಭಿಪ್ರಾಯಗಳನ್ನು ಮರೆತು ಭಯ-ಭಕ್ತಿ, ಪ್ರೀತಿ, ನಂಬಿಕೆ, ಕಾಳಜಿಯಿಂದ ಬದುಕಲು ಅದು ಭಾವನಾತ್ಮಕವಾಗಿ ಪ್ರೇರೇಪಿಸುತ್ತದೆ. ಮುಖ್ಯವಾಗಿ ಒಂಟಿತನ ತೊಲಗಿಸಿ ಗುಂಪಾಗಿ ವಾಸಿಸುವ ಆಲೋಚನೆಗಳನ್ನು ಹಂಚಿಕೊಳ್ಳುವ ಚಿತ್ರಣವನ್ನು ಕಟ್ಟಿಕೊಡುತ್ತದೆ. ಈಚೆಗೆ ಜಗತ್ತು ಅತ್ಯಂತ ವೇಗವಾದ ಚಲನೆಯಲ್ಲಿರುವುದರಿಂದ, ವಿಜ್ಞಾನ-ತಂತ್ರಜ್ಞಾನದ ಓಟದಲ್ಲಿ ಯಾರಿಗೂ ಸುಲಭವಾಗಿ ಸಮಯ ದೊರೆಯುತ್ತಿಲ್ಲ. ಎಲ್ಲರೂ ಅವರವರ ಕಾಯಕದಲ್ಲಿ ಮುಳುಗಿದ್ದಾರೆಯೇ ಹೊರತು ಕುಟುಂಬದ ಕಾಳಜಿಯನ್ನೇ ಮರೆತಿದ್ದಾರೆ. ಇದರಿಂದ ಹೊರಬರಬೇಕೆಂಬ ಕರೆ ನೀಡಿದವರು ಡಾ. ನಾರಾಯಣಭಟ್ ಎಂಬ ಕವಿಯು

ಎಲ್ಲಾ ಭೇದ ಮರೆತು ಬನ್ನಿರಿ ನಾವು ಸಮಾನ
ಸಾರುವ ಇಂದು ಎಲ್ಲರು ಒಂದು ಇದುವೇ
ನವಗಾನ

....... ಸ್ನೇಹದ ಪ್ರೇಮದ ಭ್ರಾತೃತ್ವದ ಸೆಲೆ
ಹರಿಯಲೀ ಎಂದೆಂದೂ



ಜಗತ್ತಿನಲ್ಲಿ ಕೊಲೆ, ಸುಲಿಗೆ, ಯುದ್ಧ, ಅಮಾನವೀಯ ನಡೆಗಳು ಹೆಚ್ಚಾಗುತ್ತಿವೆ. ಇದಕ್ಕೆಲ್ಲಾ ಕಾರಣ ನಾವೆಲ್ಲರೂ ಒಂದೆಂಬ ಭಾವನೆ ಇಲ್ಲದಿರುವ ದೊಡ್ಡ ಕೊರತೆ. ಮಾನವೀಯ ಅಂತಃಕರಣದ ಮಿಡಿತ ಪ್ರತಿಯೊಬ್ಬರಲ್ಲಿ ಹೊರಹೊಮ್ಮಿದಾಗ ಮನುಷ್ಯತ್ವ ಜಾಗೃತವಾಗುತ್ತದೆ. ಈ ಭಾವನೆಗಳು ಎಲ್ಲೆಡೆ ಮೊಳಗಬೇಕಾಗಿದೆ.

ಇಂದು ಕುಟುಂಬದ ಮಹತ್ವವನ್ನು ಯುವಕ-ಯುವತಿಯರಿಗೆ ತಿಳಿಸಿಕೊಡಬೇಕಾಗಿದೆ. ಬಾಲ್ಯದಲ್ಲಿ ಮಕ್ಕಳಿಗೆ ಸರಿಯಾದ ಸಂಸ್ಕಾರ-ಸಂಸ್ಕೃತಿ(ಹಿರಿ-ಕಿರಿಯರಲ್ಲಿ ಗೌರವಭಾವನೆ) ತಿಳಿಸಿಕೊಡದಿದ್ದರೆ ಅವರು ದಾರಿ ತಪ್ಪುತ್ತಾರೆ. ಕುಟುಂಬವೆಂಬುದು ಇರದಿದ್ದರೆ ಇಡೀ ಜಗತ್ತು ಹೇಗಿರುತ್ತದೆಂದು ಊಹಿಸಲು ಅಸಾಧ್ಯ! ಜಗತ್ತು ಶಾಂತಿ ಸಮಾಧಾನ ಹಾಗೂ ಒಗ್ಗಟ್ಟಿನ ಹಾದಿಯಲ್ಲಿ ಮುನ್ನಡೆಯಬೇಕಾದರೆ ಕುಟುಂಬಕ್ಕೆ ಮಹತ್ವ ಬೇಕೇ ಬೇಕು. ಭಾರತವು ಹಿಂದಿನಿಂದಲೂ ಅವಿಭಕ್ತ ಕುಟುಂಬವನ್ನು ಸಾಕ್ಷೀಕರಿಸುತ್ತಾ ಬಂದಿದೆ. ಅದಕ್ಕೆ ಕವಿ ಚೆನ್ನವೀರ ಕಣವಿಯವರು 'ವಿಶ್ವಕ್ಕೆ ಭಾರತದ ಕಾಣಿಕೆಯೆಂದರೆ ಅದು ಸರ್ವಜನಾಂಗವನ್ನು ಸರ್ವಹೃದಯದಲ್ಲಿ ಸಂಸ್ಕಾರಿಯುತವಾಗಿ ಸಹಕರಿಸುವ ಬೆಳಕ(ಆರತಿಯ)ನ್ನು ಪಸರಿಸಿರುವುದು' ಎಂದು ಹೇಳಿದ್ದಾರೆ.

ದ.ರಾ.ಬೇಂದ್ರೆಯವರು ಹೇಳಿದಂತೆ:

ಹುಸಿನಗುತ ಬಂದೇವ ನಸುನಗುತ
ಬಾಳೋಣ
ತುಸು ನಗುತಾ ತೆರಳೋಣ
ಬಡನೂರು ವರುಷಾನ ಹರುಷಾದಿ
ಕಳೆಯೋಣ
ಯಾಕಾರೆ ಕೆರಳೋಣ

ಯಾರಿಗೂ ಹೇಳದೇ ಕೇಳದೇ ಬಂದಿರುವ ಮನುಷ್ಯ ಜನ್ಮದ ಪುಣ್ಯವನ್ನು ಸತ್ ಚಿಂತನೆಯಲ್ಲಿ ಕಳೆಯಬೇಕೇ ಹೊರತು ಜಗಳ ಜಂಜಾಟದಿಂದಲ್ಲ. ಅದನ್ನೇ ಬೇಂದ್ರೆಯವರು ಒಬ್ಬರಿಗೊಬ್ಬರು ನಗುನಗುತಾ ಇದ್ದಾಗ ಕೆರಳುವ ಅವಕಾಶಗಳೇ ಇರುವುದಿಲ್ಲ. ಆಗ ಕುಟುಂಬಗಳೆಲ್ಲಾ ಆತ್ಮವಿಶ್ವಾಸದಿಂದ ಹೊರಹೊಮ್ಮಿ ಚೈತನ್ಯದಾಯಕವಾಗುತ್ತವೆ ಎಂದಿದ್ದಾರೆ. ಹಾಗೆಯೇ ಗೋಪಾಲಕೃಷ್ಣ ಅಡಿಗರು ಕವನವೊಂದರಲ್ಲಿ:

ನಾವೆಲ್ಲರು ಒಂದೇ ಜಾತಿ, ಒಂದೇ ಮತ,
ಒಂದೇ ಕುಲ
ನಾವು ಮನುಜರು
ನರರ ನಡುವಿನಡ್ಡ ಗೋಡೆಗಳನು
ಕುಟ್ಟಿ ಕೆಡುಹುವೆವು
ನಾವು ವಿಲಯ ರುದ್ರರು

ಜಗತ್ತಿನ ಮನುಷ್ಯ ಕುಲವೆಂಬುದು ಒಂದೇ ಇರುವಾಗ ನಡುವಿರುವ ಅಂತಸ್ತು, ಅಧಿಕಾರವೆಂಬ ಅಡ್ಡಗೋಡೆಗಳು ಬೇಕೆ? ಪ್ರೀತಿ-ವಿಶ್ವಾಸದ ಭಾವನೆಯ ಮೂಲಕ ಕೈಕೈಗಳ ಕುಲುಕಿಸಿ, ಎದೆಗೆದೆಯನು ಹಾಯಿಸಿ ಭೇದವೆಲ್ಲ ಸುಟ್ಟು ಹಾಕಬೇಕೆಂಬುದು ಅಡಿಗರ ಕರೆ. ಡಾ. ಜಿ.ಎಸ್. ಶಿವರುದ್ರಪ್ಪನವರು ಇದೇ ಚಿಂತನೆಯನ್ನು ಇನ್ನಷ್ಟು ಸ್ಪಷ್ಟೀಕರಿಸುವ ನಿಟ್ಟಿನಲ್ಲಿ ತಮ್ಮ ಕವನದಲ್ಲಿ ದೃಷ್ಟಾಂತದ ಮೂಲಕ

ಹಲವು ಕೊಂಬೆಗಳ ಚಾಚಿಕೊಂಡರು
ಮರಕೆ ಬುಡ ಒಂದೇ
ಸಾವಿರ ನದಿಗಳು ಹೇಗೆ ಹರಿದರೂ
ಕೂಡುವ ಕಡಲೊಂದೇ
ನಡೆ ನುಡಿ ಭೇದಗಳೆಷ್ಟೇ ಇದ್ದರೂ
ಬದುಕುವ ಜನ ಒಂದೇ

ಎಂದು ವಿವರಿಸಿದ್ದಾರೆ. ಅಂದರೆ ಮರವೊಂದು ಬೆಳೆಯುತ್ತಾ ಹಲವಾರು ರೆಂಬೆಕೊಂಬೆಗಳಿಂದೊಡಗೂಡಿದ್ದರೂ ಅದರ ಬೇರು ಮಾತ್ರ ಒಂದೆಯಾಗಿರುತ್ತದೆ. ನೂರಾರು ನದಿಗಳು ನಾನಾ ಕಡೆಗಳಲ್ಲಿ ಹರಿದು ಕೊನೆಗೆ ಸಮುದ್ರದಲ್ಲಿ ಲೀನವಾಗುವಂತೆ, ದೇಶ ದೇಶಗಳ ಜನರಲ್ಲಿ ಭಾಷೆ-ಬಣ್ಣ ಬೇರೆಯಾಗಿದ್ದರೂ ಮಿಡಿವ ಭಾವನೆಯೊಂದೆ.

ಹೀಗೆ ಅನೇಕ ಕವಿಗಳು ತಮ್ಮ ತಮ್ಮ ಕವನಗಳ ಮೂಲಕ ವಿವಿಧ ರೀತಿಯಲ್ಲಿ ವಿಶ್ವಕುಟುಂಬದ ಚಿಂತನೆಯನ್ನು ಅನಾವರಣಗೊಳಿಸಿದ್ದಾರೆ.

# 'ಮನದ ಮಾತು'



ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 29.10.2023 ರಂದು ಮಾಡಿದ ಮನ್ ಕಿ ಬಾತ್' – 106 ನೇ ಸಂಚಿಕೆಯ ಕನ್ನಡ ಅವತರಣಿಕೆ.

ನನ್ನ ಪ್ರೀತಿಯ ಪರಿವಾರದವರೆ, ನಮಸ್ಕಾರ. 'ಮನದ ಮಾತಿಗೆ' ನಿಮಗೆ ಮತ್ತೊಮ್ಮೆ ಸ್ವಾಗತ. ಸ್ನೇಹಿತರೇ, ಪ್ರತಿ ಬಾರಿಯಂತೆ, ಈ ಬಾರಿಯೂ, ನಮ್ಮ ಹಬ್ಬಗಳಲ್ಲಿ, ನಮ್ಮ ಆದ್ಯತೆಯು 'ವೋಕಲ್ ಫಾರ್ ಲೋಕಲ್' ಗಾಗಿ ಆಗಿರಬೇಕು ಮತ್ತು ನಾವೆಲ್ಲರೂ ಒಗ್ಗೂಡಿ ಆ ಕನಸನ್ನು ನನಸಾಗಿಸೋಣ. ಅಂತಹ ಉತ್ಪನ್ನಗಳನ್ನು ಖರೀದಿಸುವಾಗ, ನಾವು ನಮ್ಮ ದೇಶದ ಹೆಮ್ಮೆಯಾದ ಯುಪಿಐ ಡಿಜಿಟಲ್ ಪಾವತಿ ವ್ಯವಸ್ಥೆಯ ಮೂಲಕ ಪಾವತಿ ಮಾಡುವುದನ್ನು ಮರೆಯಬೇಡಿ.

ನನ್ನ ಪ್ರೀತಿಯ ದೇಶವಾಸಿಗಳೇ, ಅಕ್ಟೋಬರ್ 31 ನಮ್ಮೆಲ್ಲರಿಗೂ ಬಹಳ ವಿಶೇಷವಾದ ದಿನವಾಗಿದೆ. ಈ ದಿನ ನಾವು ನಮ್ಮ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮಜಯಂತಿಯನ್ನು ಆಚರಿಸುತ್ತೇವೆ. ನಾವು, ಭಾರತೀಯರು ಅವರನ್ನು ಅನೇಕ ಕಾರಣಗಳಿಗಾಗಿ ನೆನಪಿಸಿಕೊಳ್ಳುತ್ತೇವೆ ಮತ್ತು ಶ್ರದ್ಧೆಯಿಂದ ನಮಿಸುತ್ತೇವೆ. ದೇಶದ 580 ಕ್ಕೂ ಹೆಚ್ಚು ರಾಜಪ್ರಭುತ್ವ ಹೊಂದಿದ ರಾಜ್ಯಗಳನ್ನು ಒಗ್ಗೂಡಿಸುವಲ್ಲಿ ಅವರ ಅನುಪಮ ಪಾತ್ರ ಅವರನ್ನು ನೆನೆಯಲು ಬಹುದೊಡ್ಡ ಕಾರಣವಾಗಿದೆ. ಇತ್ತೀಚಿಗೆ ನಾನು ದೇಶದ ಪ್ರತಿಯೊಂದು ಹಳ್ಳಿ ಮತ್ತು ಪ್ರತಿ ಮನೆಯಿಂದ ಮಣ್ಣು ಸಂಗ್ರಹಿಸಲು ವಿನಂತಿಸಿದ್ದು ನಿಮಗೆ ನೆನಪಿರಬಹುದು. ಪ್ರತಿ ಮನೆಯಿಂದ ಮಣ್ಣನ್ನು ಸಂಗ್ರಹಿಸಿ ನಂತರ ಕಲಶದಲ್ಲಿ ಇರಿಸಲಾಯಿತು, ನಂತರ ಅಮೃತ ಕಲಶ ಯಾತ್ರೆ ಆರಂಭಿಸಲಾಯಿತು. ದೇಶದ ಮೂಲೆ ಮೂಲೆಯಿಂದ ಸಂಗ್ರಹಿಸಿದ ಈ ಮಣ್ಣು, ಸಾವಿರಾರು ಅಮೃತ ಕಲಶ ಯಾತ್ರೆಗಳು ಈಗ ದೆಹಲಿ ತಲುಪುತ್ತಿವೆ. ಇಲ್ಲಿ ದೆಹಲಿಯಲ್ಲಿ ಆ ಮಣ್ಣನ್ನು ಬೃಹತ್ ಭಾರತ ಕಲಶದಲ್ಲಿ ಹಾಕಲಾಗುತ್ತದೆ ಮತ್ತು ಈ ಪವಿತ್ರ ಮಣ್ಣಿನಿಂದ ದೆಹಲಿಯಲ್ಲಿ ಅಮೃತ ವಾಟಿಕಾ' ನಿರ್ಮಾಣವಾಗಲಿದೆ. ಇದು ದೇಶದ ರಾಜಧಾನಿಯ ಹೃದಯದಲ್ಲಿ ಅಮೃತ್ ಮಹೋತ್ಸವದ ಭವ್ಯ ಪರಂಪರೆಯ ರೂಪದಲ್ಲಿ ಉಳಿಯಲಿದೆ. ದೇಶಾದ್ಯಂತ ಕಳೆದ ಎರಡೂವರೆ ವರ್ಷಗಳಿಂದ ನಡೆಯುತ್ತಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವ, ಅಕ್ಟೋಬರ್ 31ರಂದು ಮುಕ್ತಾಯಗೊಳ್ಳಲಿದೆ.



ಸ್ನೇಹಿತರೇ, ಅಕ್ಟೋಬರ್ 31 ರಂದು, ಒಂದು ದೊಡ್ಡ ರಾಷ್ಟ್ರವ್ಯಾಪಿ ಸಂಘಟನೆಗೆ ಅಡಿಪಾಯ ಹಾಕಲಾಗುತ್ತಿದೆ ಮತ್ತು ಅದು ಕೂಡ ಸರ್ದಾರ್ ಸಾಹೇಬ್ ರ ಜನ್ಮಜಯಂತಿಯ ದಿನದಂದು. ಈ ಸಂಘಟನೆಯ ಹೆಸರು – ನನ್ನ ಯುವ ಭಾರತ, ಅಂದರೆ MYBharat. MYBharat ಸಂಘಟನೆಯು ಭಾರತದ ಯುವಕರಿಗೆ ವಿವಿಧ ರಾಷ್ಟ್ರ ನಿರ್ಮಾಣ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸಲು ಅವಕಾಶವನ್ನು ಒದಗಿಸುತ್ತದೆ. ಇದು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ಭಾರತದ ಯುವ ಶಕ್ತಿಯನ್ನು ಒಗ್ಗೂಡಿಸುವ ವಿಶಿಷ್ಟ ಮಾರ್ಗವಾಗಿದೆ. ನನ್ನ ದೇಶದ ಎಲ್ಲಾ ಪುತ್ರರೇ ಮತ್ತು ಪುತ್ರಿಯರೇ, ನಿಮ್ಮೆಲ್ಲರಿಗೂ ನಾನು ನೊಂದಾಯಿಸಿಕೊಳ್ಳುವಂತೆ ಆಗ್ರಹಿಸುತ್ತೇನೆ. ಅಕ್ಟೋಬರ್ 31 ರಂದು ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಪುಣ್ಯತಿಥಿಯೂ ಇದೆ. ಅವರಿಗೂ ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

ನನ್ನ ಪ್ರೀತಿಯ ದೇಶಬಾಂಧವರೇ, ಹಬ್ಬಗಳ ಈ ಋತುವಿನಲ್ಲಿ, ದೇಶದಲ್ಲಿ ಕ್ರೀಡೆಗಳ ಪತಾಕೆಯೂ ಹಾರಾಡುತ್ತಿದೆ. ಇತ್ತೀಚಿಗಷ್ಟೇ ಏಶಿಯನ್ ಗೇಮ್ಸ್ ನಂತರ ಪ್ಯಾರಾ ಏಶಿಯನ್ ಗೇಮ್ಸ್‌ನಲ್ಲಿ ಕೂಡಾ ಭಾರತದ ಕ್ರೀಡಾಪಟುಗಳು ಅದ್ಭುತ ಯಶಸ್ಸನ್ನು ಗಳಿಸಿದ್ದಾರೆ. ಈ ಪಂದ್ಯಾವಳಿಗಳಲ್ಲಿ ಭಾರತ 111 ಪದಕಗಳನ್ನು ಗೆಲ್ಲುವ ಮೂಲಕ ಹೊಸ ಇತಿಹಾಸ ರಚಿಸಿದೆ. ಪ್ಯಾರಾ ಏಶಿಯನ್ ಗೇಮ್ಸ್‌ನಲ್ಲಿ ಪಾಲ್ಗೊಂಡಿದ್ದ ಎಲ್ಲಾ ಕ್ರೀಡಾಪಟುಗಳಿಗೂ ನಾನು ಅನೇಕಾನೇಕ ಅಭಿನಂದನೆ ಸಲ್ಲಿಸುತ್ತೇನೆ.

ಸ್ನೇಹಿತರೇ, ನಿಮ್ಮ ಗಮನವನ್ನು ವಿಶೇಷ ಒಲಿಂಪಿಕ್ಸ್ ವಿಶ್ವ ಬೇಸಿಗೆ ಕ್ರೀಡೆ ಕೂಟದತ್ತ ಕೂಡಾ ಕೊಂಡೊಯ್ಯಲು ನಾನು ಬಯಸುತ್ತೇನೆ. ಇದನ್ನು ಬರ್ಲಿನ್ ನಲ್ಲಿ ಆಯೋಜಿಸಲಾಗಿತ್ತು. ಈ ಸ್ಪರ್ಧೆಯು ನಮ್ಮ ಬೌದ್ಧಿಕವಾಗಿ ವಿಕಲಚೇತನರಾಗಿರುವ ಕ್ರೀಡಾಪಟುಗಳ ಅದ್ಭುತ ಸಾಮರ್ಥ್ಯವನ್ನು ಪ್ರದರ್ಶಿಸಿತು.ಈ ಸ್ಪರ್ಧೆಗಳಲ್ಲಿ ಭಾರತೀಯ ತಂಡವು 75 ಚಿನ್ನದ ಪದಕಗಳೂ ಸೇರಿದಂತೆ 200 ಪದಕಗಳನ್ನು ತನ್ನದಾಗಿಸಿಕೊಂಡಿತು.. ಈ ಪದಕ ವಿಜೇತರ ಜೀವನ ಪಯಣ ಬಹಳ ಸ್ಫೂರ್ತಿದಾಯಕವಾಗಿದೆ.

ಸ್ನೇಹಿತರೇ, ಸ್ವಚ್ಛ ಭಾರತ ಮತ್ತು ವೇಸ್ಟ್ ಟು ವೆಲ್ತ್ ವಿಷಯ ಬಂದಾಗಲೆಲ್ಲಾ, ದೇಶದ ಮೂಲೆ ಮೂಲೆಗಳಿಂದ ನಮಗೆ ಅಸಂಖ್ಯಾತ ಉದಾಹರಣೆಗಳು ಕಾಣಸಿಗುತ್ತವೆ. ನಿಮ್ಮ ಮನೆಗಳನ್ನು ನೀವು ಯಾವರೀತಿ ಸ್ವಚ್ಛವಾಗಿ ಇರಿಸಿಕೊಳ್ಳುತ್ತೀರೋ ಅದೇ ರೀತಿ ನೀವು ವಾಸಿಸುವ ಪ್ರದೇಶ ಮತ್ತು ನಗರವನ್ನು ಸ್ವಚ್ಛವಾಗಿರಿಸಿ. ಮುಂಬರುವ ಹಬ್ಬಗಳಿಗಾಗಿ ನಿಮ್ಮೆಲ್ಲರಿಗೂ ಮತ್ತೊಮ್ಮೆ ಅನೇಕಾನೇಕ ಶುಭ ಹಾರೈಕೆಗಳು. ಅನೇಕಾನೇಕ ಧನ್ಯವಾದ.

**ಕೃಪೆ : ಆಕಾಶವಾಣಿ ಬೆಂಗಳೂರು**

# ಭಾರತದ ಅಥ್ಲೀಟ್‌ಗಳ ಸಾಧನೆ – ಅಭಿನಂದನೆ

ಚೀನಾದ ಹ್ಯಾಂಗಜುನಲ್ಲಿ ಅಕ್ಟೋಬರ್ 22ರಿಂದ 28ರ ವರೆಗೆ ನಡೆದ ಪ್ಯಾರಾ ಏಶಿಯುನ್ ಕ್ರೀಡಾಕೂಟ (2022) ದಲ್ಲಿ ಭಾರತ ಇದೇ ಮೊದಲ ಬಾರಿ ಒಟ್ಟು ನೂರಕ್ಕೂ ಹೆಚ್ಚು ಪದಕಗಳನ್ನು ಜಯಿಸಿ ಸಾಧನೆ ಮಾಡಿದೆ. ಭಾರತದ ಕ್ರೀಡಾ ಪಟುಗಳು ಪ್ಯಾರಾ ಏಶಿಯನ್ ಕ್ರೀಡಾಕೂಟದಲ್ಲಿ 111 ಪದಕ ಗಳಿಸಿದ್ದು ಇದರಲ್ಲಿ 29 ಚಿನ್ನ, 31 ಬೆಳ್ಳಿ, 51 ಕಂಚಿನ ಪದಕಗಳು ಸೇರಿವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನವೆಂಬರ್ ಒಂದರಂದು ನವದೆಹಲಿಯುಲ್ಲಿ ಅಥ್ಲೀಟ್‌ಗಳನ್ನು ಉದ್ದೇಶಿಸಿ ಮಾತನಾಡಿ ಅವರನ್ನು ಅಭಿನಂದಿಸಿದರು.













Yojana(Kannada) November 2023 Date of Publication 3rd November 2023 Date of Posting 10th/15th November 2023 ISSN 0971-8737
“Registered" Reg.No.RNP/KA/BGS/2269/2022-2024 Total No.of Pages : 52+4 Cover Pages Regd.No. RNI 43034/1985
"Licensed to Post without Pre-payment" License No. PMG BG/WPP/388/2022-2024 YOJANA Kannada Monthly Posted at Bengaluru PSO BG-560026

# ಸರ್ದಾರ್ ಪಟೇಲ್ ಕುರಿತಾದ ಪುಸ್ತಕಗಳು






















ಖರೀದಿಸಲು ಸಂಪರ್ಕಿಸಬೇಕಾದ ವಿಳಾಸ

## ಯೋಜನಾ – ಕನ್ನಡ

ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್' ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560 034.
ದೂರವಾಣಿ – 080– 25537244

ಪ್ರಕಾಶನ ವಿಭಾಗದ 'ಏಕ ಭಾರತ, ಶ್ರೇಷ್ಠ ಭಾರತ' – 'ಒಂದೇ ಭಾರತ, ಶ್ರೇಷ್ಠ ಭಾರತ'
ಸರಣಿಯ ಕೆಲವು ಕನ್ನಡ ಪುಸ್ತಕಗಳು















Printed & Published by **Anupama Bhatnagar,** Director General, Publications Division, Ministry of Information & Broadcasting
Published at Publications Division 1st Floor, 'F' Wing, Kendriya Sadana, Koramangala, Bengaluru-560 034. Ph : 080 2553 7244
Designed & Printed at Omkar Offset Printers, No. 3/3, 1st Main Road, New Tharagupet, Bengaluru - 560 002. Ph : 080 2670 8186
Chief Editior: Manogyan Rani Pal, Editor : Yashwant Shehnai